ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಜುಲೈ 2, 2008 ರೂ. 12/-



ಪದ್ಮಪ್ರಿಯ ದುರಂತ

ಗಂಡ ಪಿಶಾಚಿ!
ಗೆಳೆಯ ದ್ರೋಹಿ!

ಕ್ಕಮಗಳೂರು : ಆದಿಚುಂಚನಗಿರಿ
ಲೇಜಿನಲ್ಲಿ ಮತ್ತೊಂದು ಕೊಲೆ

ಯಡ್ಡಿ ದುರಾಡಳಿತ
ರೈತ ಶವಗಳೇ ಬೆಳೆ

ವೇಶ್ಯಾವಾಟಿಕೆ ದಂಧೆ

ತಿರುಪತಿಯಲ್ಲಿ
ಡ್ಸ್ ಭೂತ!



ಕಾರ್ಟೂನ್ ಕಾರ್ನರ್



Quote - Unquote

"ಸಮಾಜದ ಪ್ರತಿಬಿಂಬ ಮಾಧ್ಯಮ. ಹಾಗೆಯೇ ಪತ್ರಿಕೋದ್ಯಮದ ಗುಣಮಟ್ಟ ಕುಸಿದಷ್ಟು ಅವುಗಳ ಪ್ರಸಾರ/TRP ಸಂಖ್ಯೆ ಹೆಚ್ಚಾಗುತ್ತದೆ. ಈ ತರ್ಕವನ್ನು ಅರ್ಥಮಾಡಿಕೊಳ್ಳದವರು ಯಾವುದಾದರೂ ನಿರ್ಗತಿಕ ಪ್ರದೇಶಕ್ಕೆ ಹೋಗಿ ಅಲ್ಲಿ ಕರಪತ್ರಗಳನ್ನು ಹಂಚಲಿ. ಇವತ್ತು ಅವಿವೇಕಿಗಳೇ ಬಹುಸಂಖ್ಯಾತರಾಗಿದ್ದು, ಅವರ ಸಂಖ್ಯಾಬಲವೇ ಮಾಧ್ಯಮಗಳಿಗೆ ಮುಖ್ಯವಾಗಿದೆ."

-ಟಿವಿ ಚಾನಲ್ ಒಂದರ ಮಾಲೀಕ



"ಪ್ರತಿಬಾರಿ ಯಾರೋ ಆತ್ಮಹತ್ಯೆ ಮಾಡಿಕೊಂಡರೆ ಗೃಹಮಂತ್ರಿಗಳು ರಾಜೀನಾಮೆ ಕೊಡಲಾಗುತ್ತದೆಯೇ?"

-ಗೃಹ ಸಚಿವ ಡಾ.ವಿ.ಎಸ್. ಆಚಾರ್ಯ. ಪದ್ಮಪ್ರಿಯಾಳ ಸಾವಿಗೆ ಸಂಬಂಧಿಸಿದಂತೆ ರಾಜೀನಾಮೆ ನೀಡಬೇಕೆಂಬ ಒತ್ತಾಯಕ್ಕೆ ಪ್ರತಿಕ್ರಿಯೆಯಾಗಿ

"ರಾಜೇಶ್ ತಲ್ವಾರ್ ತನ್ನ ಮಗಳು ಆರುಷಿಯನ್ನು ಕೊಲ್ಲಲಿಲ್ಲ ಎಂಬುದು ಸಿಬಿಐ ತನಿಖಾಧಿಕಾರಿಗಳಿಗೆ ಸ್ಪಷ್ಟವಾಗಿದೆ. ಆದರೆ ಆರುಷಿ ಮತ್ತು ಅವರ ಮನೆಯ ಕೆಲಸದಾಳು ಹೇಮರಾಜ್‌ನನ್ನು ಕೊಂದ ನಿಜವಾದ ಕೊಲೆಗಾರ ಸಿಗುವವರೆಗೂ ಪೊಲೀಸರು ರಾಜೇಶ್ ತಲ್ವಾರ್‌ರನ್ನು ಬಿಡುಗಡೆ ಮಾಡಲಾಗುವುದಿಲ್ಲವಂತೆ"

-ಒಂದು ಪತ್ರಿಕಾ ವರದಿ

"ಬಡತನ ಮತ್ತು ಪರಿಸರ ರಕ್ಷಣೆ ಬೇರೆ ಬೇರೆ ಅಲ್ಲ. ದೇಶವೊಂದರ ನೈಸರ್ಗಿಕ ಸಂಪತ್ತನ್ನು ರಕ್ಷಿಸದಿದ್ದರೆ, ಅಲ್ಲಿನ ಬಡತನವನ್ನೂ ನಿರ್ಮೂಲನೆ ಮಾಡಲಾಗುವುದಿಲ್ಲ, ಅಷ್ಟೇ ಅಲ್ಲ, ಅಲ್ಲಿನ ಬಡತನ ಇನ್ನೂ ಹೆಚ್ಚುತ್ತದೆ. ಆದ್ದರಿಂದ ಒಂದನ್ನು ನಿರ್ಲಕ್ಷಿಸಿ ಇನ್ನೊಂದನ್ನು ರಕ್ಷಿಸುತ್ತೇವೆ ಅನ್ನುವಂತಿಲ್ಲ."


-ಲೆಸ್ಟರ್ ಬಿ. ಬ್ರೌನ್, ಅಮೆರಿಕದ ಪರಿಸರ ತಜ್ಞ



"ಎಷ್ಟು ಜನ ಭಾರತೀಯರು ತೂತುಗಳಿರುವ ಚಡ್ಡಿಗಳನ್ನು ಧರಿಸುತ್ತಾರೆ?"

-ಹಿಂದಿ ನಟ ಸಲ್ಮಾನ್ ಖಾನ್ ನಿರೂಪಿಸುವ ಕ್ವಿಜ್ ಶೋನಲ್ಲಿ ಕೇಳಲಾದ ಪ್ರಶ್ನೆ

"ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ನೆಲೆಸಿರುವ NRIಗಳು ನರೇಂದ್ರ ಮೋದಿಯನ್ನು ಬೆಂಬಲಿಸುತ್ತಾರೆ, ಹಣ ನೀಡುತ್ತಾರೆ. ಅದು ಪ್ರಾಯಶ್ಚಿತ್ತದ ಹಣ. ಅವರ ಮಕ್ಕಳು ಹೆಚ್ಚು ಬಾರಿ ಮ್ಯಾಕ್ ಡೊನಾಲ್ಡ್ ಮತ್ತು ಕೆಎಫ್‌ಸಿ ಹೋಟೆಲ್‌ಗಳಿಗೆ ಹೋದಷ್ಟು ಅಲ್ಲಿನ ತಂದೆತಾಯಿಗಳಿಗೆ ಹಿಂದೂ ಕಾರ್ಯಕ್ರಮಗಳಿಗೆ ಹಣ ನೀಡಬೇಕೆಂಬ ಬಯಕೆ ಹೆಚ್ಚಾಗುತ್ತದೆ"



"ತೀವ್ರ ಟೀಕೆಯನ್ನೂ ಸಹಿಸದ ಮಧ್ಯಮ ವರ್ಗ ನಿಜವಾಗಲೂ ಮಧ್ಯಮ ವರ್ಗ ಅಲ್ಲವೇ ಅಲ್ಲ, ಅದು ಮಧ್ಯಮ ವರ್ಗದ ಆದಾಯವನ್ನು ಪಡೆಯುತ್ತಿರುವುದಷ್ಟೇ. ನಮ್ಮ ಪ್ರಜಾಸತ್ತಾತ್ಮಕ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕಿದ್ದರೆ ನಾವು ನಮ್ಮ ಮಧ್ಯಮ ವರ್ಗವನ್ನು ತೀವ್ರ ವಿಮರ್ಶೆಗೆ ಒಳಪಡಿಸಬೇಕಿದೆ. ಯಾಕೆಂದರೆ ಮೀನು ಕೊಳೆಯಲಾರಂಭಿಸುವುದು ಮೊದಲು ತನ್ನ ತಲೆಯಿಂದಲೇ"

-ಅಶೀಶ್ ನಂದಿ, ಖ್ಯಾತ ರಾಜಕೀಯ ಮನೋವಿಜ್ಞಾನಿ.

ಮೊಂಬತ್ತಿ ಬೆಳಕಿನಲ್ಲಿ ಪದ್ಮಪ್ರಿಯಾಳನ್ನು ನೆನೆದು.....

ಅವತ್ತು ಸಂಜೆ ಅಮ್ಮ ಮತ್ತು ನಾನು ಇಬ್ಬರೂ ಟಿವಿ ಮುಂದೆ ಕೂತು ನ್ಯೂಸ್ ನೋಡುತ್ತಿದ್ದೆವು. ಉಡುಪಿ ಶಾಸಕನ ಪತ್ನಿ ಪದ್ಮಪ್ರಿಯಾಳ ಅಂತ್ಯ ಸಂಸ್ಕಾರದ ದೃಶ್ಯಗಳು ಬಿತ್ತರಗೊಳ್ಳುತ್ತಿದ್ದವು. ಶಾಸಕ ರಘುಪತಿ ಭಟ್ಟ ಮತ್ತವರ ಇಬ್ಬರು ಪುತ್ರರು ಪದ್ಮಪ್ರಿಯಾಳ ಚಿತೆಗೆ ಬೆಂಕಿ ಒಡ್ಡುತ್ತಿದ್ದರು. ಆ ಪುಟ್ಟ ಬಾಲಕರನ್ನು ನೋಡಿ ಮರುಗಿದ ಅಮ್ಮ "ಛೆ ಪಾಪ. ಆಕೆ ಹೀಗೆ ಆತ್ಮಹತ್ಯೆ ಮಾಡಿಕೊಂಡು ಮಕ್ಕಳನ್ನು ತಬ್ಬಲಿಗಳನ್ನಾಗಿಸಬಾರದಿತ್ತು" ಅಂದರು.

"ಮಮ್ಮಿ, ಆ ಪುಟ್ಟಮಕ್ಕಳನ್ನು ನೋಡಿದರೆ ಪಾಪ ಅನ್ನಿಸುತ್ತೆ. ನಿಜ, ಆದರೆ ಅದರಷ್ಟೇ ದೊಡ್ಡ ದುರಂತ ಏನು ಗೊತ್ತಾ?" ಅಂದೆ.

"ಏನು" ಎಂಬಂತೆ ಅಮ್ಮ ನನ್ನತ್ತ ನೋಡಿದರು.

"ತನ್ನ ಬದುಕಿನ ಯಾವ ಅಧ್ಯಾಯದಿಂದ ಆಕೆ ಬಿಡುಗಡೆ ಪಡೆಯ ಬೇಕೆಂದಿದ್ದಳೋ, ಯಾವ ಸಂಬಂಧದಿಂದ ಕಳಚಿಕೊಂಡು ಓಡಿಹೋಗಿದ್ದಳೋ, ಯಾವ ಬೇರುಗಳೊಂದಿಗಿನ ತನ್ನ ನಂಟನ್ನು ತಿರಸ್ಕರಿಸಿದ್ದಳೋ, ಅದೇ ಅಧ್ಯಾಯ, ಅದೇ ಸಂಬಂಧ, ಅದೇ ಬೇರುಗಳಿಗೆ ಆಕೆ ಹಿಂದಿರುಗಿದ್ದಾಳೆ ಶವವಾಗಿ. ಈಗ ಆಕೆ ಯಾವ ಅಭಿಪ್ರಾಯ, ಬಂಡಾಯ, ಪ್ರತಿರೋಧವನ್ನೂ ವ್ಯಕ್ತಪಡಿಸುವ ಸ್ಥಿತಿಯಲ್ಲಿಲ್ಲ, ಆಕೆ ಬದುಕಿದಾಗ ಅವಳನ್ನು ಬಂಧನಕ್ಕೊಳಪಡಿಸಿದ ಜನರೇ ಈಗ ಅವಳ ಅಂತ್ಯಸಂಸ್ಕಾರಗಳನ್ನು ನಡೆಸಿದ್ದಾರೆ. ಅದರರ್ಥ ಏನು ಗೊತ್ತಾ?" ಅಂದೆ.

"ನಿನ್ನ ಈ ತರ್ಕಗಳನ್ನೆಲ್ಲಾ ಶುರು ಮಾಡಿದೆಯಾ? ನಾನು ಏನನ್ನೂ ಹೇಳಬೇಡ ಅಂದರೂ ನೀನು ಹೇಳೇ ಹೇಳ್ತಿಯಾ ಅಂತ ಗೊತ್ತು. ಹೋಗಲಿ, ಏನನ್ನು ಹೇಳಬೇಕು ಅಂತಿದ್ದೀಯೋ ಅದನ್ನು ಹೇಳು."

"ಅರ್ಥ ಇಷ್ಟೆ. ಪದ್ಮಪ್ರಿಯಾಗೆ ಈ ಭೂಮಿ ಮೇಲಿನ ಬದುಕು ಸ್ವರ್ಗವಾಗಿರಲಿಲ್ಲ, ಹಾಗೆಯೇ ಆಕೆಗೆ ಸಾವಿನ ನಂತರವೂ ಸ್ವರ್ಗ ಸಿಗುವುದಿಲ್ಲ."

"ಹಾಗಾದ್ರೆ ನಿನ್ನ ಪ್ರಕಾರ ಆಕೆಯ ಗಂಡನಿದ್ದರೂ ಅವಳ ಅಂತ್ಯ ಸಂಸ್ಕಾರಗಳನ್ನು ಬೇರೆ ಯಾರೊ ಅಪರಿಚಿತರು ಮಾಡಬೇಕಿತ್ತಾ? ಆಕೆ ಅನಾಥ ಶವದಂತೆ ಹೊರಟುಹೋಗಬೇಕಿತ್ತಾ?" ಎಂದು ಸ್ವಲ್ಪ ರೇಗಿದರು ಅಮ್ಮ.




"ಯಾಕೆ ಹಾಗಾಗಬಾರದಿತ್ತು? ಕೋಪ ಮಾಡಿಕೋಬೇಡ. ಸ್ವಲ್ಪ ಯೋಚಿಸು. ಈಗಾಗಲೇ ಪೇಪರ್ ಮತ್ತು ಟೀವಿಗಳಲ್ಲಿ ಬಂದಿರೋದೆಲ್ಲದರ ಅರ್ಥ ಏನು? ಪದ್ಮಪ್ರಿಯಾಗೆ ತನ್ನನ್ನು ನಿರ್ಲಕ್ಷಿಸುತ್ತಿದ್ದ ಗಂಡ, ಆತನ ಅರಮನೆಯ ಹಂಗು, ತನ್ನ ಆಶಯಗಳನ್ನು ಈಡೇರಿಸಿಕೊಳ್ಳಲು ಬಿಡದ ಕಪಟ ಸಂಪ್ರದಾಯ, ಸ್ವಾತಂತ್ರ್ಯ ನೀಡದ ಕೃತಕ ಘನತೆ, ತಾನು ಮಹಿಳೆಯಾಗಿದ್ದರಿಂದ ಹಲವು ನಿಯಮಗಳನ್ನು ದಾಟಬಾರದೆಂದು ಸಾಮಾಜಿಕ ನಿರ್ಬಂಧ, ಇದ್ಯಾವುದೂ ಆಕೆಗೆ ಬೇಕಿರಲಿಲ್ಲ. ಆದ್ದರಿಂದಲೇ ಆಕೆಗೆ ಚೆನ್ನಾಗಿ ಗೊತ್ತಿದ್ದೇ ಅದನ್ನೆಲ್ಲ ತೊರೆದಿದ್ದಳು. ಇದೆಲ್ಲದರ ಬದಲಾಗಿ ಅನಾಮಿಕಳಾಗಿ, ತನ್ನ ಕಾಲ ಮೇಲೆ ನಿಂತು ತನ್ನ ಬದುಕನ್ನು ತಾನೇ ರೂಪಿಸಿಕೊಳ್ಳಲು ಬಯಸಿದಳು. ಆಕೆ ಬದುಕಿದ್ದಾಗ ಅವಳ ಆಶಯಗಳು ಈಡೇರದಿದ್ದರೂ, ಸಾವಿನ ನಂತರವಾದರೂ ಅವಳ ಆಶಯಗಳಿಗೆ ಸ್ವಲ್ಪ ಗೌರವ ಕೊಡಬೇಕಿತ್ತಲ್ಲವೇ?"

"ನಿನ್ನ ಮಾತಿನ ಅರ್ಥ?" ಅಂದರು ಅಮ್ಮ.

"ಇಷ್ಟೇ. ಅವಳ ಶವಕ್ಕಾದರೂ ಈ ಗಂಡ, ಮನೆತನ, ಪ್ರತಿಷ್ಠೆ ಸಂಪ್ರದಾಯ, ಸಾಮಾಜಿಕ ಮನ್ನಣೆ, ಇದ್ಯಾವುದರ ಲೇಪವಿಲ್ಲದೆ ಅಂತ್ಯ ಸಂಸ್ಕಾರಗಳು ನಡೆದಿದ್ದರೆ ಆಕೆಯ ಸಾವಿಗಾದರೂ ಒಂದು ಅರ್ಥ ಬರುತ್ತಿತ್ತು...".

ನಾನು ಹೇಳಿದ್ದಕ್ಕೆ ಹೇಗೆ ಪ್ರತಿಕ್ರಿಯಿಸಬೇಕೆಂದು ಗೊತ್ತಾಗದೆ ಸುಮ್ಮನಿದ್ದ ಅಮ್ಮ ಸ್ವಲ್ಪ ಹೊತ್ತಿನ ನಂತರ ಮತ್ತೆ "ಪಾಪ" ಎಂದು ಉದ್ಗಾರವೆತ್ತಿದರು.

ಸ್ವಲ್ಪ ಹೊತ್ತು ಟಿವಿ ಸರ್ಫ್ ಮಾಡಿ, ಊಟ ಮುಗಿಸಿ, ನನ್ನ ಬೆಡ್‌ರೂಮನ್ನು ಪ್ರವೇಶಿಸಿದಾಗಲೂ ಅದ್ಯಾಕೋ ಪದ್ಮಪ್ರಿಯ ನನ್ನನ್ನು ಇನ್ನೂ ಕಾಡುತ್ತಲೇ ಇದ್ದಳು.



ನನ್ನ ಬೇಸರವನ್ನು ಮರೆಯಲು ಅದ್ಯಾವುದೋ ಪುಸ್ತಕವನ್ನು ಓದಲಾರಂಭಿಸಿ ನನಗೆ ಗೊತ್ತಿಲ್ಲದಂತೆ ತೂಕಡಿಸಲಾರಂಭಿಸಿದೆ. ನಾನು ಮತ್ತೆ ಟಿವಿ ಮುಂದೆ ಕೂತು ನ್ಯೂಸ್ ನೋಡುತ್ತಿರುವಂತೆ, ಅದರಲ್ಲಿ ಪದ್ಮಪ್ರಿಯ ಬಿಟ್ಟುಹೋಗಿದ್ದ ಕಾರ್, ಪತ್ರಿಕಾ ವರದಿಗಳು, ದೆಹಲಿಯಲ್ಲಿನ ಶಮಾ ಅಪಾರ್ಟ್‌ಮೆಂಟ್, ಆಕೆಯ ಅಂತ್ಯ ಸಂಸ್ಕಾರದ ದೃಶ್ಯಗಳು ಚಕಚಕನೆ ಮೂಡಿಬಂದಂತೆ ಅನ್ನಿಸಿತು. ಅವನ್ನೆಲ್ಲ ನಾನು ನೋಡುತ್ತಿರುವಾಗಲೇ ಅದು ಹೇಗೋ ಪದ್ಮಪ್ರಿಯಳೇ ನನ್ನ ಪಕ್ಕ ಬಂದು ಕೂತಿದ್ದಳು.

"ಇದೆಲ್ಲ ಯಾಕಾಯಿತು?" ಎಂದು ಆಕೆಯನ್ನು ಕೇಳಿದೆ.

"ಎಲ್ಲಿಂದ ಪ್ರಾರಂಭಿಸಲಿ.... ನಮ್ಮ ದೇಶದಲ್ಲಿ ಅದೆಷ್ಟು ಜನ ಸುಳಿವಿಲ್ಲದಂತೆ ಕಣ್ಮರೆಯಾಗುತ್ತಾರೆ, ಹಾಗೆ ನಾನೂ ಕೂಡ ಆಗಬಹುದು ಎಂದುಕೊಂಡಿದ್ದೆ. ಅವತ್ತು ನಾನು ನನ್ನ ಕಾರ್ ಅನ್ನು ಅಲ್ಲಿ ಬಿಟ್ಟು ಹೋದ ನಂತರ ನಾನು ನಾಪತ್ತೆಯಾಗಿದ್ದೇನೆ, ಅಪಹರಣಗೊಂಡಿದ್ದೇನೆ ಅಥವಾ ಕಾಡಿನಲ್ಲೆಲ್ಲೋ ಆತ್ಮಹತ್ಯೆ ಮಾಡಿಕೊಂಡಿದ್ದೇನೆ ಎಂದೇ ಎಲ್ಲರೂ ಭಾವಿಸುತ್ತಾರೆ, ಆನಂತರ ನನ್ನ ದೇಹ ಸಿಗದಿದ್ದಾಗ್ಯೂ ಎಲ್ಲರೂ ನನ್ನನ್ನು ಮರೆತು ಕಾಲಕ್ರಮೇಣ ಸುಮ್ಮನಾಗುತ್ತಾರೆ. ನನ್ನನ್ನು ಮರೆತು ತಮ್ಮ ಜೀವನವನ್ನು ಸಾಗಿಸುತ್ತಾರೆ ಎಂದುಕೊಂಡಿದ್ದೆ. ಆಗ ನಾನು ದೂರದ ಇನ್ನೊಂದು ನಗರದಲ್ಲಿ ಯಾರಿಗೂ ಗೊತ್ತಾಗದಂತೆ ಹೊಸ ಬದುಕು, ಹೊಸ ಕನಸು, ಹೊಸ ಹುಮ್ಮಸ್ಸಿನಿಂದ ಜೀವಿಸಬಹುದು ಎಂದುಕೊಂಡಿದ್ದೆ."

"ಇಷ್ಟೆಲ್ಲರ ಬದಲಾಗಿ ವಿಚ್ಛೇದನ ಪಡೆಯಬಹುದಿತ್ತಲ್ಲ?"

"ವಿಚ್ಛೇದನ? ಅದೂ ನನ್ನ ಗಂಡನಿಂದ? ನಮ್ಮ ಶಿವಳ್ಳಿ ಬ್ರಾಹ್ಮಣರ ಸಮುದಾಯವನ್ನು ಎದುರುಹಾಕಿಕೊಂಡು? ಇನ್ನೊಂದನ್ನು ಮರೆಯಬಾರದು. ನನಗೆ ಓರ್ವ ತಂಗಿ ಮತ್ತು ಇಬ್ಬರು ತಮ್ಮಂದಿರಿದ್ದಾರೆ.. ಹಿರಿಯಕ್ಕಳಾಗಿ ನಾನೇ ಶಾಸಕನಾದ ನನ್ನ ಗಂಡನಿಂದ ವಿಚ್ಛೇದನೆ ಪಡೆದರೆ ಅವರನ್ನು ಮದುವೆಯಾಗುವವರು ಯಾರು? ಮಗಳು ಡೈವೊರ್ಸ್ ಪಡೆದಳೆಂದ ಮೇಲೆ ನನ್ನ ತಂದೆತಾಯಿ ಬದುಕುವುದಾದರೂ ಹೇಗೆ? ನನ್ನ ಮಕ್ಕಳನ್ನು ನಾನು ಎದುರಿಸುವುದಾದರೂ ಹೇಗೆ? ಅವರೆಲ್ಲರ ಬದುಕಿನಲ್ಲಿ ವಿಚ್ಛೇದನೆ ಎಂಬ ಕಳಂಕ ಬರಕೂಡದೆನ್ನಿಸಿತು. ನಾಪತ್ತೆ ಎಂಬ ದುರಂತವನ್ನು ಅವರೆಲ್ಲ ಸಹಿಸಿಕೊಳ್ಳಬಹುದೆಂದುಕೊಂಡೆ."

"ನಿಮ್ಮ ಇಬ್ಬರು ಮಕ್ಕಳನ್ನು ನೋಡಿದರೆ ತುಂಬಾ ಬೇಸರವಾಗುತ್ತೆ..."

"ರಾಹುಲ್ ಮತ್ತು ರೋಹನ್‌ರಿಬ್ಬರನ್ನು ನಾನು ತುಂಬಾ ಪ್ರೀತಿಸುತ್ತೇನೆ. ಆದರೆ..... ಮದುವೆ, ದಾಂಪತ್ಯ, ತಾಯಿತನ, ಮನೆತನದ ಜವಾಬ್ದಾರಿ ಇಂತಹ ವಿಷಯಗಳು ನನ್ನ ಅರಿವಿಗೆ ಬರುವ ಮುನ್ನವೇ ನನ್ನ ಜೀವನದಲ್ಲಿ ಹಾಸುಹೋಗಿದ್ದವು. ಈಗಾಗಲೇ ಮಗಳಾಗಿ, ಹೆಂಡತಿಯಾಗಿ, ಗೃಹಿಣಿಯಾಗಿ ಸಂಸಾರ ಮತ್ತು ಸಮಾಜ ನನ್ನಿಂದ ಅಪೇಕ್ಷಿಸಿದ್ದನ್ನೆಲ್ಲ ಚಾಚೂತಪ್ಪದೆ ಈಡೇರಿಸಿದ್ದೇನೆ. ಆದರೆ ನನಗೀಗಾಗಲೇ 31 ರ ಪ್ರಾಯ. ನನ್ನ ಇಡೀ ಜೀವನ ಬೇರೆಯವರ ತಾಳಕ್ಕೆ ತಕ್ಕಂತೆ ನಡೆದಿದೆಯೇ ಹೊರತು ನನ್ನ ಯಾವ ಕನಸುಗಳೂ ನನ್ನ ಕೈಗಳಿಗೆ ಎಟುಕಿಲ್ಲ, ಇದೇ ಪರಿಸ್ಥಿತಿಯಲ್ಲಿ ಇನ್ನೂ ಹೆಚ್ಚುಕಾಲ ಕಳೆದರೆ ನನಗರಿವಿಲ್ಲದಂತೆ ನನಗೆ ನಲವತ್ತೋ, ಐವತ್ತೋ ಪ್ರಾಯವಾಗುತ್ತದೆ. ಆಗ ನನ್ನ ಮನಸ್ಸು ಜಡಗೊಂಡು, ದೇಹ ದುರ್ಬಲವಾಗಿ, ಆಕಾಂಕ್ಷೆ ಬತ್ತಿ ಹೋಗಿ, ಕನಸೆಲ್ಲ ಭಸ್ಮವಾಗಿ ಎಲ್ಲವೂ ಶೂನ್ಯವಾಗಿ ನಾನು ಬದುಕಿದ್ದಕ್ಕೂ ಅರ್ಥವೇನು ಎನಿಸುವ ಮುನ್ನವೇ ನನ್ನ ಈ ಬದುಕಿನಿಂದ ಓಡಿಹೋಗಿ ಹೊಸ ಬದುಕನ್ನು ಕಟ್ಟಿಕೊಳ್ಳಬೇಕೆನಿಸಿತು."

"ಪ್ರಾರಂಭದಲ್ಲಿ ಅಷ್ಟೊಂದು ಸ್ಪಷ್ಟತೆ ಮತ್ತು ಧೈರ್ಯ. ಆದರೆ ಆನಂತರ...?"

"ಸ್ಪಷ್ಟತೆ ಮತ್ತು ಧೈರ್ಯಕ್ಕೆ ನನ್ನಲ್ಲೇನೂ ಕೊರತೆ ಇರಲಿಲ್ಲ. ಆದರೆ ಯಾವಾಗ ನಾನು ಎಲ್ಲಿದ್ದೇನೆಂದು ಪೊಲೀಸರಿಗೆ, ಗಂಡನಿಗೆ ಮತ್ತು ಇತರರಿಗೆ ಗೊತ್ತಾಯಿತೋ ಆಗ ನನಗೊಂದು ವಿಷಯ ಸ್ಪಷ್ಟವಾಯಿತು. ಉಡುಪಿಯ ನನ್ನ ಬದುಕಿನಿಂದ ನಾನೆಷ್ಟು ದೂರ ಸಾಗಿದರೂ ಅದು ನನ್ನ ಬೆನ್ನೇರುತ್ತಲೇ ಇರುತ್ತೆ. ಆದರಿಂದ ನನಗೆ ಎಂದೂ ಬಿಡುಗಡೆ ಇಲ್ಲ, ತನ್ನ ಕನಸುಗಳಿಗೆ ಅದು ಎಂದೆಂದಿಗೂ ತೊಡರುಗಳಾಗುತ್ತದೆ, ಆ ಬಂಧನದಿಂದ ನನಗೆ ಎಂದೂ ಮುಕ್ತಿ ಇಲ್ಲ ಎಂದು ನನಗೆ ಅರ್ಥವಾಯಿತು. ಅದರಲ್ಲೂ ಅವರೆಲ್ಲ ಬಂದು ನಾನಿದ್ದ ಮನೆಯ ಬಾಗಿಲನ್ನು ತಟ್ಟಿದಾಗ ನನಗನ್ನಿಸಿದ್ದೇನು ಗೊತ್ತಾ? ನನ್ನ ಬದುಕಿನಲ್ಲಿ ನನ್ನ ಮುಂದಿದ್ದ ಎಲ್ಲಾ ಬಾಗಿಲುಗಳು ಮುಚ್ಚಿಕೊಂಡಿವೆ ಎಂದು. ಆದರೆ ಅವರಿಗೆ ಗೊತ್ತಿಲ್ಲದಿದ್ದ ಒಂದು ಬಾಗಿಲು ಆಗಿನ್ನೂ ನನ್ನ ಮುಂದೆ ತೆರೆದಿತ್ತು. ಅದು ಆತ್ಮಹತ್ಯೆಯ ಬಾಗಿಲು. ಯಾವ ಬದುಕನ್ನು ನಾನು ಬೇಡವೆಂದು ಬಿಟ್ಟುಬಂದಿದ್ದೆನೋ ಅದಕ್ಕೆ ಹಿಂದಿರುಗಲು ನನಗೆ ಮನಸ್ಸಿರಲಿಲ್ಲ. ಹಿಂದಿರುಗಿದ್ದರೂ ಹಿಂದಿನಂತೆ ಬದುಕುವ ಸಾಧ್ಯತೆಗಳಿರಲಿಲ್ಲ, ಹಾಗೆಯೇ ಹಿಂದಿನ ಬದುಕನ್ನು ಬಿಟ್ಟು ಹೊಸ ಜೀವನವನ್ನು ನಡೆಸಲು ನನ್ನ ಮನೆಯ ಬಾಗಿಲಿನ ಮುಂದಿದ್ದ ಜನ ಬಿಡುತ್ತಿರಲಿಲ್ಲ. ಹಿಂದೆ ಹೋಗುವ ಬಯಕೆ ಇಲ್ಲದ, ಮುಂದೆ ಸಾಗುವ ಅವಕಾಶವಿಲ್ಲದ ನನಗೆ ಇದ್ದದ್ದು ಇದೊಂದೇ ದಾರಿ" ಎನ್ನುತ್ತಾ ಪದ್ಮಪ್ರಿಯ ತನ್ನ ಕೊರಳಿಗೆ ನೇಣು ಬಿಗಿದುಕೊಳ್ಳಲಾರಂಭಿಸಿದಳು...

ಆಗ ಎಚ್ಚೆತ್ತುಕೊಂಡ ನಾನು ನನ್ನ ರೂಮಿನ ಸುತ್ತಲೂ ನೋಡಿದೆ. ಎಲ್ಲವೂ ಇದ್ದ ಹಾಗೆ ಇದ್ದವು. ಕೆಲಕ್ಷಣ ಯೋಚಿಸಿದೆ. ಎದ್ದು ಪುಟ್ಟ ಪೆಟ್ಟಿಗೆಯಲ್ಲಿದ್ದ ಮೊಂಬತ್ತಿಯನ್ನು ಹೊರತೆಗೆದೆ. ಅದರ ಮೂರನೆ ಒಂದು ಭಾಗವನ್ನು ಕತ್ತರಿಸಿ ಉಳಿದಿದ್ದ ಮೂರನೆ ಎರಡು ಭಾಗದ ಬತ್ತಿಗೆ ಅಗ್ನಿ ಸ್ಪರ್ಶಿಸಿದೆ.

ಅದೇ ಹೊತ್ತಿಗೆ ನನ್ನ ಮೊಬೈಲ್ ರಿಂಗ್ ಆಯಿತು. ಅದನ್ನು ಎತ್ತಿದಾಗ, "ಸಾರಿ ಶಾರೂ, ಲೇಟ್ ಆಯಿತು. ನಿದ್ರೆ ಮಾಡಿದ್ದೀಯಾ" ಎಂದು ಆ ಕಡೆಯಿಂದ ಕಬೀರ್ ಕೇಳಿದ.

"ಕಬೀರ್, ನನಗೆ ಸಾಂಕೇತಿಕ ವಿಷಯಗಳ ಬಗ್ಗೆ ನಂಬಿಕೆ ಇಲ್ಲ ಅಂತ ನಿಂಗೊತ್ತು. ಆದರೆ ಅದ್ಯಾಕೋ ನನಗೇ ಗೊತ್ತಿಲ್ಲ" ಎಂದು ಬಡಬಡಾಯಿಸಿದ ನಾನು "ಪದ್ಮಪ್ರಿಯಾಗೆಂದೇ ನನ್ನ ಬೆಡ್‌ರೂಮಿನಲ್ಲಿ ಒಂದು ಮೊಂಬತ್ತಿಯನ್ನು ಹಚ್ಚಿದ್ದೇನೆ. ಆಕೆ ಬಯಸಿದ್ದ ಬದುಕು ಅವಳದ್ದಾಗಲಿಲ್ಲ, ಆದರೆ ಈ ಮೊಂಬತ್ತಿ ಅವಳ ಆಶಯಗಳ ಸಂಕೇತವಾಗಿ ಉರಿಯಲಿ, ಆ ಮೂಲಕವಾದರೂ ಅವಳ ಬದುಕಿಗೆ ಒಂದು ಅರ್ಥ ಸಿಗಲಿ, ಅವಳಂತೆ ಕನಸುಗಳನ್ನು ಈಡೇರಿಸಿಕೊಳ್ಳಲಾಗದೇ ಸಾಯುತ್ತಿರುವ ಹೆಣ್ಣುಮಕ್ಕಳಿಗೆ ಒಂದಷ್ಟು ದಿಟ್ಟತನ ಸಿಗಲಿ ಎಂದು ಆಶಿಸುತ್ತಿದ್ದೇನೆ.... ಇದು ಪ್ರಾರ್ಥನೆ ಅಲ್ಲ, ಬದಲಾಗಿ ಒಂದು ಪಾಠ, ಒಂದು ಆಕಾಂಕ್ಷೆ, ಒಂದು ಅಭಿಲಾಷೆ....."

....ಹೀಗೆ ಅದೇನನ್ನೋ ಹೇಳುತ್ತಲೇ ಇದ್ದೆ. ಸ್ವಲ್ಪ ಹೊತ್ತಿನ ನಂತರ ಕಬೀರ್ ನನ್ನ ಮಾತಿನ ನಡುವೆ ಪ್ರವೇಶಿಸಿ "ನನಗೆ ಏನು ಹೇಳಬೇಕೆಂದೇ ಗೊತ್ತಾಗುತ್ತಿಲ್ಲ ಶಾರೂ. ನೀನೆಷ್ಟು ಸೂಕ್ಷ್ಮ. ಐ ಲವ್ ಯೂ" ಅಂದ.

ಅದೇ ಮೊದಲ ಬಾರಿಗೆ ಕಬೀರ್ ನನಗೆ 'ಐ ಲವ್ ಯೂ' ಅಂದದ್ದು. ಆದರೆ ನನ್ನನ್ನು ಅದೆಂತಹದ್ದೋ ಪ್ರಶ್ನೆಗಳು ಕಾಡುತ್ತಿದ್ದವು. "ಏನು ಹೇಳಬೇಕೆಂದೇ ನನಗೆ ಗೊತ್ತಾಗುತ್ತಿಲ್ಲ ಕಬೀರ್" ಎಂದು ಹೇಳುತ್ತಾ ನಿದ್ರೆಗೆ ಜಾರಿದೆ....

■ ಶಾರದೆ

ಲಂಕೇಶ್


ಸಿಂಗ್ ಯಾಕಿಷ್ಟು ಹಠ ಮಾಡುತ್ತಿದ್ದಾರೆ?



ಕಂಡಹಾಗೆ

■ ಗೌರಿ ಲಂಕೇಶ್

ಒಂದೆಡೆ ಪ್ರಧಾನಿ ಮನಮೋಹನ್ ಸಿಂಗ್ "ಅಮೆರಿಕಾದೊಂದಿಗಿನ ಈ ಅಣು ಒಪ್ಪಂದಕ್ಕೆ ಎಲ್ಲರೂ ಒಪ್ಪದಿದ್ದರೆ ಅದು ಹೇಗೆ G-8 ಸಭೆಯಲ್ಲಿ ನಾನು ಮುಖ ತೋರಿಸಲಿ" ಎಂದು ಗೋಗರೆಯುತ್ತಿದ್ದಾರೆ. ಇನ್ನೊಂದೆಡೆ ಎಡ ಪಕ್ಷಗಳು "ಯಾವ ಕಾರಣಕ್ಕೂ ಈ ಒಪ್ಪಂದಕ್ಕೆ ಭಾರತ ಸಹಿ ಹಾಕಕೂಡದು" ಎಂದು ಸವಾಲು ಒಡ್ಡಿವೆ. ಮತ್ತೊಂದೆಡೆ ವಿರೋಧ ಪಕ್ಷವಾದ ಬಿಜೆಪಿಗೆ ಈ ಒಪ್ಪಂದ ಕುರಿತು ಯಾವ ನಿಲುವನ್ನು ತಾಳಬೇಕೆಂಬುದೇ ಗೊತ್ತಾಗದೆ ಹುಚ್ಚುಚ್ಚಾಗಿ ಹೇಳಿಕೆ ನೀಡುತ್ತಿದೆ. ಇದೆಲ್ಲ ಸೇರಿ ಸದ್ಯಕ್ಕೆ ನಮ್ಮ ರಾಷ್ಟ್ರದ ರಾಜಕೀಯ ಪರಿಸ್ಥಿತಿ ಹುಚ್ಚರ ಸಂತೆಯಂತಾಗಿದೆ.



ಆದರೆ ಈ ಅಣು ಒಪ್ಪಂದ ಅಂದರೆ ಏನು? ಯಾಕೆ ಅದನ್ನು ಸಿಂಗ್‌ರವರು ವೈಯಕ್ತಿಕ ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಂಡಿದ್ದಾರೆ. ಇನ್ನೆಲ್ಲ ವಿಷಯಗಳಲ್ಲಿ ಇವತ್ತು ಕಾಂಗ್ರೆಸ್ ಪಕ್ಷದಂತೆ ವರ್ತಿಸುತ್ತಿರುವ ಎಡಪಕ್ಷಗಳು ಯಾಕೆ ಅದನ್ನು ಇಷ್ಟು ತೀವ್ರವಾಗಿ ವಿರೋಧಿಸುತ್ತಿವೆ? ಯಾಕೆ ಬಿಜೆಪಿ ಎಡಬಿಡಂಗಿಯಂತಾಡುತ್ತಿದೆ ಎಂದು ನೋಡಿದರೆ ಅಚ್ಚರಿಗಳು ಕಾಣಿಸುತ್ತವೆ.

ಕಳೆದೊಂದು ವರ್ಷದಿಂದಲೂ ಭಾರತ ಮತ್ತು ಅಮೆರಿಕ ನಡುವಿನ ಈ ಅಣು ಒಪ್ಪಂದದ ಬಗ್ಗೆ ರಾಜಕೀಯ ಪಕ್ಷಗಳ ನಡುವೆ ಹಗ್ಗಜಗ್ಗಾಟ ನಡೆಯುತ್ತಲೇ ಇದೆ. ಆದರೆ ಕಳೆದ ಎರಡು ವಾರಗಳಿಂದ ಈ ವಿವಾದಕ್ಕೆ ಸಂಬಂಧಪಟ್ಟೇ ಕೇಂದ್ರ ಸರಕಾರ ಬಿದ್ದು ಹೋಗಬಹುದು ಎಂಬ ಆತಂಕ ಸೃಷ್ಟಿಯಾಗಿದೆ. ಆದ್ದರಿಂದ ಈ ಒಪ್ಪಂದದಿಂದ ಅಮೆರಿಕಕ್ಕೆ ಎಷ್ಟು ಲಾಭ, ಭಾರತಕ್ಕೆ ಎಷ್ಟು ನಷ್ಟ ಎಂದೆಲ್ಲ ತಿಳಿದುಕೊಳ್ಳಬೇಕಿದೆ. ಯಾಕೆಂದರೆ ಇದು ಕೇವಲ ಕಾಂಗ್ರೆಸ್ ಮತ್ತು ಎಡಪಕ್ಷಗಳಿಗೆ ಮಾತ್ರ ಸಂಬಂಧಿಸಿದ ವಿಚಾರವಲ್ಲ, ಈ ಒಪ್ಪಂದದ ಪರಿಣಾಮ ಈ ದೇಶದ ಪ್ರತಿಯೊಬ್ಬ ನಾಗರಿಕನ ಮೇಲೂ ಬೀಳಲಿದೆ.

ಕಾಂಗ್ರೆಸ್ ಪ್ರಕಾರ ಈ ಒಪ್ಪಂದದಿಂದ ದೇಶದ ಎಲ್ಲಾ ಪ್ರಮುಖ ಸಮಸ್ಯೆಗಳೂ ಪರಿಹಾರವಾಗಿಬಿಡುತ್ತವೆ! ಅದರ ವಾದ ಹೀಗಿದೆ: "ಉತ್ಪಾದನೆ, ಸಾಗಾಣಿಕೆಯಂತಹ ಎಲ್ಲಾ ಆರ್ಥಿಕ ಚಟುವಟಿಕೆಗಳಿಗೆ ವಿದ್ಯುಚ್ಛಕ್ತಿ ಮತ್ತು ಇಂಧನ ಅಗತ್ಯವಾಗಿದೆ. ಆದರೆ ನಮ್ಮ ದೇಶದಲ್ಲಿ ವಿದ್ಯುಚ್ಛಕ್ತಿ ಮತ್ತು ಇಂಧನದ ಕೊರತೆ ಇದೆ. ಈ ಕೊರತೆ ದೇಶದ ಆರ್ಥಿಕ ಅಭಿವೃದ್ಧಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಜಲವಿದ್ಯುತ್ ಮತ್ತು ಇಂಧನಗಳ ಬದಲಾಗಿ ನಾವು ಅಣುಶಕ್ತಿಯನ್ನು ಬಳಸಿಕೊಳ್ಳುವತ್ತ ಗಮನಹರಿಸಬೇಕು. ಅಮೆರಿಕದೊಂದಿಗೆ ಈ ಒಪ್ಪಂದ ಮಾಡಿಕೊಂಡರೆ ನಮ್ಮ ನಾಗರಿಕ ಬಳಕೆಗೆ ಅಮೆರಿಕವು ಅಣುಶಕ್ತಿಯ ತಂತ್ರಜ್ಞಾನವನ್ನು ಹಾಗೂ ಕಚ್ಚಾ ಸಾಮಗ್ರಿಯನ್ನು ನಮ್ಮ ದೇಶಕ್ಕೆ ಒದಗಿಸುತ್ತದೆ."

ಆದರೆ ಅಮೆರಿಕವು ತನಗೆ ಲಾಭವಿಲ್ಲದೆ ಏನನ್ನೂ ಬಿಟ್ಟಿಯಾಗಿ ಕೊಡುವುದಿಲ್ಲ ಎಂಬ ಸತ್ಯ ಎಲ್ಲರಿಗೂ ಗೊತ್ತು, ಹಾಗಿರುವಾಗ, ನಮಗೆ ಎಷ್ಟು ಲಾಭ ಎಂಬುದರ ಜೊತೆಗೆ ಅಮೆರಿಕಕ್ಕೂ ಎಷ್ಟು ಲಾಭ ಎಂದು ನೋಡುವುದೂ ಮುಖ್ಯವಾಗುತ್ತದೆ.

ಆದರೆ ಅದಕ್ಕೂ ಮುನ್ನ ಭಾರತದಲ್ಲಿನ ಪ್ರಸ್ತುತ ಸ್ಥಿತಿಯತ್ತ ಸ್ವಲ್ಪ ಗಮನ ಹರಿಸಬೇಕಿದೆ. ಮೊದಲನೆಯದಾಗಿ ತೈಲ ಅಭಾವದ ಪ್ರಶ್ನೆ. ಭಾರತದಲ್ಲಿ ಬಳಕೆಯಾಗುತ್ತಿರುವ ಒಟ್ಟು ಇಂಧನ ಪ್ರಮಾಣದಲ್ಲಿ ಶೇಕಡ 50ರಷ್ಟು ಭಾಗ ಸಾರಿಗೆಗೆ ಖರ್ಚಾಗುತ್ತದೆ (ಕಾರುಗಳು, ಬಸ್ಸುಗಳು, ರೈಲ್ವೆ, ಟ್ರಕ್ಕು ಇತ್ಯಾದಿಗಳು). ಉಳಿದದ್ದು ಪೆಟ್ರೋಕೆಮಿಕಲ್ ಮತ್ತು ರಸಗೊಬ್ಬರಗಳಂತಹ ಉದ್ಯಮಗಳಲ್ಲಿ ಬಳಕೆಯಾಗುತ್ತದೆ. ಅಂದರೆ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದಕ್ಕೆ ಇಂಧನ ಬಳಕೆಯಾಗುವುದು ತೀರಾ ಕಡಿಮೆ. ಹೀಗಾಗಿ ಇಂಧನದ ಸ್ಥಾನವನ್ನು ತುಂಬಲು ಪರಮಾಣು ಶಕ್ತಿಗೆ ಸಾಧ್ಯವಿಲ್ಲ (ಮುಂದೊಂದು ದಿನ ವಿಜ್ಞಾನಿಗಳು ಯುರೇನಿಯಂ ಅನ್ನು ಕಾರು, ಬಸ್ಸು, ಟ್ರಕ್ಕುಗಳಲ್ಲಿ ಉರಿಸಿ ಶಕ್ತಿ ಉತ್ಪಾದನೆ ಮಾಡುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವ ತನಕ!). ಹಾಗಾಗಿ ಭಾರತ ಎದುರಿಸುತ್ತಿರುವ ಇಂಧನ ಅಭಾವಕ್ಕೆ, ಪರಮಾಣು ಶಕ್ತಿಯಾಗಲೀ ಅಥವಾ ಅದಕ್ಕೆ ಇಂಬು ನೀಡುವ ಈ ಒಪ್ಪಂದವಾಗಲಿ ಪರಿಹಾರವಲ್ಲ.

ಅಷ್ಟೇಅಲ್ಲದೆ, ಅಣು ಒಪ್ಪಂದಕ್ಕಿಂತಲೂ ಈ ಸಮಸ್ಯೆಗೆ ಭಾರತ ಮತ್ತು ಇರಾನ್‌ಗಳ ನಡುವೆ ಅಫಘಾನಿಸ್ತಾನ ಮತ್ತು ಪಾಕಿಸ್ತಾನಗಳ ಮೂಲಕ ಹಾದುಬರುವ ನೈಸರ್ಗಿಕ ಅನಿಲದ ಪೈಪ್‌ಲೈನ್ ಯೋಜನೆ ಒಂದಿಷ್ಟು ಪರಿಹಾರ ಒದಗಿಸಬಹುದೇನೋ. ಈ ಪೈಪ್‌ಲೈನ್ ಮೂರ್‍ನಾಲ್ಕು ದೇಶಗಳ ಮೂಲಕ ಹಾದುಬರುವುದರಿಂದ ಒಬ್ಬರು ಮತ್ತೊಬ್ಬರ ಮೇಲೆ ಅವಲಂಬಿತವಾಗಿ ಈ ದೇಶಗಳ ನಡುವಿನ ಸಂಬಂಧವೂ ಸುಧಾರಿಸುವ ಸಾಧ್ಯತೆ ಹೆಚ್ಚುತ್ತದೆ.

ಆದರೆ ಮೊದಮೊದಲು ಈ ಯೋಜನೆಯ ಬಗ್ಗೆ ಉತ್ಸಾಹದಿಂದಿದ್ದ ಭಾರತ ಈಗ ಅದನ್ನು ಆದಷ್ಟು ಎಳೆದಾಡುತ್ತಾ ತಾತ್ಸಾರ ತೋರುತ್ತಿದೆ. ಮಾತ್ರವಲ್ಲ, ಇತ್ತೀಚೆಗೆ ಈ ಯೋಜನೆಗೆ ಸಂಬಂಧಪಟ್ಟ ದೇಶಗಳ ಪ್ರತಿನಿಧಿಗಳ ಸಭೆಯಲ್ಲಿ ಭಾರತ ಭಾಗವಹಿಸಲಿಲ್ಲ. ಇದಕ್ಕೆ ಅಮೆರಿಕಾದಿಂದ ಬಂದಿರುವ ಒತ್ತಡವೂ ಕಾರಣವಾಗಿದೆ. ಯಾಕೆಂದರೆ ಈ ಪೈಪ್‌ಲೈನ್ ಯೋಜನೆ ಜಾರಿಯಾದರೆ ಅಮೆರಿಕದೊಂದಿಗಿನ ಅಣು ಒಪ್ಪಂದಕ್ಕೆ ನಯಾಪೈಸೆಯ ಬೆಲೆ ಇಲ್ಲವಾಗುತ್ತದೆ! ಅಮೆರಿಕಾದ ಗುಲಾಮನಂತೆ ವರ್ತಿಸುತ್ತಿರುವ ಯುಪಿಎ ಸರ್ಕಾರ ಆ ಒತ್ತಡಕ್ಕೆ ಮಣಿದಿದೆ.

ಇನ್ನು ವಿದ್ಯುಚ್ಛಕ್ತಿ ಕೊರತೆಯ ವಿಚಾರ. ಅಸಲಿಗೆ ವಿದ್ಯುಚ್ಛಕ್ತಿಯ ಅಭಾವದ ಸಮಸ್ಯೆ ತಲೆದೋರಿರುವುದು ವಿದ್ಯುಚ್ಛಕ್ತಿ ಕ್ಷೇತ್ರವನ್ನು ಖಾಸಗೀ ಕಂಪೆನಿಗಳ ಉಸ್ತುವಾರಿಗೆ ಸರಕಾರ ವಹಿಸಿರುವುದರಿಂದ. ಅದು ಬದಿಗಿರಲಿ, ಒಂದು ವೇಳೆ ಅಮೆರಿಕಾದೊಂದಿಗಿನ ಈ ಒಪ್ಪಂದ ಇಂದೇ ಜಾರಿಯಾದರೂ ಅದರ ಪ್ರಕಾರ ಅಮೆರಿಕದಿಂದ ರಿಯಾಕ್ಟರ್‌ಗಳನ್ನು ಖರೀದಿಸಿ ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸುವುದಕ್ಕೆ ಕನಿಷ್ಠವೆಂದರೂ ಎಂಟು ವರ್ಷಗಳು ಬೇಕಾಗುತ್ತವೆ. ಅದೂಅಲ್ಲದೇ ಆ ರಿಯಾಕ್ಟರ್‌ಗಳಿಗೆ ಭಾರತ ಭಾರೀ ಹಣ ವೆಚ್ಚ ಮಾಡಬೇಕಾಗುತ್ತದೆ.



ವಿದೇಶದಿಂದ ಆಮದು ಮಾಡಿಕೊಂಡ ರಿಯಾಕ್ಟರ್‌ಗಳನ್ನು ಬಳಸಿ ವಿದ್ಯುಚ್ಛಕ್ತಿ ಉತ್ಪಾದಿಸಲು ತಗಲುವ ವೆಚ್ಚ ನಮ್ಮ ದೇಶದಲ್ಲೇ ಸ್ಥಳೀಯವಾಗಿ ಲಭ್ಯವಿರುವ ಕಲ್ಲಿದ್ದಲನ್ನು ಬಳಸಿ ವಿದ್ಯುಚ್ಛಕ್ತಿ ಉತ್ಪಾದಿಸುವುದಕ್ಕೆ ವೆಚ್ಚವಾಗುವ ಹಣಕ್ಕಿಂತ ಮೂರು ಪಟ್ಟು ಹೆಚ್ಚು. ಅದೂಅಲ್ಲದೆ, ಈ ಅಣು ವಿದ್ಯುತ್ ಸ್ಥಾವರಗಳಲ್ಲಿ ಅಮೆರಿಕದಿಂದ ಆಮದು ಮಾಡಿಕೊಳ್ಳಬೇಕಿರುವ ಯೂರೇನಿಯಂ ಅನ್ನು ಬಳಸಬೇಕು. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಯುರೇನಿಯಂನ ಬೆಲೆ ಕಳೆದ ಕೆಲವು ವರ್ಷಗಳಲ್ಲಿ ಐದು ಪಟ್ಟು ಜಾಸ್ತಿಯಾಗಿದೆ. ಅಂದರೆ, ಈ ಘಟಕಗಳಲ್ಲಿ ಉತ್ಪಾದನೆಯಾದ ವಿದ್ಯುತ್ತನ್ನು ಬಳಸುವ ಸಾರ್ವಜನಿಕರು ದುಪ್ಪಟ್ಟು ಹಣವನ್ನು ತೆರಬೇಕಾಗುತ್ತದೆ. ಇದೆಲ್ಲದರ ಅರ್ಥ ಇಷ್ಟೇ: ಈ ಒಪ್ಪಂದದಿಂದ ಜನರಿಗೆ ಅನುಕೂಲ ಆಗುವುದು ಇರಲಿ, ಅನಾನುಕೂಲಗಳೇ ಹೆಚ್ಚಾಗುತ್ತವೆ.

ಇನ್ನೊಂದು ಮುಖ್ಯ ವಿಷಯ ಯಾವುದೆಂದರೆ ಈಗಾಗಲೇ ಜಗತ್ತಿನೆಲ್ಲೆಡೆ ಈ ಅಣು ವಿದ್ಯುತ್ ಉತ್ಪಾದನಾ ಕೇಂದ್ರಗಳ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿವೆ. ಅವು ಸುರಕ್ಷಿತವಲ್ಲ ಎಂಬುದು ಒಂದು ಕಾರಣವಾದರೆ, ಅವುಗಳ ವೇಸ್ಟ್ ಪ್ರಾಡಕ್ಟ್‌ಗಳನ್ನು ಎಲ್ಲಿ ಹಾಕುವುದು ಎಂಬುದು ಇನ್ನೊಂದು ಸಮಸ್ಯೆಯಾಗಿದೆ. ಹೀಗಿರುವಾಗ ಈ ಒಪ್ಪಂದದಡಿ ಬರಲಿರುವ ಸ್ಥಾವರಗಳು ಭಾರತಕ್ಕೆ ಬೇಕೆ ಎಂಬ ಪ್ರಶ್ನೆಯೂ ಇದೆ.

ನಮ್ಮ ದೇಶದಲ್ಲಿ ಲಭ್ಯವಿರುವ ಜಲಸಂಪನ್ಮೂಲಗಳನ್ನೇ ಬಳಸಿಕೊಂಡು 50,000 ಮೆಗಾವ್ಯಾಟ್ ಜಲವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದು. ಅಷ್ಟೇ ಅಲ್ಲ, ಪಕ್ಕದ ನೇಪಾಳ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡು ಅಲ್ಲಿಂದ ಭಾರತಕ್ಕೆ ಹರಿಯುವ ನದಿಗಳಿಗೆ ಡ್ಯಾಂಗಳನ್ನು ಕಟ್ಟಿ 83,000 ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಕಡಿಮೆ ದರದಲ್ಲಿ ಉತ್ಪಾದಿಸಬಹುದು. ಇದರಿಂದ ಭಾರತ ಮತ್ತು ನೇಪಾಳ, ಎರಡು ದೇಶಗಳಿಗೂ ಅನುಕೂಲವಾಗುತ್ತದೆ.

ಈಗಾಗಲೇ ನಮ್ಮಲ್ಲೂ ಅಣುವಿದ್ಯುತ್ ಉತ್ಪಾದನೆ ಸ್ಥಾವರಗಳಿವೆ. ಅವುಗಳಿಗೆ 4000 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವಿದ್ದು, ಅದಕ್ಕೂ ಹೆಚ್ಚಾಗಿ 10,000 ಮೆಗಾವ್ಯಾಟ್‌ಅನ್ನು ಉತ್ಪಾದಿಸುವುದಕ್ಕೆ ಬೇಕಿರುವ ಯುರೇನಿಯಂ ಕೂಡ ನಮ್ಮ ದಾಸ್ತಾನಿನಲ್ಲಿದೆ ಎಂದು ಅಣುಶಕ್ತಿ ಆಯೋಗವೇ ಹೇಳಿದೆ. ಆದರೂ ಅಮೆರಿಕದೊಂದಿಗಿನ ಈ ಒಪ್ಪಂದವನ್ನು ಜಾರಿಗೊಳಿಸುವುದಕ್ಕೆ ಕೇಂದ್ರ ಸರ್ಕಾರ 'ಯುರೇನಿಯಂ ಕೊರತೆ' ಎಂಬ ಭೂತವನ್ನು ತೋರಿಸುತ್ತಿರುವುದು ಏತಕ್ಕೆ?

1974ರ ಮೊದಲ ಪೋಖ್ರಾನ್ ಅಣ್ವಸ್ತ್ರ ಪರೀಕ್ಷೆಯ ನಂತರ ಭಾರತೀಯ ವಿಜ್ಞಾನಿಗಳು ತಮ್ಮ ಸ್ವಂತ ಪರಿಶ್ರಮದಿಂದ ಸ್ಥಳೀಯವಾಗಿ ಅಣುಶಕ್ತಿಯ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ್ದಾರೆ. ಭಾರತದಲ್ಲಿ ಹೇರಳವಾಗಿ ದೊರೆಯುವ ಥೋರಿಯಂ ಅನ್ನು ಬಳಸಿಯೇ ಅಣುಶಕ್ತಿಯನ್ನು ಉತ್ಪಾದಿಸುವ ತಂತ್ರಜ್ಞಾನವಿದು. ಅಣುಶಕ್ತಿಯಿಂದಲೇ ನಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಇಚ್ಛೆ ಸರ್ಕಾರಕ್ಕಿದ್ದರೆ ಈ ಸ್ಥಳೀಯ ತಂತ್ರಜ್ಞಾನವನ್ನೇ ಏಕೆ ಬಳಸಬಾರದು? ಅಮೆರಿಕದಿಂದ ದುಬಾರಿ ಬೆಲೆಯಲ್ಲಿಯೇ ಏಕೆ ತಂತ್ರಜ್ಞಾನ ಮತ್ತು ಯುರೇನಿಯಂ ಎರಡನ್ನೂ ಖರೀದಿಸಬೇಕು?

ಅನಿಲ ಮತ್ತು ವಿದ್ಯುತ್ ಕೊರತೆ ಒಂದೆಡೆಯಾದರೆ, ಈ ಒಪ್ಪಂದದ ಇನ್ನೊಂದು ಭಾಗ ನಮ್ಮ ರಾಷ್ಟ್ರದ ಭದ್ರತೆಗೆ ಸಂಬಂಧಿಸಿದ್ದು. ಈ ಒಪ್ಪಂದ ಜಾರಿಗೆ ಬಂದರೆ ಭಾರತದಲ್ಲಿರುವ ಬಹುತೇಕ ಅಣುಸ್ಥಾವರಗಳು ಅಮೆರಿಕದ ಪರಿವೀಕ್ಷಣೆಗೆ ಒಳಪಡುತ್ತವೆ. ಅಂದರೆ, ಭಾರತವು ತನ್ನ ಭದ್ರತೆಗಾಗಿ ಯಾವುದೇ ಶಸ್ತ್ರಾಸ್ತ್ರವನ್ನು ಅಭಿವೃದ್ಧಿಪಡಿಸುವುದಕ್ಕೆ ಅವಕಾಶವೇ ಇಲ್ಲದಂತಾಗುತ್ತದೆ. ಅಂದರೆ ಇಡೀ ವಿಶ್ವದ ಮೇಲೆ ಅಧಿಪತ್ಯ ಸಾಧಿಸಲು ಹೊರಟಿರುವ ಅಮೆರಿಕದ ಹದ್ದುಬಸ್ತಿನಲ್ಲಿರುತ್ತದೆ ಭಾರತ.

ಹೀಗೆ ಒಮ್ಮೆ ನಮ್ಮ ದೇಶದ ಭದ್ರತೆಯ ವಿಚಾರಗಳು ಅಮೆರಿಕಕ್ಕೆ ಗೊತ್ತಾದರೆ ಅದು ನಮ್ಮ ರಕ್ಷಣಾ ಪಡೆಗಳನ್ನು ಮಾತ್ರವಲ್ಲ, ನಮ್ಮ ದೇಶದ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯ ಮೇಲೂ ನಿಯಂತ್ರಣ ಹೊಂದುತ್ತದೆ.

ಈ ಒಪ್ಪಂದದ ಇನ್ನೊಂದು ಗಮನಾರ್ಹ ವಿಚಾರ ಯಾವುದೆಂದರೆ, ಭಾರತಕ್ಕೆ ಪರಮಾಣು ತಂತ್ರಜ್ಞಾನವನ್ನು ಅಮೆರಿಕ ಕಡ್ಡಾಯವಾಗಿ ಒದಗಿಸಲೇಬೇಕೆಂದು ಇದರಲ್ಲಿ ಖಚಿತವಾಗಿ ಹೇಳಿಲ್ಲ. ಅದರಲ್ಲೂ ಅಮೆರಿಕವು ಭಾರತಕ್ಕೆ ಪರಮಾಣು ತಂತ್ರಜ್ಞಾನ ನೀಡುವುದನ್ನು ಅಮೆರಿಕದ ಹೈಡ್ ಕಾಯ್ದೆಯು ನಿರ್ಬಂಧಿಸುತ್ತದೆ. ಅಂದರೆ ನಮಗೆ ಅತೀ ಅವಶ್ಯವಾಗಿ ಬೇಕಾದಾಗ ಅಮೆರಿಕವು ಅದನ್ನು ಯಾವ ಮುಲಾಜೂ ಇಲ್ಲದೆ ನಿರಾಕರಿಸಬಹುದು. ಅಂದರೆ ನಮ್ಮ ಜುಟ್ಟು ಸಂಪೂರ್ಣವಾಗಿ ಅಮೆರಿಕದ ಕೈಯಲ್ಲಿರುತ್ತದೆ.


ಇದನ್ನೆಲ್ಲ ಮನದಟ್ಟು ಮಾಡಿಕೊಂಡ ನಂತರ ಈ ಒಪ್ಪಂದದಿಂದ ಭಾರತಕ್ಕೆ ಯಾವ ಲಾಭವೂ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆದರೆ ಪ್ರಧಾನಿ ಮನಮೋಹನ್ ಸಿಂಗ್‌ರಷ್ಟೇ ಇದಕ್ಕೆ ಒತ್ತಾಯಿಸುತ್ತಿರುವ ಅಮೆರಿಕಕ್ಕೆ ಇದರಿಂದ ಎಷ್ಟು ಲಾಭ ಎಂದು ನೋಡಿದರೆ ಇದರ ಹಿಂದಿನ ಮರ್ಮ ಗೊತ್ತಾಗುತ್ತದೆ.

ಇವತ್ತು ಅಮೆರಿಕದಲ್ಲಿ ಇಂತಹ ರಿಯಾಕ್ಟರ್‌ಗಳನ್ನು ಉತ್ಪಾದಿಸುವ ಉದ್ದಿಮೆ ಸ್ಥಗಿತಗೊಳ್ಳುತ್ತಿದೆ. ಅಲ್ಲಿ ತಯಾರಾಗುವ ರಿಯಾಕ್ಟರ್‌ಗಳನ್ನು ಕೊಳ್ಳುವುದಕ್ಕೆ ಯಾವುದೇ ದೇಶಗಳು ಮುಂದೆ ಬರುತ್ತಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಅವುಗಳನ್ನು ಭಾರತಕ್ಕೆ ಮಾರಿದರೆ ಅಮೆರಿಕಾದಲ್ಲಿಯ ಆ ಉದ್ದಿಮೆಯೂ ಉಳಿಯುತ್ತದೆ, ಅಲ್ಲಿನ ಕಂಪನಿಗಳಿಗೆ ಲಾಭವೂ ಆಗುತ್ತದೆ, ಅಲ್ಲಿನ ನಿರುದ್ಯೋಗ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ತಡೆದಂತೆಯೂ ಆಗುತ್ತದೆ. ಯಾಕೆಂದರೆ ಈ ಒಪ್ಪಂದದಲ್ಲಿ ಅಮೆರಿಕದ ಕಂಪನಿಗಳೊಂದಿಗೆ ಭಾರತವು 150 ಬಿಲಿಯನ್ ಡಾಲರ್‌ಗಳಷ್ಟು ವಹಿವಾಟನ್ನು ನಡೆಸಬೇಕಿದೆ! ಈಗ ಯಾಕೆ ಅಮೆರಿಕ ಇದರ ಬಗ್ಗೆ ಯಾಕಿಷ್ಟು ಕಾತರವಾಗಿದೆ ಎಂದು ಅರ್ಥವಾಯಿತಾ?!

ಕೇವಲ ರಿಯಾಕ್ಟರ್‌ಗಳು ಮಾತ್ರವಲ್ಲ, ಅಮೆರಿಕದ ಕಂಪೆನಿಗಳು ತಯಾರಿಸುವ ಯುದ್ಧ ವಿಮಾನಗಳು, ಸಮರ ನೌಕೆಗಳು, ರಡಾರ್‌ಗಳು ಮತ್ತಿತರ ಯುದ್ಧೋಪಕರಣಗಳನ್ನು ಹಾಗೂ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಖರೀದಿಸುವ ಅನಿವಾರ್ಯತೆಗೆ ಭಾರತವು ಒಳಗಾಗುತ್ತದೆ. ಅಂದರೆ ಇಲ್ಲಿನ ಬಡತನ, ನಿರುದ್ಯೋಗ, ಹಸಿವು, ದಾರಿದ್ರ್ಯದಂತಹ ಜ್ವಲಂತ ಸಮಸ್ಯೆಗಳನ್ನು ಪರಿಹರಿಸುವ ಬದಲಾಗಿ ಭಾರತವು ತನ್ನೆಲ್ಲಾ ಹಣವನ್ನು ಶಸ್ತ್ರಾಸ್ತ್ರ ಖರೀದಿಸಲು ಉಪಯೋಗಿಸಿ ಮತ್ತಷ್ಟು ದಾರಿದ್ರ್ಯಕ್ಕೆ ದೂಡಲ್ಪಡುತ್ತದೆ. ಇದರಿಂದ ಬೃಹತ್ ಪ್ರಮಾಣದ ಲಾಭ ಅಮೆರಿಕದ ಕಂಪೆನಿಗಳಿಗಾಗುತ್ತದೆಯೇ ಹೊರತು ಭಾರತಕ್ಕಲ್ಲ, ಭಾರತೀಯರಿಗಲ್ಲ.

ಇದೆಲ್ಲದರೊಂದಿಗೆ, ಇವತ್ತು ಜಗತ್ತನ್ನು ನಿಯಂತ್ರಿಸುವ ತನ್ನ ಯೋಜನೆಯಲ್ಲಿ ಭಾರತವನ್ನೂ ಪಾಲುದಾರನನ್ನಾಗಿ ಮಾಡಿಕೊಳ್ಳಲು ಅಮೆರಿಕ ಹವಣಿಸುತ್ತಿದೆ. ಇದಕ್ಕೆ ಎರಡು ಕಾರಣಗಳಿವೆ. ಮೊದಲನೆಯದು ಭಾರತವು ಇರಾಕ್ ಯುದ್ಧದ ಸಮಯದಲ್ಲಿ ಇರಾಕ್ ವಿರೋಧಿ ನಿಲುವನ್ನು ತಳೆಯುವ ಮೂಲಕ ಅಮೆರಿಕಕ್ಕೆ ತನ್ನ ಬೆಂಬಲ ಸೂಚಿಸಿದ್ದು. ಎರಡನೆಯದು ರಷಿಯಾ, ಚೀನ ಮತ್ತು ಮಧ್ಯ ಏಶಿಯಾದ ಇನ್ನಿತರ ರಾಷ್ಟ್ರಗಳು **Shanghai Cooperation Organization** ಎಂಬ ಸಂಘಟನೆಯನ್ನು ಕಟ್ಟಿಕೊಂಡು ಏಶಿಯಾದಲ್ಲಿ ಅಮೆರಿಕಕ್ಕೆ ಸೆಡ್ಡು ಹೊಡೆಯುತ್ತಿರುವುದು. ಇಂತಹ ಪರಿಸ್ಥಿತಿಯಲ್ಲಿ ಏಶಿಯಾದ ಬೃಹತ್ ರಾಷ್ಟ್ರಗಳಲ್ಲೊಂದಾದ ಭಾರತವು ತನ್ನೊಂದಿಗಿರುವುದು ಅಮೆರಿಕಕ್ಕೆ ಬೇಕಿದೆ. ಹೆಚ್ಚಾಗುತ್ತಿರುವ ಅಮೆರಿಕ-ಇಸ್ರೇಲ್-ಇಂಡಿಯಾ ಸಹಯೋಗವು ಏಶಿಯಾದಲ್ಲಿ ಅಮೆರಿಕ ಹುನ್ನಾರದ ಭಾಗವಷ್ಟೆ. ಈ ಹಿನ್ನೆಲೆಯಲ್ಲಿಯೂ ಅಮೆರಿಕ ಈ ಒಪ್ಪಂದಕ್ಕೆ ಮುಂದಾಗಿದೆ.

ಸಮಾನತೆ, ಸ್ವಾವಲಂಬನೆ ಮತ್ತು ಇನ್ನಿತರ ದೇಶಗಳ ಜನತೆಯೊಂದಿಗೆ ಸೌಹಾರ್ದತೆ — ಇವೇ ನಮ್ಮ ದೇಶದ ವಿದೇಶಾಂಗ ನೀತಿಯ ಅಡಿಸೂತ್ರಗಳು. ಈ ಒಪ್ಪಂದ ಎಲ್ಲಾ ತತ್ವಗಳನ್ನು ಗಾಳಿಗೆ ತೂರುತ್ತದೆ. ಈ ತತ್ವಗಳನ್ನು, ನಮ್ಮ ದೇಶದ ಸಾರ್ವಭೌಮತೆಯನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಈ ಒಪ್ಪಂದವನ್ನು ವಿರೋಧಿಸಬೇಕಿದೆ. ಈ ಒಪ್ಪಂದ ಜಾರಿಯಾಗದಂತೆ ಅಮೆರಿಕದ ಒತ್ತಡಕ್ಕೆ ಮಣಿಯುತ್ತಿರುವ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರದ ಮೇಲೆ ಎಲ್ಲರೂ ಒತ್ತಡ ತರಬೇಕಿದೆ. ■



ತಿರುಪತೀಲಿ ಏಡ್ಸ್ ಭೂತ!

ಲೋಕಪ್ರಸಿದ್ಧ ತಿರುಪತಿ ಮೇಲೆ ಏಡ್ಸ್ ಬಾಂಬ್ ಬಿದ್ದಿದೆ. ಇಡೀ ಇಂಡಿಯಾದಲ್ಲಿ ಅತೀ ವೇಗವಾಗಿ ಹರಡುತ್ತಿರುವ Aids Hubಗಳ ಪೈಕಿ ತಿರುಪತಿಯೂ ಒಂದು ಎಂದು ಕಳೆದ ಶುಕ್ರವಾರ ಒಂದು ಸುದ್ದಿ ಹೊರಟಿತಲ್ಲ, ಇದನ್ನು ಹೇಳಿದ ವ್ಯಕ್ತಿ ಯಾರೋ ಅನಾಮಿಕನಲ್ಲ, ನಾಸ್ತಿಕನೂ ಅಲ್ಲ ಆತ ಸ್ವತಃ ಆಂಧ್ರ ಪ್ರದೇಶ ಸ್ಟೇಟ್ ಏಡ್ಸ್ ಕಂಟ್ರೋಲ್ ಸೊಸೈಟಿಯ ಮುಖ್ಯಸ್ಥ ಕೆ. ಚಂದ್ರವದನ್. ಇದು ಕೂಡಲೇ ಭಾರಿ ಸುದ್ದಿಯಾಯಿತು. ಅದು ಸಹಜ ಕೂಡ. ತಿರುಪತಿ ಲಾಡು ವಿತರಣೆಯಷ್ಟೇ ಸಲೀಸಾಗಿ ಅಲ್ಲಿ ಅನಾಮತ್ತು ಮೂರೂವರೆ ಸಾವಿರದಷ್ಟು ವೇಶ್ಯೆಯರು ಪ್ರತಿನಿತ್ಯ ದಂಧೆ ನಡೆಸುತ್ತಾ ಏಡ್ಸ್ ಪ್ರಸಾದವನ್ನು ಹಂಚುತ್ತಾ ಕುಳಿತರೆ ಯಾರಿಗೆ ತಾನೆ ಗಾಬರಿ ಆಗಲ್ಲ ಹೇಳಿ?

ನಿಮಗೆ ಗೊತ್ತಿರದಿದ್ದರೆ ಈ ಅಂಕಿಅಂಶಗಳತ್ತ ನೋಡಿ.

ನಿತ್ಯ ತಿರುಪತಿಗೆ ಹೋಗಿ ಬರುವ ಭಕ್ತರ ಸಂಖ್ಯೆ ಐವತ್ತು ಸಾವಿರದಷ್ಟಿದೆ. ಇಲ್ಲಿಗೆ ವರ್ಷಕ್ಕೆ ಎರಡು ಕೋಟಿ ಜನ ಬಂದುಹೋಗುತ್ತಾರೆ. 200 ಕೋಟಿ ಕ್ಯಾಷ್, 700 ಕೆ.ಜಿ. ಬಂಗಾರ, ಜೊತೆಗೆ ಲೆಕ್ಕ ಬುಕ್ಕಿಗೆ ಸಿಗದಷ್ಟು ದಾನ, ಹುಂಡಿ ಕಾಸು, ಕೊಡುಗೆಗಳು ಬಂದು ಬೀಳುತ್ತಿರುತ್ತವೆ. ಅಷ್ಟೆಲ್ಲಾ ಯಾಕೆ ತಿರುಪತಿಗೆ ಹೋಗಿ ಬೋಡು ಹೊಡೆಸಿಕೊಂಡು ಬರುವ ಭಕ್ತರ ಕೂದಲನ್ನು ದೇವಸ್ಥಾನದ ಆಡಳಿತ ಮಂಡಳಿ ಮಾರಿಕೊಂಡು ಕೋಟಿಗಟ್ಟಲೆ ಹಣ ಮಾಡಿಕೊಳ್ಳುತ್ತಿದೆ.

ನಿತ್ಯ ಹಣದ ಮಳೆ ಬೀಳುವ ಪುಣ್ಯ ಕ್ಷೇತ್ರವಿದು.

ಆದರೆ ಇದೇ ತಿರುಪತಿಗೆ ಇರುವ ಇನ್ನೊಂದು ಕರಾಳ ಮುಖ ಏನೆಂದರೆ ವೇಶ್ಯಾವಾಟಿಕೆಯದ್ದು. ತಿರುಪತಿ ದೇವಸ್ಥಾನಕ್ಕೂ ಈ ದಂಧೆಗೂ ಯಾವುದೇ ನೇರ ಸಂಬಂಧವಿಲ್ಲ ನಿಜ. ಆದರೆ ದೇವರನ್ನು ತೋರಿಸಿ ಭಕ್ತರ ಜೇಬು ಬರಿದು ಮಾಡುತ್ತಾ ಕುಳಿತಿರುವ ಜನಕ್ಕೆ ಒಂದು ಧಾರ್ಮಿಕ ಕ್ಷೇತ್ರದ ವಾತಾವರಣವನ್ನು ಕೊಳಕುತನದಿಂದ ಮುಕ್ತವಾಗಿಟ್ಟುಕೊಳ್ಳಬೇಕೆಂಬ ಕಾಮನ್‌ಸೆನ್ಸೂ ಇಲ್ಲವಲ್ಲ ಎಂದು ಅಸಹ್ಯ ಹುಟ್ಟುತ್ತದೆ.

ಕರ್ನಾಟಕದಿಂದಲೂ ನಿತ್ಯ ಸಾವಿರಾರು ಭಕ್ತರು ಲಾರ್ಡ್ ವೆಂಕಟೇಶ್ವರನ ದರ್ಶನಕ್ಕೆ ಹೋಗುತ್ತಿರುತ್ತಾರಾದ್ದರಿಂದ ಅವರಲ್ಲಿ ಕೆಲವರೇನಾದರೂ ಆಕಸ್ಮಿಕವಾಗಿ ಈ ವೇಶ್ಯಾ ಸ್ತ್ರೀಯರ ದರ್ಶನ ಭಾಗ್ಯ ಪಡೆಯಲೂ ಹೋಗೇಬಿಟ್ಟರೆ ಒಂದು ಎಚ್ಚರವಿರಲಿ ಎಂಬ ಸದುದ್ದೇಶದಿಂದ ಈ ತಿರುಪತಿ ಏಡ್ಸ್ ಪುರಾಣದ ಬಗ್ಗೆ ವಿವರವಾಗಿ ಬರೆಯಬೇಕಾಗಿದೆ.

ಆಂಧ್ರ ಏಡ್ಸ್ ಸೊಸೈಟಿಯ ಚಂದ್ರವದನ್ ತಿರುಪತಿ ಏಡ್ಸ್ ಬಗ್ಗೆ ಮಾತನಾಡಿದ ಕೂಡಲೇ ಎಲ್ಲೆಡೆ ಹಾಹಾಕಾರ ವೆದ್ದಿತಲ್ಲ, ಆಗ ಕೆ.ವಿ. ರಮಣಾಚಾರಿ ಎಂಬಾತ ಇನ್ನೊಂದು ಪತ್ರಿಕಾಗೋಷ್ಠಿ ನಡೆಸಿ ಇದೆಲ್ಲಾ ಊಹಾಪೋಹ ಅಷ್ಟೆ. ಈ ಬಗ್ಗೆ ಅಧಿಕೃತ ಅಧ್ಯಯನ ನಡೆದಿಲ್ಲ, ತಿರುಪತಿ ಬಹಳ ಸ್ವಚ್ಛವಾಗಿದೆ ಎಂದೆಲ್ಲಾ ಬಡಬಡಿಸಿದ್ದಾನೆ.


ರಮಣಾಚಾರಿ

ಈ ಅವಿವೇಕಿ ಬೇರೆ ಯಾರೂ ಅಲ್ಲ, ತಿರುಮಲ ತಿರುಪತಿ ದೇವಸ್ಥಾನಂ (TTD)ನ ಮುಖ್ಯಸ್ಥ ಆಡಳಿತಾಧಿಕಾರಿ. ಆದರೆ ಇವನ ಹೇಳಿಕೆ ಅಪ್ಪಟ ಸುಳ್ಳು ಎಂಬುದಕ್ಕೆ ನೂರಾರು ಸಾಕ್ಷಿಗಳು ಬೆಳಕಿಗೆ ಬರುತ್ತಿವೆ. ಈ ಮೂರ್ಖ ಅಧಿಕಾರಿ ಅಲ್ಲಿ ಏಡ್ಸ್ ರೋಗಿಗಳು ಜಾಸ್ತಿ ಇದ್ದಾರೆಂದು ಸಾಬೀತಾಗಿರುವ ಅಂಶವನ್ನೇ ಒಪ್ಪಿಕೊಂಡಿದ್ದರೆ ಆಕಾಶವೇನೂ ಕಳಚಿ ಬೀಳುತ್ತಿರಲಿಲ್ಲ ಅಥವಾ ಅಲ್ಲಿನ ದೇವರುಗಳು ತಿರುಪತಿ ತ್ಯಜಿಸಿ ಓಡಿಹೋಗುತ್ತಿರಲಿಲ್ಲ, ಬದಲಾಗಿ ಅಲ್ಲಿಗೆ ಬರುವ ಭಕ್ತಾದಿಗಳಿಗೆ ಒಂದು ಮುಂಜಾಗರೂಕತೆ ಹಾಗೂ ಎಚ್ಚರವಿರುತ್ತಿತ್ತು.

> ಕರ್ನಾಟಕದಿಂದಲೂ ನಿತ್ಯ ಸಾವಿರಾರು ಭಕ್ತರು ಲಾರ್ಡ್ ವೆಂಕಟೇಶ್ವರನ ದರ್ಶನಕ್ಕೆ ಹೋಗುತ್ತಿರುತ್ತಾರಾದ್ದರಿಂದ ಅವರಲ್ಲಿ ಕೆಲವರೇನಾದರೂ ಆಕಸ್ಮಿಕವಾಗಿ ಈ ವೇಶ್ಯಾ ಸ್ತ್ರೀಯರ ದರ್ಶನ ಭಾಗ್ಯ ಪಡೆಯಲೂ ಹೋಗೇಬಿಟ್ಟರೆ ಒಂದು ಎಚ್ಚರವಿರಲಿ ಎಂಬ ಸದುದ್ದೇಶದಿಂದ ಈ ತಿರುಪತಿ ಏಡ್ಸ್ ಪುರಾಣದ ಬಗ್ಗೆ ವಿವರವಾಗಿ ಬರೆಯಬೇಕಾಗಿದೆ.

ಆದರೆ ದೀಪದ ಕೆಳಗೆ ಕತ್ತಲು ಎನ್ನುವಂತೆ TTD ಪ್ರತಿಕ್ರಿಯಿಸುತ್ತಿದೆ. ಅಸಲಿ ದುರಂತ ಏನೆಂದರೆ ಈಗ ತಿರುಪತಿ ಸೇರಿದಂತೆ ಇಡೀ ಚಿತ್ತೂರು ಜಿಲ್ಲೆಯಲ್ಲಿ ಹತ್ತಿರತ್ತಿರ ಐದು ಸಾವಿರ ಎಚ್‌ಐವಿ ಪಾಸಿಟಿವ್ ರೋಗಿಗಳನ್ನು ಪತ್ತೆಹಚ್ಚಲಾಗಿದೆ. ಇವರೆಲ್ಲಾ ಅಧಿಕೃತವಾಗಿ ಪತ್ತೆಯಾಗಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳು. ಈಗ್ಗೆ ಕೆಲ ವರ್ಷಗಳ ಹಿಂದೆ ಸ್ವತಃ ತಿರುಪತಿಯಲ್ಲೇ 7050 ಶಂಕಾಸ್ಪದ ರೋಗಿಗಳ ರಕ್ತ ಪರೀಕ್ಷೆ ನಡೆಸಿ ನೋಡಿದಾಗ 4957 ಜನರಿಗೆ ಲೈಂಗಿಕ ರೋಗಗಳಿರುವುದು ಪತ್ತೆಯಾಗಿತ್ತು, ಅವರಲ್ಲಿ 3594 ಜನ ಗಂಡಸರಾದರೆ 1363 ಮಹಿಳೆಯರಾಗಿದ್ದರು. ಆಗಲೇ ತಿರುಪತಿಯಲ್ಲಿ ದಂಧೆ ನಡೆಸುತ್ತಿದ್ದ 54 ವೇಶ್ಯೆಯರನ್ನು ಪರೀಕ್ಷಿಸಿ ಅವರ ಪೈಕಿ 14 ಜನರಿಗೆ ಎಚ್‌ಐವಿ ಇರುವುದು ಪತ್ತೆ ಮಾಡಲಾಗಿತ್ತು. ಈಗ 3500 'ವೇಶ್ಯೆಯರು ತಿರುಪತಿಗೆ ಬರುವ ಭಕ್ತಾದಿಗಳಲ್ಲಿ ಕೆಲವರನ್ನು ಪುಸಲಾಯಿಸಿ ಕರೆದೊಯ್ದರೆ ದಿನವೊಂದಕ್ಕೆ ಕೊನೆಗೆ ತಿಂಗಳಿಗೆಷ್ಟು ಜನರಿಗೆ ಎಚ್‌ಐವಿ ಸೋಂಕು ಪ್ರಸಾದ ವಿತರಿಸಿ ಬೀಳ್ಕೊಡುತ್ತಿರಬಹುದು ಯೋಚಿಸಿ ನೋಡಿ.


ಚಂದ್ರವದನ್

ಬಡವರ ತಿರುಪತಿಯ ಕರಾಳ ಮುಖ

ಕಡಪಾ, ಬೆಂಗಳೂರು, ಚೆನ್ನೈ ಹ್ಯಾಗೂ ನೆಲ್ಲೂರು ಹೈವೆ ರಸ್ತೆಗಳು ಹಾದುಹೋಗುವ ಸ್ಥಳಕ್ಕೆ ಅತೀ ಹತ್ತಿರವಿರುವ ಶ್ರೀಮಂತ ತಿರುಪತಿಗೆ ಬಡತನದ ಕರಾಳ ಮುಖವೂ ಇದೆ. ಲಾರ್ಡ್ ತಿಮ್ಮಪ್ಪನ ಗೋವಿಂದಾ ಗೋವಿಂದ್ಾ ಅಬ್ಬರದಲ್ಲಿ ಈ ಬಡವರ, ಹತಭಾಗ್ಯರ ರೋದನ ಇದುವರೆಗೂ ಕೇಳಿರಲಿಲ್ಲ ಅಷ್ಟೆ. ತಿರುಪತಿ ಚಿತ್ತೂರು ಜಿಲ್ಲೆಯ ಭಾಗ. ಇದೇ ಚಿತ್ತೂರು, ಪಕ್ಕದ ಅನಂತಪುರ ಜಿಲ್ಲೆಗಳು ಆಂಧ್ರದ ಅತೀ ಬಡಜನರಿರುವ ಪ್ರದೇಶಗಳೂ ಹೌದು. ಇಲ್ಲಿ ಮಹಿಳೆಯರ ಮಾರಾಟ, ವೇಶ್ಯಾ ದಂಧೆಗೆ ದೊಡ್ಡ ಇತಿಹಾಸವೇ ಇದೆ. ಇದೇರೀತಿ ಪೂರ್ವ ಹಾಗೂ ಪಶ್ಚಿಮ ಗೋದಾವರಿ ಜಿಲ್ಲೆಗಳಲ್ಲೂ ಬಡ ಮಹಿಳೆಯರ ಮಾರಾಟ ವ್ಯವಸ್ಥಿತವಾಗಿ ನಡೆದುಕೊಂಡು ಬರುತ್ತಿದೆ.

ತೆನಾಲಿ, ನಿಡದವೊಲೆ, ವೆಲುಪುರಂ, ತಮುಕು ಗ್ರಾಮಗಳಲ್ಲಿ ಹಾಡುಹಗಲೇ ಹೆಂಗಸರ ಹರಾಜು ನಡೆಯುತ್ತಿರುತ್ತದೆ. ಇಲ್ಲಿ 20 ರಿಂದ 70 ಸಾವಿರಕ್ಕೆ ಬಿಕರಿಯಾಗುವ ಮಹಿಳೆಯ ರನ್ನು ಮುಂಬೈ, ಪೂನಾ, ಹುಬ್ಬಳ್ಳಿಗಳಿಗೆ ವರ್ಷದ ಗುತ್ತಿಗೆ ಮೇರೆಗೆ ದಲ್ಲಾಳಿಗಳು ಕರೆದೊಯ್ದು ಬ್ರಾಥೆಲ್‌ಗಳಿಗೆ ತಂದಿಳಿಸುತ್ತಾರೆ. ಅದೇ ರೀತಿ ಕೆಲವರನ್ನು ಚೆನ್ನೈಗೂ ಸಾಗಿಸ ಲಾಗುತ್ತದೆ. ಹಾಗೆ ಗೋದಾವರಿ, ಅನಂತಪುರ ಹಾಗೂ ಚಿತ್ತೂರಿನ ಒಳ ಗ್ರಾಮೀಣ ಪ್ರದೇಶ ಗಳಿಂದ ಚೆನ್ನೈ ಕಡೆಗೆ ಪ್ರಯಾಣ ಬೆಳೆಸುವವರ ಮೊದಲ ತಂಗುದಾಣವೇ ತಿರುಪತಿ!

ತಿರುಮಲ ಬೆಟ್ಟದ ಮೇಲಿನ ದೇವಸ್ಥಾನವಿರುವ ಜಾಗವಾದರೆ ಬೆಟ್ಟದ ಕೆಳಭಾಗ ಅನೇಕ ಹಳ್ಳಿಗಳಿಂದ ಸುತ್ತುವರೆದಿದೆ. ಬೊಗ್ಗೇರು, ಯರ್ರಗೊಂಡಪಲ್ಲಿ, ಗುಂಡಲಿಕಮ್ಮ, ಸುಗಲೇರು, ವೆಂಕಟರಾಜಪಲ್ಲಿ ಮುಂತಾದೆಡೆ ಉಳಿದುಕೊಳ್ಳುತ್ತದೆ ಈ ಗುಂಪು. ಈ ಏರಿಯಾಗಳಲ್ಲಿ ಬ್ರಾಥೆಲ್ ದಂಧೆಕೋರರಿಗೆ ಪುರಾತನ ಸಂಪರ್ಕಗಳಿವೆ.

ಆಂಧ್ರ ಏಡ್ಸ್ ಸೊಸೈಟಿಯ ಚಂದ್ರವದನ್ ಹೇಳುತ್ತಿರುವ ಪ್ರಕಾರ ತಿರುಪತಿ ಏರಿಯಾದಲ್ಲಿ ಕನಿಷ್ಠ ಮೂರುವರೆ ಸಾವಿರ ವೇಶ್ಯೆಯರಿದ್ದಾರೆ. ಬೆಟ್ಟದ ಬುಡದಲ್ಲೇ ನಿತ್ಯ ಯಾತ್ರಿಗಳ ಪ್ರವಾಹ ಹರಿದು ಬರುತ್ತಿರುತ್ತದೆ. ಅಲ್ಲೇ ಗಿರಾಕಿಗಳನ್ನು ಕುದುರಿಸಿಕೊಳ್ಳುವ ದಲ್ಲಾಳಿಗಳು ಮನೆ, ಲಾಡ್ಜುಗಳಿಗೆ ಕರೆದೊಯ್ಯುತ್ತಿರುತ್ತಾರೆ. ತೀರಾ ದರವೇಶಿ ಗಿರಾಕಿಗಳಿಗೆ ಬಯಲಾನಂದ ಸೌಲಭ್ಯ ನೀಡಲೂ ಇವರು ಹಿಂಜರಿಯುವವರಲ್ಲ.

ಈ ವೇಶ್ಯೆಯರ ಪೈಕಿ ನಿತ್ಯ ಇನ್ನೂರು-ಮುನ್ನೂರು ಜನರಾದರೂ ತಿರುಮಲ ಬೆಟ್ಟವೇರಿಯೂ ಹೋಗಿ ದಂಧೆ ಕುದುರಿಸುತ್ತಾರೆಂದೂ ಚಂದ್ರ ವದನ್ ಹೇಳಿದ್ದಾರೆ.

ಅಲ್ಲಿ ನೂರಾರು ಯಾತ್ರಿ ತಂಗುದಾಣಗಳಿವೆಯಾದ್ದರಿಂದ ಯಾವನೋ ಇನ್ಯಾವಳನ್ನೋ ಜೊತೆ ಮಾಡಿಕೊಂಡು ಗಂಡ ಹೆಂಡತಿಯಂತೆ ಪೋಜ್ ನೀಡಿ ರೂಂ ತಗೊಳ್ಳಬಹುದಲ್ಲ, ಇಂಥ ಚಟ ಇರುವವರಿಗೆ ದೇವರ ಸನ್ನಿಧಿಯಾದರೇನು, ಪುಣ್ಯಕ್ಷೇತ್ರವಾದರೇನು?

ಇಲ್ಲಿ ಅನೈತಿಕ ನಡವಳಿಕೆಯ ಪ್ರಶ್ನೆ ಒಂದಾದರೆ ಈ ವೇಶ್ಯೆಯರಲ್ಲಿ ಬಹುತೇಕರು ಎಚ್‌ಐವಿ ಪಾಸಿಟಿವ್ ಆಗಿರುವುದೇ ನಿಜವಾದ ಅಪಾಯ. ಅಂಕಿಅಂಶಗಳೇ ದೃಢಪಡಿಸಿರುವಂತೆ ಇವರಲ್ಲಿ ಶೇ. 40 ಜನರು ಈಗಾಗಲೇ ಏಡ್ಸ್ ಹಂತ ತಲುಪಿದ್ದಾರೆ.

ಎಚ್ಚರ

ಕೇವಲ ಭಕ್ತಿಯಿಂದ ದೇವರ ದರ್ಶನಕ್ಕಾಗಿ ತಿರುಪತಿಗೆ ಹೋದವರಡ್ಡಿಯಿಲ್ಲ, ಆದರೆ ಅಲ್ಲಿ ಬರೀ ತಿಮ್ಮಪ್ಪನ ದೇವಸ್ಥಾನ ಮಾತ್ರವಲ್ಲ, ಏಡ್ಸಮ್ಮನೂ ಹೊಂಚು ಹಾಕಿ ಕಾಯುತ್ತಿದ್ದಾಳೆ.

ನಿಮ್ಮ ಎಚ್ಚರ ನಿಮಗಿರಲಿ. ■

ಸಾಕ್ಷಿ ಎಷ್ಟು ಬೇಕು?

ತಿರುಪತೀಲಿ ಏಡ್ಸೂ ಇಲ್ಲ, ಎಂಥದ್ದೂ ಇಲ್ಲ ಅಂತ ದೇವಸ್ಥಾನದವರು ಹೇಳುತ್ತಿರುವುದೆಲ್ಲಾ ಬರೀ ಬೊಗಳೆ.

ಅಲ್ಲಿ ಸಾವಿರಾರು ಏಡ್ಸ್ ರೋಗಿಗಳಿದ್ದಾರೆ. ಅದಕ್ಕೆ ಬಡತನ, ಅಜ್ಞಾನ, ಅಸಹಾಯಕತೆಗಳೇ ಕಾರಣವಾಗಿರಬಹುದು. ಆದರೆ ಹಾಗೆಂದು ಈ ವಿಚಾರ ಮುಚ್ಚಿಟ್ಟರೆ ಇನ್ನಿತರ ಸಾವಿರಾರು ಅಮಾಯಕರು ಬಲಿಪಶುಗಳಾಗುತ್ತಲೇ ಹೋಗುತ್ತಾರೆ.


ಮುಖ್ಯವಾಗಿ ಸುರಕ್ಷಿತವಲ್ಲದ ವೇಶ್ಯಾವಾಟಿಕೆ ದಂಧೆಯೇ ಈ ರೋಗ ಹಬ್ಬಲು ಕಾರಣವಾಗಿದೆ. ಒಂದೆರಡು ಉದಾಹರಣೆಗಳ ಮೂಲಕ ಇದನ್ನು ವಿವರಿಸಬೇಕೆಂದರೆ ಈ ದಿನ ಇಡೀ ದೇಶದಲ್ಲಿ ಅತೀ ಹೆಚ್ಚು ಏಡ್ಸ್ ಪ್ರಕರಣಗಳು ದಾಖಲಾಗಿರುವುದು ಮಹಾರಾಷ್ಟ್ರದಲ್ಲಿ, ಅದರ ನಂತರದ ಸ್ಥಾನವೇ ಆಂಧ್ರದ್ದು. ಮತ್ತೆ ಆಂಧ್ರದಲ್ಲಿ ಅತೀ ಹೆಚ್ಚು ಏಡ್ಸ್ ರೋಗಿಗಳು ಚಿತ್ತೂರಿನಲ್ಲಿದ್ದಾರೆ. ತಿರುಪತಿ ಸೇರುವುದು ಚಿತ್ತೂರು ಜಿಲ್ಲೆಗೇನೆ. ಅಷ್ಟೇ ಅಲ್ಲ ಆಂಧ್ರದಲ್ಲಿ ಏಡ್ಸ್ ಬಗ್ಗೆ ಕೆಲಸ ಮಾಡುತ್ತಿರುವ ಬಹುತೇಕ NGO ಗಳ ಕೇಂದ್ರ ಸ್ಥಾನ ತಿರುಪತಿಯೇ ಆಗಿದೆ. ACCESS, ಅಕಾಡೆಮಿ ಆಫ್ ಗಾಂಧಿಯನ್ ಸ್ಟಡೀಸ್ ಹಾಗೂ ದೆಹಲಿ ನೆಲೆಯ ಜನಶಕ್ತಿ ಗುಂಪಿಗೆ ತಿರುಪತಿಯಲ್ಲಿ ಕಚೇರಿಗಳಿವೆ. ಅಲ್ಲಿ ವರ್ಷಕ್ಕೆ ಹತ್ತಾರು ಏಡ್ಸ್ ಕುರಿತ ಸೆಮಿನಾರುಗಳು, ವರ್ಕ್‌ಶಾಪ್‌ಗಳು, ಅಧ್ಯಯನಗಳು ನಡೆಯುತ್ತಿರುತ್ತವೆ. ತೀರಾ ಇತ್ತೀಚೆಗೆ ACCESS ಎಂಬ NGO 2008 ರ ಜೂನ್ 8 ರಂದು ತಿರುಪತಿಯಲ್ಲೇ 100 ಎಚ್‌ಐವಿ ಬಾಧಿತ ಮಕ್ಕಳಿಗೆ ಶಾಲಾ ಕಿಟ್ ವಿತರಿಸಿತ್ತು, ಸ್ಥಳೀಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮ್ಯಾನೇಜರ್ ವೆಂಕ ಟೇಶ್ವರಲು ಇದರಲ್ಲಿ ಭಾಗವಹಿಸಿದ್ದ. ಆಂಧ್ರ ಏಡ್ಸ್ ಕಂಟ್ರೋಲ್ ಸೊಸೈಟಿಯ ಚಂದ್ರವದನ್ ಮೊನ್ನಿನ ವರದಿಯಲ್ಲೇ ಇನ್ನೊಂದು ಅಂಶವಿದೆ.

ಇದುವರೆಗೂ ಚಿತ್ತೂರು ಜಿಲ್ಲೆಯಲ್ಲಿ 628 ಎಚ್‌ಐವಿ ಬಾಧಿತ ಗರ್ಭಿಣಿಯರು ಮಗು ಹೆಡೆದಿದ್ದಾರೆ. ಅವರ ಪೈಕಿ ತಿರುಪತಿ ಸರ್ಕಾರಿ ಆಸ್ಪತ್ರೆಯೊಂದರಲ್ಲೇ ಇದುವರೆಗೂ 559 ಗರ್ಭಿಣಿಯರು ಅಡ್ಮಿಟ್ ಆಗಿದ್ದರಂತೆ. 2008 ರ ಮೇ 24 ರಂದು ಕೇಂದ್ರ ಸರ್ಕಾರಿ ಪ್ರಾಯೋಜಿತ ಏಡ್ಸ್ ಜಾಗೃತಿ ಉದ್ದೇಶದ ವಿಶೇಷ ರೈಲು ತಿರುಪತಿಗೆ ಬಂದು ಕೆಲ ದಿನ ನಿಂತುಹೋಗಿದ್ದೂ ಉಂಟು.

ಇದೇ ತಿರುಪತಿಯ ವೆಂಕಟೇಶ್ವರ ವಿಶ್ವವಿದ್ಯಾಲಯದ ವಸಂತಕುಮಾರಿ ಎಂಬ ಅಧಿಪತಿ ವೇಶ್ಯಾವಾಟಿಕೆ ನಡೆಸುತ್ತಾ ಸಿಕ್ಕಿ ಬಿದ್ದು ಈಗ ಜೈಲು ಸೇರಿದ್ದಾಳೆ.

ತಿರುಪತಿ ಸೇರಿದಂತೆ ಇಡೀ ಚಿತ್ತೂರು ಜಿಲ್ಲೆಯನ್ನು ಏಡ್ಸ್ ಅಧ್ಯಯನ ಸಂಸ್ಥೆಗಳು 'High risk zone' ಎಂದೇ ಪರಿಗಣಿಸಿ ಪರಿಹಾರ ಕಾರ್ಯ ಕೈಗೊಂಡಿವೆ.

ಅಂದಹಾಗೆ ತಿರುಪತಿ ದೇವಸ್ಥಾನದ ಧನದಾಹಿ, ಪುರೋಹಿತರು ಒಂದೇ ಒಂದು ಚಿಕ್ಕಾಸನ್ನೂ ಈ ಒಳ್ಳೇ ಕಾರ್ಯಕ್ಕೆಂದು ಕೊಡುತ್ತಿಲ್ಲ. ■


ತಿರುಪತಿಗೆ ಏಡ್ಸ್ ಜಾಗೃತಿ ರೈಲು ಬಂದಾಗ....

ಏಡ್ಸ್ ಬೇಕಾದರೆ ಇರಲಿ ದಲಿತರ ದೇವರು ಬೇಡ

ಇದು ತಿರುಮಲ ತಿರುಪತಿ ದೇವಸ್ಥಾನದ ಪುರೋಹಿತರ ವಕ್ರಬುದ್ಧಿಗೆ ಒಂದು ನಿದರ್ಶನ.

ಕಳೆದ 10-15 ವರ್ಷಗಳಿಂದಲೂ ತಿರುಪತಿಯಲ್ಲಿ ಏಡ್ಸ್ ಹರಡುತ್ತಿರುವ ಬಗ್ಗೆ ಅನೇಕ ಎನ್‌ಜಿಒಗಳು ಆರೋಗ್ಯ ತಜ್ಞರು ವ್ಯಾಪಕ ಅಧ್ಯಯನ ನಡೆಸಿ ವರದಿ ನೀಡಿದ್ದಾರೆ. ಅಂಕಿ ಅಂಶ ಸಂಗ್ರಹಣೆ ಈಗಲೂ ನಡೆಯುತ್ತಲೇ ಇದೆ. ಬಡ ಏಡ್ಸ್ ರೋಗಿಗಳಿಗೆ, ಸತ್ತ ರೋಗಿಗಳ ಅನಾಥ ಮಕ್ಕಳಿಗೆ ನೆರವು ನೀಡುವ ಮಾನವೀಯ ಕೆಲಸಗಳು ನಡೆಯುತ್ತಿವೆ.

ಆದರೆ ವರ್ಷಕ್ಕೆ 300 ಕೋಟಿಗೂ ಹೆಚ್ಚು ಆದಾಯ ಎಣಿಸಿಕೊಳ್ಳುವ ದೇವಸ್ಥಾನದವರು ಮಾತ್ರ ಒಂದೇ ಒಂದು ಬಿಡಿಕಾಸನ್ನೂ ಈ ಕಾರ್ಯಕ್ಕೆ ಕೊಡುತ್ತಿಲ್ಲ.

ಇವರೆಂಥ ನೀಚರೆಂದರೆ ನಾಳೆ ಏಡ್ಸ್ ಪಿಡುಗು ಬೆಳೆದು ಬರುವ ಭಕ್ತರ ಸಂಖ್ಯೆ ಕಡಿಮೆಯಾಗಬಹುದೆಂಬ ಅಳುಕೂ ಇವರಿಗಿಲ್ಲ. ಮುಖ್ಯವಾಗಿ ಮನುಷ್ಯತ್ವವಿರದ ಜನರಿವರು.

'ತಿರುಪತೀಲಿ ಏಡ್ಸ್ ಇಲ್ಲವೇ ಇಲ್ಲ' ಎಂಬ ಒಂದು ಪ್ರವರ ಬಿಟ್ಟರೆ ಇವರಿಗೆ ವಾಸ್ತವ ಒಪ್ಪಿಕೊಳ್ಳಬೇಕೆಂಬ ವಿವೇಕ ಮತ್ತು ಈ ಪಿಡುಗನ್ನು ನಿವಾರಿಸಲು ಏನು ಮಾಡಬೇಕೆಂಬ ಬಗ್ಗೆ ಎಚ್ಚರವೇ ಇಲ್ಲ.

ಮತ್ತೊಂದೆಡೆ ಇವರ ಮೇಲ್ಜಾತಿ ದುರಹಂಕಾರ ಹೇಗಿದೆ ಅಂದರೆ ಇತ್ತೀಚೆಗೆ ದಲಿತ ದೇವರಾದ 'ಸ್ವಾಮಿ'ಗೆ ಅವಮಾನ ಮಾಡಿದ ಘಟನೆಯೇ ಸಾಕ್ಷಿ.

ತಿರುಪತಿ ಮುಖ್ಯ ದೇವಸ್ಥಾನದ ಒಳಗಡೆ ಇದ್ದ 'ಸ್ವಾಮಿ'ಯೆಂಬ ದೇವರನ್ನು ಕೆಲ ತಿಂಗಳ ಹಿಂದೆ ಹೊರತಂದು ಆಂಧ್ರದ ಕೆಲ ಭಾಗಗಳ ದಲಿತರ ಕೇರಿಗಳಿಗೆ ಒಯ್ಯಲಾಗಿತ್ತು. ಹೀಗೆ ಯಾತ್ರೆ ಮಾಡಿಕೊಂಡು ಕೊನೆಗೆ 'ಸ್ವಾಮಿ' ದೇವರು ಮತ್ತೆ ತಿರುಪತಿಗೆ ಬಂದ ಮೇಲೆ ಆ ದೇವರ ಮೂಲ ಸ್ಥಾನಕ್ಕೆ ತಂದು ಪ್ರತಿಷ್ಠಾಪಿಸಬೇಕಿತ್ತಲ್ಲವೇ?

ಆದರೆ ಹಾಗಾಗಲೇ ಇಲ್ಲ, ಬದಲಾಗಿ ಈಗ 'ಸ್ವಾಮಿ' ದೇವರನ್ನು ಪೂಜಾರಿಗಳ ಗೋಡೌನ್ ಒಯ್ದು ಇಡಲಾಗಿದೆ. ಈಗ ಆಂಧ್ರದಲ್ಲಿ ಇದು ವಿವಾದವೆಬ್ಬಿಸಿದೆ. ದಲಿತ ಸಂಘಟನೆಗಳು ಪ್ರತಿಭಟಿಸುತ್ತಿವೆ.

ಆದರೆ ತಿರುಪತಿ ಪುರೋಹಿತರು ಮಾತ್ರ ಅಲ್ಲಾಡುತ್ತಿಲ್ಲ.

ಅವರು ಏಡ್ಸ್ ಅನ್ನು ಹೊರ ಹಾಕಲೂ ಒಲ್ಲರು, ದಲಿತ ದೇವರನ್ನೂ ಒಳ ಬಿಟ್ಟುಕೊಡಲೂ ಬಯಸರು. ■

ಯಡ್ಡಿ ದುರಾಡಳಿತ: ರೈತ ಶವಗಳ ಬೆಳೆ

ಚಿಕ್ಕಮಗಳೂರು ಸಮೀಪದ ಚಿಕ್ಕಮಾಗರಹಳ್ಳಿಯ ರೈತ ಅಶ್ವತ್ಥಗೌಡನ ಆತ್ಮಹತ್ಯೆಯೊಂದಿಗೆ ಯಡಿಯೂರಪ್ಪ ಮುಖ್ಯಮಂತ್ರಿಯಾದ ಮೇಲೆ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಬರೋಬ್ಬರಿ ಒಂದು ಡಜನ್ನಿಗೇರಿದೆ!

ಈ ವರದಿ ಅಚ್ಚಿಗೆ ಹೋಗುವ ಕೊನೇಗಳಿಗೆಯಲ್ಲಿ ಬಂದ ಸುದ್ದಿಯಿದು. ಜೂನ್ 21 ರ ಶನಿವಾರವಷ್ಟೇ ಮುಖ್ಯಮಂತ್ರಿಗಳು ತಮ್ಮ ಸ್ವಂತ ಕ್ಷೇತ್ರ ಶಿಕಾರಿಪುರಕ್ಕೆ ಹೋಗಿ ತನ್ನನ್ನು ತಾನೇ ಕೊಂದುಕೊಂಡ ಅಂಜನಾಪುರದ ರೈತ ನಾರಾಯಣಸ್ವಾಮಿಯ ಶವಕ್ಕೆ ಹಾರ ಹಾಕಿದ ಕೇವಲ 24 ಗಂಟೆಯೊಳಗೆ-ಅಂದರೆ ಜೂನ್ 22 ರ ಭಾನುವಾರ ರಾತ್ರಿ- ಚಿಕ್ಕಮಗಳೂರಿನ ಮತ್ತೊಬ್ಬ ರೈತ ಅಶ್ವತ್ಥಗೌಡ ನೇಣು ಬಿಗಿದುಕೊಂಡಿದ್ದ.

ಸೋಕಾಲ್ಡ್ ರೈತನಾಯಕ, ಕೇಸರಿ ಶಾಲು ಬದಿಗಿಟ್ಟು ಹಸಿರು ಶಾಲು ಹೊದ್ದು ರೈತನ ಮೇಲೆ ಆಣೆ ಮಾಡಿ ಪ್ರಮಾಣ ಮಾಡಿದ ಮನುಷ್ಯ ತನ್ನದೇ ಕ್ಷೇತ್ರದಲ್ಲಿ ಕ್ರಿಮಿನಾಶಕ ತಿಂದು ಆತ್ಮಹತ್ಯೆ ಮಾಡಿಕೊಂಡ ರೈತನೋರ್ವನ ಶವಕ್ಕೆ ಹಾರ ಹಾಕಿ ಕೊಟ್ಟ ಹೇಳಿಕೆಯಾದರೂ ಎಂಥಾದ್ದು?

"ನಾರಾಯಣಸ್ವಾಮಿ ಆತ್ಮಹತ್ಯೆಗೆ ಕೌಟುಂಬಿಕ ಕಲಹ ಕಾರಣವೇ ಹೊರತು ರಸಗೊಬ್ಬರದ ಕೊರತೆಯಲ್ಲ, ಕೌಟುಂಬಿಕ ಹಾಗೂ ವೈಯಕ್ತಿಕ ಸಮಸ್ಯೆಗಳಿಂದ ಖಿನ್ನತೆಗೊಳಗಾಗಿ ಆತ್ಮಹತ್ಯೆ ಮಾಡಿಕೊಂಡವರು ರಸಗೊಬ್ಬರದ ನೆಪ ಹೇಳುತ್ತಿದ್ದಾರೆ. ರಸಗೊಬ್ಬರ ಅಭಾವದಿಂದ ಆತ್ಮಹತ್ಯೆ ಮಾಡಿಕೊಂಡವರಿಗೆ ಸರ್ಕಾರ ಲಕ್ಷಾಂತರ ರೂಪಾಯಿ ಪರಿಹಾರ ನೀಡುತ್ತದೆ ಎನ್ನುವುದೇ ಪ್ರಚೋದನೆ ಕೊಟ್ಟಂತಾಗಿದೆ. ಈ ಕಾರಣಕ್ಕೆ ನನ್ನ ಸ್ವಂತ ಕ್ಷೇತ್ರದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತನಿಗೆ ವೈಯಕ್ತಿಕವಾಗಿ ನಾನು ಹತ್ತು ಸಾವಿರ ಮಾತ್ರ ಕೊಡುತ್ತಿದ್ದೇನೆ."



ಇದು ಅಂಜನಾಪುರದ ನಾರಾಯಣಸ್ವಾಮಿ ಆತ್ಮಹತ್ಯೆಗೆ ಶಿಕಾರಿಪುರದಲ್ಲಿ ಮುಖ್ಯಮಂತ್ರಿ ನೀಡಿದ ಹೇಳಿಕೆ. ಇದರರ್ಥ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಕ್ಕಿನ್ನು ಸರ್ಕಾರ ಪರಿಹಾರ ಕೊಡುವುದಿಲ್ಲ!

ಚೋದ್ಯವೇನು ಗೊತ್ತೆ? ಸತ್ತ ರೈತ ನಾರಾಯಣಸ್ವಾಮಿ ಕುಟುಂಬಕ್ಕೆ ಸರ್ಕಾರದ ವತಿಯಿಂದ ಒಂದು ಲಕ್ಷ ರೂಪಾಯಿ ಪರಿಹಾರದ ಘೋಷಣೆ ಮಾಡಿದ್ದ ಇದೇ ಶಿಕಾರಿಪುರದ ತಹಶೀಲ್ದಾರ್ ಮಲ್ಲಿಕಾರ್ಜುನಯ್ಯನವರಿಗೆ ಮುಖ್ಯಮಂತ್ರಿಯೇ ನಿಂತು ಷೋಕಾಸ್ ನೋಟೀಸು ಕೊಟ್ಟಿದ್ದಾರೆ!

ಇದರರ್ಥ ಆತ್ಮಹತ್ಯೆ ಮಾಡಿಕೊಂಡ ರೈತ ನಾರಾಯಣಸ್ವಾಮಿ ಕುಟುಂಬಕ್ಕೆ ಒಂದು ಲಕ್ಷದ ಪರಿಹಾರ ಘೋಷಿಸಿದ್ದೇ ತಹಶೀಲ್ದಾರ್ ಮಲ್ಲಿಕಾರ್ಜುನಯ್ಯ ಮಾಡಿದ ಮಹಾಪರಾಧ. ಜೂನ್ 20 ರ ರಾತ್ರಿ ನಾರಾಯಣಸ್ವಾಮಿ ಆತ್ಮಹತ್ಯೆ ಮಾಡಿಕೊಂಡದ್ದು ಮೇಲುನೋಟಕ್ಕೆ ಅಪ್ಪಮಕ್ಕಳ ಜಗಳವಾಗಿರಬಹುದು. ಆದರೆ ಕಾರಣ?

ಶಿಕಾರಿಪುರ ತಾಲ್ಲೂಕಿನ ಅಂಜನಾಪುರದ ರೈತ ನಾರಾಯಣಸ್ವಾಮಿಗೆ ಐದು ಹೆಣ್ಣು ಮತ್ತು ಇಬ್ಬರು ಗಂಡು ಮಕ್ಕಳು. ಎರಡೂವರೆ ಕೃಷಿ ಜಮೀನಿತ್ತು,

ಇನ್ನೂ ಐದೆಕರೆ ಭೂಮಿಯನ್ನು ಗುತ್ತಿಗೆಗೆ ಹಿಡಿದು ಉಳುಮೆ ಮಾಡಿಕೊಂಡಿದ್ದ, ಸಾಲದಿತ್ತು, ಈ ಮಧ್ಯೆ, ಜೂನ್ 14 ರಿಂದ ರಸಗೊಬ್ಬರಕ್ಕೆಂದು ಪ್ರತಿನಿತ್ಯ ಶಿಕಾರಿಪುರಕ್ಕೆ ಬರುತ್ತಿದ್ದ ನಾರಾಯಣಸ್ವಾಮಿಗೆ ಗೊಬ್ಬರ ಸಿಗುವುದು ವಿಳಂಬವಾದಾಗ ಪ್ರತಿನಿತ್ಯ ಹೋಗಿ ಬರುವ ಖರ್ಚಿಗೆಂದು ಗೊಬ್ಬರದ ದುಡ್ಡನ್ನೇ ಬಳಸಿಕೊಂಡ. ಊರಿನ ಕೆಲವರಿಗೆ ಗೊಬ್ಬರ ಸಿಕ್ಕಿತಾದರೂ ನಾರಾಯಣಸ್ವಾಮಿಗೆ ಮಾತ್ರ ಏಕೆ ಸಿಗಲಿಲ್ಲ? ಎಂದು ಇವತ್ತು ಯಡ್ಡಿ ತಿಪ್ಪೆ ಸಾರಿಸುತ್ತಿರುವುದಕ್ಕೆ ಉತ್ತರ ಕೂಡ ನಾರಾಯಣಸ್ವಾಮಿಯ ಆತ್ಮಹತ್ಯೆಯಲ್ಲೇ ಇತ್ತು.

ಯಾವತ್ತು ಗೊಬ್ಬರದ ದುಡ್ಡು ಅಲೆದಾಟದಲ್ಲಿ ಪೋಲಾಯಿತೋ ಕಂಗಾಲಾದ ನಾರಾಯಣಸ್ವಾಮಿ ತನ್ನ ಪರಿಚಿತ ಅಣ್ಣಪ್ಪನಿಗೆ ಮತ್ತೆ ಐದು ಸಾವಿರ ರೂಪಾಯಿ ಸಾಲ ಕೊಡುವಂತೆ ದುಂಬಾಲು ಬಿದ್ದ. ಸಾಲ ಕೊಡುವುದು ತಡವಾಗುತ್ತಿದ್ದಂತೆ ಗೊಬ್ಬರ ಖರೀದಿಯೂ ಮುಂದಕ್ಕೆ ಹೋಯಿತು. ಯಾವತ್ತು ಆರು ದಿನವಾದರೂ ಗೊಬ್ಬರ ಬರಲಿಲ್ಲವೋ ಜೂನ್ 20 ರ ರಾತ್ರಿ ಅಪ್ಪಮಕ್ಕಳ ಮಧ್ಯೆ ಜಗಳವಾಗಿದೆ. ಅದು ವಿಪರೀತಕ್ಕೆ ಹೋಗಿ ನಾರಾಯಣಸ್ವಾಮಿ ಅದೇ ರಾತ್ರಿ ಕ್ರಿಮಿನಾಶಕ ಪೌಡರ್ ನುಂಗಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಮೇಲ್ನೋಟಕ್ಕೆ ಇದು ಕೌಟುಂಬಿಕ ಜಗಳ ಇರಬಹುದು. ಅದಕ್ಕೆ ಕಾರಣ ರಸಗೊಬ್ಬರವೇ.

ಇದು ಗೊತ್ತಾಗಿಯೇ ಶಿಕಾರಿಪುರದ ತಹಶೀಲ್ದಾರ್ ಮಲ್ಲಿಕಾರ್ಜುನಯ್ಯ ನಾರಾಯಣಸ್ವಾಮಿಯ ಕುಟುಂಬಕ್ಕೆ ಸರ್ಕಾರದ ವತಿಯಿಂದ ಒಂದು ಲಕ್ಷ ರೂಪಾಯಿ ಪರಿಹಾರ ಕೊಡುತ್ತೇವೆಂದು ಘೋಷಿಸಿಬಿಟ್ಟರು. ತಹಶೀಲ್ದಾರ್ ಈ ರೀತಿ ಘೋಷಿಸಿದ್ದು ಕೂಡ ಮುಖ್ಯಮಂತ್ರಿ ಕಚೇರಿಯಿಂದ ಬಂದ ಆದೇಶಕ್ಕನುಗುಣವಾಗಿಯೇ.

ಆದರೆ ಕೊನೇಗಳಿಗೆಯಲ್ಲಿ ಉಲ್ಟಾ ಹೊಡೆದ ಯಡಿಯೂರಪ್ಪ ರೈತರ ಅಷ್ಟೂ ಆತ್ಮಹತ್ಯೆಗಳನ್ನು ಮುಚ್ಚಿಹಾಕಲು ತಂತ್ರ ರೂಪಿಸಿದ್ದಾರೆ. ಒಂದು ಲಕ್ಷ ರೂಪಾಯಿ ಪರಿಹಾರ ಘೋಷಿಸಿದ ತಹಸೀಲ್ದಾರ್‌ಗೇ ಷೋಕಾಸ್ ನೋಟೀಸ್ ಕೊಟ್ಟು ವೈಯಕ್ತಿವಾಗಿ ತಾನು ಹತ್ತು ಸಾವಿರ ಕೊಡುತ್ತೇನೆಂದು ಹೇಳಿಕೆ ಕೊಟ್ಟಿದ್ದಾರೆ.

ಇದು ಮುಖ್ಯಮಂತ್ರಿಯ ಇಬ್ಬಂದಿ ಬುದ್ಧಿಗೆ ಒಂದು ಉದಾಹರಣೆ ಮಾತ್ರ. ಈತನಕ ಆತ್ಮಹತ್ಯೆ ಮಾಡಿಕೊಂಡ ರೈತರ ಯಾವುದೇ ಪ್ರಕರಣವನ್ನು ಬಿಡಿಸಿ ನೋಡಿದರೂ ಆತ್ಮಹತ್ಯೆಗೆ ತಕ್ಷಣದ ಕಾರಣ ಬೇರೇನೋ ಇರುತ್ತದೆ. ಆದರೆ ಆಳದಲ್ಲಿ ಅದು ರೈತ ದಿವಾಳಿಯೆದ್ದಿದ್ದರ ಪ್ರತಿಫಲವೇ. ಈ ಹಿಂದೆ ಮಾಡಿದ ಸಾಲ, ಅವರಿವರಿಂದ ಪಡದ ಕೈ ಸಾಲ, ಸಾಲದ ಕಾರಣಕ್ಕೇ ಹುಟ್ಟಿಕೊಂಡ ವೈಯಕ್ತಿಕ ಸಮಸ್ಯೆಗಳು ಇದೆಲ್ಲದರ ಪರಿಣಾಮವಾಗಿ ತಕ್ಷಣದ ಪ್ರಸಂಗಗಳು ಅಂತಿಮವಾಗಿ ರೈತರ ಆತ್ಮಹತ್ಯೆಯಲ್ಲಿ ಪರ್ಯಾವಸನಗೊಳ್ಳುತ್ತಿದೆ.

ಶಿಕಾರಿಪುರದ ರೈತ ಆತ್ಮಹತ್ಯೆ ಮಾಡಿಕೊಂಡ ಹಿಂದಿನ ದಿನಕ್ಕೆ ನಾಲ್ವರು ರೈತರು ಆತ್ಮಹತ್ಯೆಗೆ ಒಳಗಾಗಿದರು. ಆನಂತರ ನಡೆದ ರೈತರ ಆತ್ಮಹತ್ಯೆಗಳು ಆದರೂ ಎಂತಹವು?



ಚಿಕ್ಕಮಗಳೂರು ಜಿಲ್ಲೆ ರಂಗೇರಿ ತಾಲ್ಲೂಕಿನ ಅಡ್ಡಗದ್ದೆ ಕೆಳಕೊಪ್ಪದ ರೈತ ಪ್ರಕಾಶ್ ಜೂನ್ 21 ಶನಿವಾರದಂದು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದು ಸಹಕಾರಿ ಸಂಘ ಮತ್ತು ಬ್ಯಾಂಕಿನ ಸಾಲದ ಕಾರಣಕ್ಕಾಗಿ ಎಂದು ಆತ ಬರೆದಿಟ್ಟ ಪತ್ರದಲ್ಲೇ ಇದೆ. ಪಕ್ಕದ ಮೂಡಿಗೆರೆಯ ಅಲಸೆ ಗ್ರಾಮದ ರಮೇಶ ಒಂದೂವರೆ ಲಕ್ಷ ಸಾಲ ಮಾಡಿದ್ದ. ಈ ವರ್ಷ ಬೆಳೆ ಕೈಕೊಟ್ಟಿದ್ದರಿಂದ ಸಾಲ ತೀರಿಸಲಾಗದೆ ಶನಿವಾರ ಮಧ್ಯಾಹ್ನ ವಿಷ ಕುಡಿದ. ಇದು ಗೊತ್ತಾಗಿದ್ದೆ ರಮೇಶನ ತಂದೆ ನಂಜುಂಡ ಕೂಡ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ. ಅದೃಷ್ಟವಶಾತ್ ಇಬ್ಬರೂ ಬದುಕಿಳಿದಿದ್ದಾರೆ.

ಆದರೆ ಗದಗ, ಮುಂಡರಗಿ ತಾಲ್ಲೂಕಿನ ಬರದವುರು ಗ್ರಾಮದ ಮಲ್ಲಪ್ಪ ದೇವೇಂದ್ರಪ್ಪ ಗದಗಿನಿಗೆ ಆತ್ಮಹತ್ಯೆ ಮಾಡಿಕೊಳ್ಳಲು ಸಾಲ ಹೊರತಾಗಿ ಬೇರೆ ಕಾರಣಗಳೇ ಇರಲಿಲ್ಲ. ಹನ್ನೆರಡು ಎಕರೆ ಜಮೀನು ಇದ್ದು ಟ್ರ್ಯಾಕ್ಟರ್ ಖರೀದಿಗೆಂದು ಮತ್ತು ಖರ್ಚಿಗೆಂದು ಫೈನಾನ್ಷಿಯರ್‌ಗಳಿಂದ ಒಟ್ಟು ಐದೂವರೆ ಲಕ್ಷ ರೂಪಾಯಿ ಸಾಲ ಮಾಡಿದ್ದ. ಸಾಲಗಾರರ ಕಾಟ ತಾಳಲಾರದೆ ಕ್ರಿಮಿನಾಶಕ ಕುಡಿದು ಸತ್ತ.

ಸಿಂಧಗಿಯ ಚಂದ್ರಮಪ್ಪ ಭೀರಪ್ಪ ದೇವರಗಾಂವ ತನ್ನ ಇಬ್ಬರು ಹೆಣ್ಣುಮಕ್ಕಳ ಮದುವೆ ಮಾಡಲಾಗದೆ ಆತ್ಮಹತ್ಯೆ ಮಾಡಿಕೊಂಡ ಎಂದು ಕೆಲವು ಅಧಿಕಾರಿಗಳು ಹೇಳುತ್ತಾರಾದರೂ ಅದೂ ತಕ್ಷಣದ ಕಾರಣ ಅಲ್ಲ, ಚಂದ್ರಮಪ್ಪ ಸಿಂಧಗಿಯ ಸಹಕಾರಿ ಬ್ಯಾಂಕಿನಲ್ಲಿ ಸಾಲ ಮಾಡಿದ್ದ, ಇಪ್ಪತ್ತೈದು ಸಾವಿರ ರೂಪಾಯಿಯ ಸಾಲವೊಂದೇ ಆತನ ಸಾವಿನ ಕಾರಣ ಹೇಳುತ್ತಿತ್ತು.

ಐವತ್ತು ಸಾವಿರ ಸೊಸೈಟಿಯ ಸಾಲ ತೀರಿಸಲಾಗದೇ ನರಳುತ್ತಿದ್ದ ಬಾಗಲಕೋಟೆ ಹುನಗುಂದ ತಾಲ್ಲೂಕಿನ ತಲದಿನ್ನಿಯ ಜೀಪಣ್ಣ ಹಗರಿ, ಗೊಬ್ಬರ ಸಿಗದೇ ಗಲಾಟೆ ಆದ ನಂತರ ಬಂದು ನೇಣು ಹಾಕಿಕೊಂಡ ಚನ್ನಗಿರಿಯ ಮಹಿಳೆ ಪಾರ್ವತಮ್ಮ ಇಬ್ಬರೂ ಆತ್ಮಹತ್ಯೆ ಮಾಡಿಕೊಂಡಿದ್ದು ಮಣ್ಣಿನ ಋಣಕ್ಕಾಗಿಯೇ ಹೊರತು ಭಟ್ಟಿ ಕುಡಿದಲ್ಲ.

ಇದೀಗ ಚಿಕ್ಕಮಗಳೂರಿನ ಅಶ್ವತ್ಥಗೌಡ ಆತ್ಮಹತ್ಯೆ ಮಾಡಿಕೊಂಡಿದ್ದಕ್ಕೂ ಸಾಲವೇ ಕಾರಣ ನಿಜ. ಆದರೆ ಅದು ಮಾಡಿದ್ದು ಕೃಷಿಗಾಗಿಯೇ ಹೊರತು ಇಸ್ಪೀಟಾಡುವುದಕಲ್ಲ, ಇಂಥ ರೈತರ ಆತ್ಮಹತ್ಯೆಗಳಿಗೆಲ್ಲ ಸರ್ಕಾರ ಪರಿಹಾರ ಕೊಡುತ್ತಾ ಕೂತರೆ ಬೊಕ್ಕಸವೇ ಬರಿದಾಗುತ್ತದೆ ಎಂಬುದು ಯಡ್ಡಿಯ ಅಳುಕು. ಇದಕ್ಕೆ ಇನ್ನು ಮುಂದೆ ಯಾರೇ ರೈತ ಆತ್ಮಹತ್ಯೆ ಮಾಡಿಕೊಂಡರೂ ಅದು ಪಕ್ಕಾ ರೈತನ ಆತ್ಮಹತ್ಯೆ ಎಂಬುದನ್ನು ಆತನ ಮನೆಯವರು ಸಾಬೀತು ಮಾಡಬೇಕಂತೆ. ಅಥವಾ ಇಂಥಾ ಕಾರಣಕ್ಕೆ ತಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆಂದು ಬರೆದಿಟ್ಟು ಸಾಯಬೇಕಂತೆ.

ಈ ನಿಟ್ಟಿನಲ್ಲಿ ಯಡ್ಡಿ ಮಾಡಿದ ಮೊದಲ ಕೆಲಸವೇ ಒಂದು ಲಕ್ಷ ಪರಿಹಾರ ಘೋಷಿಸಿದ ಶಿಕಾರಿಪುರದ ತಹಶೀಲ್ದಾರ್ ಮಲ್ಲಿಕಾರ್ಜುನಯ್ಯನವರಿಗೆ ಷೋಕಾಸ್ ನೊಟೀಸ್ ನೀಡಿದ್ದು. ಒಮ್ಮೆ ಒಬ್ಬ ತಹಶೀಲ್ದಾರ್‌ಗೆ ಈ ರೀತಿ ಶಿಕ್ಷೆಯಾಯಿತೆಂದರೆ ರಾಜ್ಯದ ಬೇರೆಲ್ಲ ತಹಶೀಲ್ದಾರ್‌ಗಳಿಗೆ ಬಿಸಿಮುಟ್ಟುತ್ತದೆ. ರೈತನ ಆತ್ಮಹತ್ಯೆಗೆ ಬೇರೆ ಏನೇನೋ ಕಾರಣ ಕೊಟ್ಟು ಸರ್ಕಾರವೇ ಮುಚ್ಚಿ ಹಾಕುತ್ತದೆ. ಕ್ರಮೇಣ ಮಾಧ್ಯಮಗಳಿಗೂ ಇದು ರೇಜಿಗೆ ಹುಟ್ಟಿಸಿ ಅನ್ನದಾತನ ಆತ್ಮಹತ್ಯೆ ಎಂಬುದು ಕ್ಷುಲ್ಲಕ ಸಂಗತಿಯಾಗುತ್ತದೆ.

ಇದು ಸ್ವಯಂ ಘೋಷಿತ ರೈತ ನಾಯಕ ಯಡಿಯೂರಪ್ಪನವರ ದುರಾಲೋಚನೆ. ಬಹುಶಃ ಕಾಮನ್‌ಸೆನ್ಸ್ ಇದ್ದಿದ್ದರೆ ಯಡ್ಡಿಗಿದು ಯಾವತ್ತೋ ಗೊತ್ತಾಗುತ್ತಿತ್ತು, ರೈತನ ಜೀವದ ಬೆಲೆ. ಕೇವಲ ಒಂದು ಲಕ್ಷವಲ್ಲ, ಐದು ಲಕ್ಷ ಕೊಡುತ್ತೇನೆಂದರೂ ಯಾವ ರೈತನೂ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಪುಡಿ ಪರಿಹಾರಕ್ಕಾಗಿ ಪ್ರಾಣ ಕೊಡುವಷ್ಟು ರೈತ ಹೇಡಿಯಲ್ಲ.

ಹಾಗಂಥ ಯಡ್ಡಿ ಭಾವಿಸಿದರೆ ಆತನಿಗಿಂತ ಧೂರ್ತರಿಲ್ಲ.

■ ರಾ. ಸೋಮನಾಥ್

ಕೃಷಿ ಮಂತ್ರಿಯ ಅಜ್ಞಾನ, ಮುಖ್ಯಮಂತ್ರಿಯ ಹೋಮಹವನ


ಯಡ್ಡಿಯ ರೈತ ಕಾಳಜಿ ಯಾವ ಮಟ್ಟದು ಎಂಬುದಕ್ಕೆ ಎಂಥವನನ್ನು ಅವರು ಕೃಷಿ ಮಂತ್ರಿ ಮಾಡಿದ್ದಾರೆಂಬುದೇ ಸಮರ್ಥನೆ ನೀಡುತ್ತದೆ. ಅದ್ಯಾವ ಪುರುಷಾರ್ಥಕ್ಕೆಂದು ದಾವಣಗೆರೆಯ ರವೀಂದ್ರನಾಥ್ ರನ್ನು ಕೃಷಿ ಮಂತ್ರಿ ಮಾಡಿದ್ದಾರೆಂಬುದು ಇವತ್ತಿಗೂ ನಿಗೂಢವಾಗಿದೆ. ಕೃಷಿ ಭೂಮಿಯಿರಬಹುದು ಹಾಗಂಥ ರವೀಂದ್ರನಾಥ್ ಸ್ವತಃ ಕೃಷಿಕನಲ್ಲ, ವೃತ್ತಿಯಲ್ಲಿ ವ್ಯಾಪಾರಿ. ತನ್ನದೇ ಜಿಲ್ಲೆಯ ಮಲೆಬೆನ್ನೂರಿನ ರೈತ ಅಜ್ಜಪ್ಪ ಆತ್ಮಹತ್ಯೆ ಮಾಡಿಕೊಂಡಾಗ ತಲೆಬುಡ ಕೂಡ ವಿಚಾರಿಸದೇ ಆತ ರೈತನೇ ಅಲ್ಲ ಎಂದು ಹೇಳಿಕೆ ಕೊಟ್ಟವರು ಇದೇ ರವೀಂದ್ರನಾಥ್. ಯಾವತ್ತು ರೈತ ಸಂಘ ಆತ ನಾಲ್ಕೆಕರೆ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದದ್ದು ಮತ್ತು ಇಪ್ಪತ್ತು ಗುಂಟೆ ಕೃಷಿ ಭೂಮಿ ಹೊಂದಿದ್ದನ್ನು ದಾಖಲೆ ಸಮೇತ ಬಹಿರಂಗ ಗೊಳಿಸಿತೋ ರವೀಂದ್ರನಾಥ್ ತಾನು ಅಧಿಕಾರಿಯೊಬ್ಬನ ಮಾತು ಕೇಳಿ ಸುಳ್ಳು ಹೇಳಿದ್ದನ್ನು ಅಷ್ಟೇ ಪ್ರಾಮಾಣಿಕವಾಗಿ ಒಪ್ಪಿಕೊಂಡರು.

ಇನ್ನು ಮುಖ್ಯಮಂತ್ರಿಯ ಕೃಷಿ ಜ್ಞಾನ ಯಾವ ಮಟ್ಟದ್ದೆಂದರೆ, ರೈತರ‍್ಯಾರೂ ಆತ್ಮಹತ್ಯೆ ಮಾಡಿಕೊಳ್ಳಬಾರದೆಂದೂ, ಇಷ್ಟೆಲ್ಲಕ್ಕೂ ಕೇಂದ್ರವೇ ಕಾರಣವೆಂದೂ, ಅರ್ಧಕ್ಕಿಂತಲೂ ಕಮ್ಮಿ ಪ್ರಮಾಣದ ರಸಗೊಬ್ಬರವನ್ನು ಕೇಂದ್ರ ಸರ್ಕಾರ ಸರಬರಾಜು ಮಾಡಿರುವುದೇ ಸಮಸ್ಯೆಗೆ ಮೂಲ ಎಂದು ಪತ್ರಿಕೆಗಳಿಗೆ ಪುಟಗಟ್ಟಲೇ ಜಾಹೀರಾತು ಕೊಟ್ಟಿದ್ದಾರೆ.

ಆಯ್ತು, ಕೇಂದ್ರ ಸರ್ಕಾರ ಅಗತ್ಯದ ಅರ್ಧದಷ್ಟೇ ಸರಬರಾಜು ಮಾಡಿರಬಹುದು. ಜೂನ್ 30 ರ ಹೊತ್ತಿಗೆ ಅಗತ್ಯದ ಅಷ್ಟೂ ಗೊಬ್ಬರವೂ ಬರಬಹುದು. ಹಾಗೇ ಕೇಂದ್ರ ಕಳಿಸಿದ ಗೊಬ್ಬರವನ್ನು ಮುಂಗಾರಿನ ಪರಿಸ್ಥಿತಿಗನುಗುಣವಾಗಿ ಸರಬರಾಜು ಮಾಡಬೇಕಾದದ್ದು ರಾಜ್ಯ ಸರ್ಕಾರ. ಜೂನ್ ಮೊದಲ ವಾರಕ್ಕೆ ಹಾಸನದಲ್ಲಿ ಮುಂಗಾರು ಶುರುವಾಗುತ್ತದೆ. ಎರಡನೇ ವಾರಕ್ಕೆ ಕೆಲ ಪ್ರದೇಶಗಳಲ್ಲಿ ಮೂರನೇ ವಾರಕ್ಕೆ ಕೆಲವೆಡೆ ಮುಂಗಾರು ಶುರುವಾಗುವ ಪರಿಜ್ಞಾನ ಮುಖ್ಯಮಂತ್ರಿಗೋ ಕೃಷಿ ಮಂತ್ರಿಗೋ ಇದ್ದಿದ್ದರೆ ಸಮಸ್ಯೆಯೇ ಇರುತ್ತಿರಲಿಲ್ಲ.

ಮೊದಲು ಮಳೆ ಬೀಳುವ ಪ್ರದೇಶಗಳಿಗೆ ವಿಳಂಬವಾಗಿ, ಮೂರು ವಾರದ ನಂತರ ಮಳೆ ಬರುವಲ್ಲಿ ಅವಧಿಗೂ ಮೊದಲೇ ರಸಗೊಬ್ಬರ ಸರಬರಾಜು ಮಾಡಿದ್ದು ರಾಜ್ಯ ಸರ್ಕಾರ. ಸದ್ಯದ ಸಮಸ್ಯೆಗೆ ಇದು ಕೂಡ ಕಾರಣ. ಆಯಾ ಪ್ರದೇಶಕ್ಕನುಗುಣವಾಗಿ ಮುಂಗಾರು ಅವಧಿಯ ಅಂದಾಜಿಲ್ಲದೆ ಕೇಂದ್ರ ಕಳಿಸಿದ ಗೊಬ್ಬರವನ್ನೇ ವ್ಯವಸ್ಥಿತವಾಗಿ ಹಂಚಿಕೆ ಮಾಡದೇ ಅನಾಹುತ ಮಾಡಿದ್ದು ರಾಜ್ಯ ಸರ್ಕಾರವಲ್ಲವೇ?

ಹೋಮ ಹವನಗಳಲ್ಲಿ, ಕಂಡಕಂಡ ಸ್ವಾಮೀಜಿಯ ಕಾಲಿಗೆ ಬೀಳುವುದರಲ್ಲಿ ಯಡ್ಡಿ ಪೋಲು ಮಾಡಿದ ಸಮಯದ ಅರ್ಧದಷ್ಟಾದರೂ ರೈತರಿಗಾಗಿ ಮೀಸಲಿಟ್ಟಿದ್ದರೆ ಹೀಗೆ ಆಗುತ್ತಿತ್ತೆ? ■




ಚಿಕ್ಕಮಗಳೂರು: ಆದಿಚುಂಚನಗಿರಿ ಕಾಲೇಜಿನಲ್ಲಿ ಮತ್ತೊಂದು ಕೊಲೆ!

"ಅಮ್ಮಾ... ನನಗೆ ಬದುಕಬೇಕೆಂಬ ಉತ್ಕಟ ಆಶೆಯಿತ್ತು, ಇಷ್ಟು ಚಿಕ್ಕ ವಯಸ್ಸಿನಲ್ಲಿ ಸಾಯುವುದಕ್ಕೆ ಮನಸ್ಸು ಒಪ್ಪುತ್ತಿಲ್ಲ, ನಿಮ್ಮೊಂದಿಗೆ ಮತ್ತು ಅಪ್ಪ, ಅಣ್ಣರೊಂದಿಗೆ ತುಂಬಾ ವರ್ಷಗಳ ಕಾಲ ಸಂತೋಷವಾಗಿ ಬದುಕಿ ಬಾಳಬೇಕು ಎಂದುಕೊಂಡಿದ್ದೆ. ಸಹಪಾಠಿ ಮಿತ್ರರೊಂದಿಗೆ ಬದುಕಿರುವಷ್ಟು ದಿನವೂ ಅನುಭೂತಿಯಿಂದಿದ್ದೆ. ನಿಮ್ಮೆಲ್ಲರನ್ನು ರೇಗಿಸಿ, ಕೆರಳಿಸಿ ಹರಟೆ ಹೊಡೆದು ನಿಮ್ಮ ಸಂತೋಷದಲ್ಲಿ ನಾನೂ ಪಾಲು ಪಡೆದು ಬದುಕಿದ್ದೆ. ಆದರೆ, ಇವತ್ತು ಕಾಲೇಜಿನಲ್ಲಿ ನಡೆದ ಘಟನೆಯಿಂದ ನಾನು ತುಂಬಾ ಅವಮಾನಿತನಾಗಿದ್ದೇನೆ. ಅಸಹಾಯಕನಾಗಿ ಉಪನ್ಯಾಸಕರಿಂದ ಪೆಟ್ಟು ತಿಂದಿದ್ದೇನೆ. ನನ್ನ ಕಾಲೇಜು ಜೀವನದಲ್ಲಿ ಮೊದಲ ಬಾರಿಗೆ ನಾನು ನಕಲು ಮಾಡಲು ಹೋಗಿ ಉಪನ್ಯಾಸಕ ಧನಂಜಯ್ ಕೈಗೆ ಸಿಕ್ಕುಬಿದ್ದಿದ್ದೇನೆ. ಅದು ನಾನು ಮಾಡಿದ ತಪ್ಪು ನಿಜ. ಈ ಕಾರಣಕ್ಕಾಗಿ ಧನಂಜಯ್ ನಂಗೆ ಕಾಲೇಜಿನಲ್ಲಿ ಉಪನ್ಯಾಸಕರ ಮುಂದೆ, ವಿದ್ಯಾರ್ಥಿ-ವಿದ್ಯಾರ್ಥಿನಿಯರ ಮುಂದೆ, ನನ್ನ ಸಹಪಾಠಿ ಮಿತ್ರರ ಮುಂದೆ ಕೊನೆಗೆ ಪೋಷಕರಾದ ನಿಮ್ಮನ್ನೂ ಕರೆಸಿ ನಿಮ್ಮ ಮುಂದೆಯೂ ಕೆಟ್ಟ ಭಾಷೆಯಿಂದ ಬಯ್ದು ಕೋಲಿನಿಂದ ಹೊಡೆದಿರುವುದರಿಂದ ಬಹಳವಾಗಿ ಅವಮಾನಿತಗೊಂಡಿದ್ದೇನೆ. ನನಗೆ ಮುಂದೆ ಬದುಕಬೇಕೆಂಬ ಆಶೆ ಉತ್ಸಾಹ ಕಳೆದುಹೋಗಿದೆ. ಈ ಅವಮಾನವನ್ನು ನನ್ನಿಂದ ಸಹಿಸಲು ಸಾಧ್ಯವಾಗುತ್ತಿಲ್ಲ, ಆದ್ದರಿಂದ ಆತ್ಮಹತ್ಯೆ ಮಾಡಿಕೊಳ್ಳಬೇಕೆಂಬ ನಿರ್ಧಾರಕ್ಕೆ ಬಂದಿದ್ದೇನೆ. ಅಮ್ಮಾ..., ನನ್ನನ್ನು ಕ್ಷಮಿಸಿಬಿಡಿ. ನನ್ನ ಸಾವಿಗೆ ಉಪನ್ಯಾಸಕ ಧನಂಜಯ್ ಅವರೇ ಕಾರಣ. ಆತನಿಗೆ ಶಿಕ್ಷೆ ಕೊಡಿಸಿ"– ಈ ಅರ್ಥ ಬರುವ ಡೆತ್‌ನೋಟನ್ನು ಬರೆದಿಟ್ಟು ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಹುಡುಗನ ಹೆಸರು ಯಶವಂತ ಪಾಟೀಲ್.

ಈತ ಚಿಕ್ಕಮಗಳೂರಿನ ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ವಿಭಾಗದಲ್ಲಿ ನಾಲ್ಕನೇ ಸೆಮಿಸ್ಟರ್ ಓದುತ್ತಿದ್ದ ವಿದ್ಯಾರ್ಥಿ. ನೋಡಲು ಸ್ಪುರದ್ರೂಪಿ, ಮಾತಿನಲ್ಲಿ ಚುರುಕು. ಎಂಥವರೊಂದಿಗೂ ಗೆಳೆತನ ಸಾಧಿಸಿ ಬೆರೆತುಬಿಡಬಲ್ಲ ಸ್ನೇಹಜೀವಿ. ಹುಡುಗಾಟದಿಂದ ಎಲ್ಲರನ್ನೂ ನಗಿಸಿ ತಾನೂ ಆನಂದಪಡುವ ಹುಡುಗ. ನಯ, ವಿನಯ, ನಕ್ಕು ನಗಿಸುವ ಕಲೆ, ಒಳ್ಳೆಯ ನಡತೆ ಇಂತಹ ಹತ್ತು ಹಲವು ಗುಣಗಳಿಗಾಗಿ ಕಾಲೇಜಿನ ಎಲ್ಲರಿಗೂ ಚಿರಪರಿಚಿತನಾಗಿರುವ ಹುಡುಗ. ಅಂತಹ ಒಂದು ಕುಡಿ ಈಗ ಕಮರಿಹೋಗಿದೆ. ಧನಂಜಯನಂತಹ ಉಪನ್ಯಾಸಕರನ್ನು ಸೃಷ್ಟಿ ಮಾಡಿದ ಅಮಾನವೀಯ ವ್ಯವಸ್ಥೆಯೇ ಆತನನ್ನು ಕೊಂದಿತು ಎಂದರೇನೇ ಸರಿಯಾದೀತು.

ಯಶವಂತ ಪಾಟೀಲ್‌ನ ಅಪ್ಪ ಮಲ್ಲೇಗೌಡರಿಗೆ ಸಕ್ಕರಾಯಪಟ್ಟಣದಲ್ಲಿ ಇಪ್ಪತ್ತು ಎಕರೆ ಅಡಿಕೆ ತೋಟವಿದೆ. ಚಿಕ್ಕಮಗಳೂರಿನ ಅರವಿಂದ ನಗರದ ಬಡಾವಣೆ, ಬೈಪಾಸ್ ರಸ್ತೆ ಬಳಿ ಸೇರಿದಂತೆ ನಾಲ್ಕು ಕಡೆ ಒಳ್ಳೆಯ ಸೈಟುಗಳಿವೆ. ಅಣ್ಣ ದೀಪಕ್ ಐಸಿಐಸಿಐ ಬ್ಯಾಂಕಿನಲ್ಲಿ ಉದ್ಯೋಗಿ. ತಾಯಿ ಗೃಹಿಣಿ. ಇಂತಹ ಆರ್ಥಿಕವಾಗಿ ಸುಭದ್ರವಾಗಿರುವ ತುಂಬು ಕುಟುಂಬದಲ್ಲಿ ಬೆಳೆದ ಹುಡುಗ ಯಶವಂತ ಪಾಟೀಲ್. ಸ್ಪರ್ಧಾತ್ಮಕವಾಗಿ ಬೆಳೆಯುತ್ತಿರುವ ಇಂದಿನ ಜಗತ್ತಿನಲ್ಲಿ ತಾನೂ ತನ್ನದೇ ಆದ ಜಾಗ ಮಾಡಿಕೊಳ್ಳಬೇಕೆಂಬ ಉತ್ಕಟ ಆಕಾಂಕ್ಷೆಯಿಂದ ಕಂಪ್ಯೂಟರ್ ಸೈನ್ಸ್ ಕೋರ್ಸು ಸೇರಿದ್ದ. ತನಗೆ ಉಪನ್ಯಾಸಕ ಮಾಡಿದ ಅವಮಾನವನ್ನು ಸಹಿಸಲಾಗದೇ ಆತ್ಮಹತ್ಯೆ ಮಾಡಿಕೊಂಡುಬಿಟ್ಟಿದ್ದಾನೆ.



ಯಶವಂತ ಪಾಟೀಲ್

ಪೋಷಕರ ಮುಂದೆಯೇ ಥಳಿಸಿದರು!

ಯಶವಂತ ಪಾಟೀಲ್ ಓದುತ್ತಿದ್ದ ಆದಿಚುಂಚನಗಿರಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮೊನ್ನೆ ಗುರುವಾರ ಪ್ರಾಕ್ಟಿಕಲ್ ಪರೀಕ್ಷೆ ನಡೆಯುತ್ತಿದ್ದಾಗ ನಕಲು ಮಾಡುವುದಕ್ಕೆ ಚೀಟಿ ತಂದಿದ್ದ ಎಂಬ ಒಂದೇ ಕಾರಣಕ್ಕೆ ಯಶವಂತ ಪಾಟೀಲ್‌ಗೆ ಉಪನ್ಯಾಸಕ ಧನಂಜಯ ದೈಹಿಕವಾಗಿ ಥಳಿಸಿದ್ದಲ್ಲದೇ ಕೊಡಬಾರದ ಮಾನಸಿಕ ಹಿಂಸೆಯನ್ನೂ ಕೊಟ್ಟಿದ್ದ. ಪರೀಕ್ಷೆ ಆರಂಭವಾಗುವಾಗಲೇ ನಕಲು ಚೀಟಿಯೊಂದಿಗೆ ಸಿಕ್ಕಿದ್ದ ಈ ಹುಡುಗನನ್ನು ಸಂಜೆ ನಾಲ್ಕು ಗಂಟೆಯತನಕ ಕೊಠಡಿಯಲ್ಲಿ ನಿಲ್ಲಿಸಲಾಗಿತ್ತು. ತಾನು ಮಾಡಿದ್ದು ತಪ್ಪೆಂದು ಒಪ್ಪಿಕೊಂಡ ಆ ಹುಡುಗ ಮುಂದೆಂದೂ ಇಂತಹ ತಪ್ಪನ್ನು ಮಾಡುವುದಿಲ್ಲವೆಂದೂ, ತನ್ನನ್ನು ಒಮ್ಮೆ ಕ್ಷಮಿಸಿ ಬಿಟ್ಟುಬಿಡಬೇಕೆಂದು ಉಪನ್ಯಾಸಕ ಧನಂಜಯ್ ಎದುರು ಅಂಗಲಾಚಿ ಬೇಡಿಕೊಂಡರೂ ಆತ ಬಿಡಲಿಲ್ಲ, ತನ್ನ ಸಹಪಾಠಿಗಳ ಎದುರು ಹೊಡೆದು ಬೈಯ್ದು ಮಾನಸಿಕ ಹಿಂಸೆ ಕೊಟ್ಟಿದ್ದೂ ಅಲ್ಲದೇ ಪೋಷಕರನ್ನೂ ಕರೆಸಿ "ಇಂಥ ಮಗ ನಿಮ್ಗೆ ಯಾಕ್ರೀ ಬೇಕು? ಹೋಗಿ ಸಾಯಲಿಕ್ಕೆ ಹೇಳ್ರಿ" ಎಂದು ಬಾಯಿಗೆ ಬಂದಂತೆ ಮಾತಾಡಿ ಆತನಿಗೆ ಪೋಷಕರ ಮುಂದೆಯೇ ಹೊಡೆದಿದ್ದ ಧನಂಜಯ್.

ಆಮೇಲೆ ಪೋಷಕರು ಯಶವಂತ ಪಾಟೀಲನನ್ನು ಚಿಕ್ಕಮಗಳೂರಿನ ಅರವಿಂದ ಬಡಾವಣೆಯಲ್ಲಿರುವ ತಮ್ಮ ಮನೆಗೆ ಕರೆದುಕೊಂಡು ಬಂದರು. ತನ್ನ ಸಹಪಾಠಿ-ಮಿತ್ರರೆದುರು, ಪೋಷಕರೆದುರು ಅವಮಾನಿತಗೊಂಡಿದ್ದ ಆತ ಅಷ್ಟು ಹೊತ್ತಿಗಾಗಲೇ ಒಳಗೊಳಗೇ ಕುಬ್ಜವಾಗಿ ಹೋಗಿದ್ದ. ಬದುಕಬೇಕೆಂಬ ಆಸೆ ಕಮರಿ ಹೋಗಿತ್ತು. ಸೀದಾ ತನ್ನ ರೂಮಿಗೇ ಹೋಗಿ, ಬಾಗಿಲನ್ನು ಒಳಗಿನಿಂದ ಲಾಕ್ ಮಾಡಿ, ತನ್ನ ಕಂಪ್ಯೂಟರ್ ಆನ್ ಮಾಡಿ ಡೆತ್ ನೋಟ್ ಬರೆದು ಛಾವಣಿಗೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಮಗ ಅವಮಾನಿತಗೊಂಡಿರುವುದು, ಮನನೊಂದಿರುವುದು ತಾಯಿಗೆ ಗೊತ್ತಿತ್ತು, ಅವನನ್ನು ಸಂತೈಸುವುದಕ್ಕಾಗಿ ಆಕೆ ಕಾಫಿ ರೆಡಿ ಮಾಡಿಕೊಂಡು ಕದ ತಟ್ಟಿದರೆ ಒಳಗಿನಿಂದ ಯಾವ ಉತ್ತರವೂ ಇಲ್ಲ. ಗಾಬರಿಗೊಂಡ ಆಕೆ ಮನೆಯವರೊಂದಿಗೆ ಸೇರಿ ಕದ ಮುರಿದು ಒಳಗೆ ಹೋದರೆ ಯಶವಂತನ ಹೆಣ ಛಾವಣಿಯಿಂದ ನೇತಾಡುತ್ತಿತ್ತು. ಮಗನನ್ನು ಸಂತೈಸಲು ಬಂದ ತಾಯಿ ಮಗ ಹೆಣವಾಗಿ ನೇತಾಡುತ್ತಿರುವುದನ್ನು ನೋಡಿ ಕುಸಿದುಬಿಟ್ಟರು.

ಒಂದೇ ತಿಂಗಳಲ್ಲಿ ಮೂರು ಆತ್ಮಹತ್ಯೆ!

ಬಾಲಗಂಗಾಧರನಾಥ ಸ್ವಾಮೀಜಿಯ ಸುಪರ್ದಿನಲ್ಲಿ ಮೈದಾಳಿ ನಿಂತಿರುವ ಈ ತಾಂತ್ರಿಕ ವಿದ್ಯಾಲಯದಲ್ಲಿ ಪ್ರತೀವರ್ಷ ಏನಿಲ್ಲವೆಂದರೂ ನಾಲ್ವರು ವಿದ್ಯಾರ್ಥಿಗಳು ನೇಣಿಗೆ ಕೊರಳೊಡ್ಡುತ್ತಾರೆ. ಆದರೂ ಈ ಸಾವುಗಳು ಸಾರ್ವಜನಿಕ ಗಮನವನ್ನು ಸೆಳೆದಿರುವುದು ತೀರಾ ವಿರಳ. ಈ ವರ್ಷ ಕೂಡ ಯಶವಂತ ಪಾಟೀಲನ ಆತ್ಮಹತ್ಯೆಯೊಂದಿಗೆ ಈಗಾಗಲೇ ನಾಲ್ವರು ವಿದ್ಯಾರ್ಥಿಗಳ ಆತ್ಮಹತ್ಯೆಗಳು ನಡೆದುಹೋಗಿವೆ.

ಈ ವರ್ಷ ಕಾಲೇಜು ಆರಂಭವಾಗಿ ಮೂರು ತಿಂಗಳು ಕಳೆಯುವುದರೊಳಗಾಗಿ ಮನೋಜ್ ಎಂಬ ವಿದ್ಯಾರ್ಥಿ ಹಿರೇಕೊಳಲೆ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ. ಮನವಿ ಎಂಬ ಇನ್ನೊಬ್ಬ ವಿದ್ಯಾರ್ಥಿನಿ ಹೌಸಿಂಗ್ ಬೋರ್ಡ್‌ನ ತನ್ನ ಮನೆಯಲ್ಲಿ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಳು. ಈಕೆ ಈ ಹಿಂದೆಯೇ ತನ್ನ ತಂದೆಯನ್ನು ಕಳೆದುಕೊಂಡಿದ್ದು ತಾಯಿ ಇದೇ ಕಾಲೇಜಿನಲ್ಲಿ ಸಿಬ್ಬಂದಿಯಾಗಿದ್ದಾಳೆ. ತುಂಬ ಜಾಣೆಯಾಗಿದ್ದ ಮನವಿ ಕಾಲೇಜಿನಲ್ಲಿ ಎಲ್ಲಾ ಸ್ನೇಹಿತ-ಸ್ನೇಹಿತೆಯರೊಂದಿಗೆ ಚೆನ್ನಾಗಿ ಬೆರೆತು ಲವಲವಿಕೆಯಿಂದಿದ್ದಳು. ಅವಳು ಒಂದು ದಿನ ಕಾಲೇಜ್‌ಡೇ ಮುಗಿಸಿಕೊಂಡು ಮನೆಗೆ ಬಂದು ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡುಬಿಟ್ಟಳು.

ಇನ್ನು ಮೂರನೇ ಆತ್ಮಹತ್ಯೆ ನಡೆದಿದ್ದು ಚಿಕ್ಕಮಗಳೂರು ನಗರದ ಐಡಿಎಸ್‌ಜಿ ಕಾಲೇಜಿನ ಉಪನ್ಯಾಸಕ ಮಲ್ಲೇಗೌಡರ ಮಗಳು ಕೆ.ಎಂ.ಶ್ವೇತಳದು. ಕಂಪ್ಯೂಟರ್ ಸೈನ್ಸ್ ಓದಿಕೊಂಡಿದ್ದ ಈಕೆಯ ಮೇಲೆ ದೀಪಕ್ ಎಂಬ ಉಪನ್ಯಾಸಕ, ಸಿಬ್ಬಂದಿ ಇಲ್ಲಸಲ್ಲದ ಆರೋಪ ಮಾಡಿ ಕಾಲೇಜಿನ ಹದಿನಾಲ್ಕೂ ನೋಟೀಸ್ ಬೋರ್ಡ್‌ಗಳಲ್ಲಿ "ಕೆಟ್ಟ ನಡತೆಯವಳು" ಎಂದು ಬರೆಸಿ ತಗಲು ಹಾಕಿದ್ದ. ಇದರಿಂದ ತೀವ್ರವಾಗಿ ಘಾಸಿಗೊಂಡ ಶ್ವೇತ ಈ ನೋಟೀಸ್‌ನ್ನು ತೆಗೆದುಹಾಕುವಂತೆ ಖುದ್ದು ದೀಪಕ್‌ನನ್ನು ಪರಿಪರಿಯಾಗಿ ಬೇಡಿಕೊಂಡಿದ್ದಳು. ಅದಕ್ಕೆ ಕೇರ್ ಮಾಡದ ದೀಪಕ್ ಆ ನೋಟೀಸುಗಳನ್ನು ಹಾಗೆಯೇ ಬಿಟ್ಟಿದ್ದ. ಇವರಿಂದ ಮತ್ತಷ್ಟು ಜರ್ಜರಿತಳಾದ ಶ್ವೇತ ಲಕ್ಯವಳ್ಳಿಯ ತನ್ನ ಮನೆಯಲ್ಲಿ ನೇಣಿಗೆ ಕೊರಳೊಡ್ಡಿಬಿಟ್ಟಳು.

ದಾವಣಗೆರೆ: ಅಜ್ಜಪ್ಪನನ್ನು ಕೊಂದ ಯಡ್ಡಿ ಸರ್ಕಾರ!



ಯಡ್ಡಿಯ ರೈತವಿರೋಧಿ ಸರ್ಕಾರ ಮತ್ತೊಬ್ಬ ಅನ್ನದಾತನನ್ನು ಬಲಿತೆಗೆದುಕೊಂಡಿದೆ. ದಾವಣಗೆರೆ ಜಿಲ್ಲೆಯಲ್ಲಿ ರಸಗೊಬ್ಬರಕ್ಕಾಗಿ ನಡೆಯುತ್ತಿರುವ ಹೋರಾಟದ 21 ನೇ ದಿನದಂದು ಮಲೆಬೆನ್ನೂರಿನ ಹತ್ತಿರದ ಕೊಮಾರನಹಳ್ಳಿಯ ಹಿರೇಬಿದರಿ ಅಜ್ಜಪ್ಪ ರಸಗೊಬ್ಬರಕ್ಕಾಗಿ ನಡೆಯುತ್ತಿರುವ ಹೋರಾಟದಲ್ಲಿ 10 ದಿನಗಳ ಕಾಲ ಸತತವಾಗಿ ಭಾಗವಹಿಸಿದ್ದರೂ ರಸಗೊಬ್ಬರ ಸಿಗದಿದ್ದುದರಿಂದ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ!

ಯಡ್ಡಿಯ ಸರ್ಕಾರವನ್ನು ಕಾಯುತ್ತಿರುವ ಅಧಿಕಾರಿಗಳು ಅಜ್ಜಪ್ಪನಿಗೆ ಫಿಟ್ಸ್ ಬರುತ್ತಿತ್ತು, ಹಾಗಾಗಿ ಅವನು ಸತ್ತಿದ್ದಾನೆ ಎಂದು ಸುಳ್ಳು ಸುದ್ದಿಯನ್ನು ಹಬ್ಬಿಸುತ್ತಿದ್ದಾರೆ. ಅಜ್ಜಪ್ಪ ಒಬ್ಬ ಕುಡುಕ, ಜೂಜುಕೋರ, ಅವನು ರೈತನೇ ಅಲ್ಲ ಎಂಬ ಹಸಿ ಸುಳ್ಳನ್ನು ಸತ್ಯವೆಂಬಂತೆ ಚೆಡ್ಡಿಗಳು ಪ್ರಚಾರ ಮಾಡುತ್ತಿದ್ದಾರೆ– ಈ ರಾಜ್ಯದ ಕೃಷಿ ಮಂತ್ರಿಯೂ ಇದನ್ನೇ ಹೇಳುತ್ತಿದ್ದಾನೆ! ಆದರೆ ನಾಲ್ಕು ಎಕರೆ ಬಗರ್ ಹುಕುಂ ಭೂಮಿಯನ್ನು ಹೊಂದಿರುವ ಅಜ್ಜಪ್ಪ ಸಾಯುವ ಹಿಂದಿನ ದಿನ ಐದು ಕೆ.ಜಿ. ಮೆಕ್ಕೆಜೋಳದ ಬಿತ್ತನೆ ಬೀಜವನ್ನು ತಂದಿಟ್ಟಿದ್ದ. ಈತ ಒಂದೇ ಒಂದು ರೂಪಾಯಿ ಸಾಲ ಮಾಡದೇ ಇದ್ದರೂ 80 ಸಾವಿರ ರೂ. ಸಾಲ ಮಾಡಿಕೊಂಡಿದ್ದರಿಂದಲೇ ಈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆಂಬ ಸುಳ್ಳು ಸುದ್ದಿಯನ್ನು ಕೂಡಾ ಹಬ್ಬಿಸಲಾಗುತ್ತಿದೆ!

ಗೊಬ್ಬರ ಸಿಗದ ನಿರಾಸೆ ತಂದ ಆತ್ಮಹತ್ಯೆ

ಜೂನ್ 18ರಂದು ಬೆಳಗ್ಗೆ ತಮ್ಮ ಹಸುವಿನ ಹಾಲನ್ನು ಕರೆದುಕೊಟ್ಟು ರಸಗೊಬ್ಬರಕ್ಕಾಗಿ ಹೋದ ಅಜ್ಜಪ್ಪ ಹೆಣವಾಗಿ ಹಿಂತಿರುಗುತ್ತಾನೆಂದು ಆತನ ಹೆಂಡತಿ ಜಾನಮ್ಮನಿಗೆ ಗೊತ್ತಿರಲಿಲ್ಲ! ಹೆರಿಗೆಗೆಂದು ಬಂದಿದ್ದ ಮಗಳ ಕೂಸಿಗೆ ಸ್ನಾನ ಮಾಡಿಸುತ್ತಿದ್ದ ಜಾನಮ್ಮನಿಗೆ ಅಜ್ಜಪ್ಪ ವಿಷ ಕುಡಿದು ಸತ್ತಿರುವ ಸುದ್ದಿ ತಿಳಿದಿದ್ದೇ ಆಕೆ ಪ್ರಜ್ಞೆ ತಪ್ಪಿ ಬಿದ್ದು ಹೋದಳು.

ಹತ್ತು ದಿನಗಳಿಂದಲೂ ನಿರಂತರವಾಗಿ ರಸಗೊಬ್ಬರಕ್ಕಾಗಿ ಪರದಾಡುತ್ತಿದ್ದ ಅಜ್ಜಪ್ಪನಿಗೆ ಅಂದು ಕೂಡಾ ರಸಗೊಬ್ಬರ ಸಿಗದಿದ್ದುದರಿಂದ ಸಹಜವಾಗಿ ಆತ ನಿರಾಶನಾಗಿದ್ದಾನೆ. ಮುಂಗಾರು ಮಳೆಯಿಂದಾಗಿ ಹದವಾಗಿದ್ದ ಭೂಮಿ ದಿನೇ ದಿನೇ ಹದ ತಪ್ಪುತ್ತಿರುವುದನ್ನು ಮನಗಂಡು ಅಜ್ಜಪ್ಪ ಅಸಹಾಯಕನಾಗಿ ಆತ್ಮಹತ್ಯೆ ಮಾಡಿಕೊಳ್ಳುವ ತೀರ್ಮಾನಕ್ಕೆ ಬಂದಿದ್ದಾನೆ. ಮಧ್ಯಾಹ್ನ 12 ಗಂಟೆಯ ಹೊತ್ತಿಗೆ ಮಲೇಬೆನ್ನೂರು ಪೆಟ್ರೋಲ್ ಬಂಕಿನ ಹತ್ತಿರ ವಿಷ ಕುಡಿದು ಒದ್ದಾಡುತ್ತಿದ್ದ ಅಜ್ಜಪ್ಪನನ್ನು ಅಲ್ಲಿನ ಪೊಲೀಸರು ದಾವಣಗೆರೆಯ ಚಿಗಟೇರಿ ಆಸ್ಪತ್ರೆಗೆ ಸಾಗಿಸುತ್ತಿರುವಾಗಲೇ ಅಜ್ಜಪ್ಪ ಸಾವನ್ನಪ್ಪಿದ್ದಾನೆ.

ಜಿಲ್ಲಾಡಳಿತದ ಕುತಂತ್ರ

ಅಜ್ಜಪ್ಪ ವಿಷ ಕುಡಿದು ಸತ್ತಿರುವುದು ವೈದ್ಯಕೀಯ ಪರೀಕ್ಷೆಯಿಂದ ದೃಢಪಟ್ಟ ನಂತರ ರೈತರ ಆಕ್ರೋಶವು ಮುಗಿಲು ಮುಟ್ಟಿತು. ಚಿಗಟೇರಿ ಆಸ್ಪತ್ರೆಯ ಶವಾಗಾರದ ಹತ್ತಿರ ನೂರಾರು ಮಂದಿ ರೈತರು ಮತ್ತು ಪ್ರಗತಿಪರರು ಜಮಾವಣೆಗೊಂಡು ಮುಂದೇನು ಮಾಡಬೇಕೆಂಬುದನ್ನು ಚರ್ಚಿಸಿ, ಅಜ್ಜಪ್ಪನ ಕುಟುಂಬಕ್ಕೆ 10 ಲಕ್ಷ ರೂ. ಪರಿಹಾರ ನೀಡಬೇಕು, ಅಜ್ಜಪ್ಪನ ಬಗರ್ ಹುಕುಂ ಜಮೀನಿಗೆ ಹಕ್ಕು ಪತ್ರವನ್ನು ನೀಡಬೇಕು, ಒಂದು ಆಶ್ರಯ ಮನೆ, ಅಜ್ಜಪ್ಪನ ಮಕ್ಕಳಿಗೆ ಸರ್ಕಾರಿ ಖರ್ಚಿನಲ್ಲಿ ವಿದ್ಯಾಭ್ಯಾಸ ಕೊಡಿಸಬೇಕು –ಎಂಬಿತ್ಯಾದಿ ಒತ್ತಾಯಗಳನ್ನಿಟ್ಟುಕೊಂಡು ಸರ್ಕಾರದ ವಿರುದ್ಧ ಪ್ರತಿಭಟನೆಗೆ ಸಜ್ಜಾದ ತಕ್ಷಣ ಜಿಲ್ಲಾಡಳಿತವು ಪ್ರತಿಭಟನೆಯನ್ನು ತಡೆಯಲು ಇನ್ನಿಲ್ಲದ ಪ್ರಯತ್ನಗಳನ್ನು ಶುರುವಿಟ್ಟುಕೊಂಡಿತು.


ಬೇರೆ ಸಂದರ್ಭಗಳಲ್ಲಾದರೆ ಸಂಜೆ 6 ಗಂಟೆಯ ನಂತರ ಶವವನ್ನು ಶವಾಗಾರದಿಂದ ಹೊರತೆಗೆದುಕೊಂಡು ಹೋಗಲು ಯಾವುದೇ ಕಾರಣಕ್ಕೂ ಅನುಮತಿ ನೀಡದವರು ರಾತ್ರಿ 9 ಗಂಟೆಯಾದರೂ ಸಹಾ ಅಜ್ಜಪ್ಪನ ಶವವನ್ನು ತೆಗೆದುಕೊಂಡು ಹೋಗಿ ಅಂತ್ಯಕ್ರಿಯೆ ಮಾಡಲು ಡಿ.ಸಿ. ಮತ್ತು ಎಸ್.ಪಿ. ಇಬ್ಬರೂ ಒತ್ತಾಯಿಸಿದಾಗ ಪ್ರತಿಭಟನಾಕಾರರು ಇದನ್ನು ಸ್ಪಷ್ಟವಾಗಿ ತಿರಸ್ಕರಿಸಿದರು. ಜಿಲ್ಲಾಧಿಕಾರಿ ದ್ಯಾಬೇರಿ 'ಅಜ್ಜಪ್ಪ 80 ಸಾವಿರ ರೂ. ಸಾಲ ಮಾಡಿಕೊಂಡಿದ್ದರಿಂದಲೇ ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂದು ಹೇಳುವ ಮೂಲಕ ರೈತರ ಕೋಪಕ್ಕೆ ಗುರಿಯಾದರೆ ಎಸ್ಪಿ ಸೋನಿಯಾ ನಾರಂಗ್ 'ಅಜ್ಜಪ್ಪನ ಫೋಟೊದೊಂದಿಗೆ ಮೆರವಣಿಗೆ ಹೋಗಿ, ಆದರೆ ಆತನ ಶವದೊಂದಿಗೆ ಮೆರವಣಿಗೆ ಹೊರಡುವುದಕ್ಕೆ ಅನುಮತಿ ನೀಡುವುದಿಲ್ಲ' ಎಂದು ಹೇಳುವುದರೊಂದಿಗೆ ರೈತರ ತಿರಸ್ಕಾರಕ್ಕೊಳಗಾದರು.

ಬಿ.ಪಿ.ಹರೀಶ್‌ಗೆ ರೈತರು ಹೆಟ್ಟಿದ್ದು

ಇದೇ ಸಂದರ್ಭದಲ್ಲಿ ಅಜ್ಜಪ್ಪನ ಶವವನ್ನು ನೋಡಲು ಬಂದಿದ್ದ ಹರಿಹರದ ಬಿಜೆಪಿ ಶಾಸಕ ಬಿ.ಪಿ.ಹರೀಶನನ್ನು ಅಲ್ಲಿದ್ದ ಯಾರೂ ಕ್ಯಾರೇ ಎನ್ನಲಿಲ್ಲ! ಇದರಿಂದಾಗಿ ನಖಶಿಖಾಂತ ಉರಿಸಿಕೊಂಡ ಹರೀಶ ತಾನೇ ರೈತರ ಹತ್ತಿರ ಬಂದು 'ಇವನು (ಅಜ್ಜಪ್ಪ) ರೈತನೇ ಅಲ್ಲ, ಎಲ್ಲಾ ಕಡೆ ಬೇಕಾದಷ್ಟು ಗೊಬ್ಬರ ಸಿಗ್ತಾ ಇದೆ... ಸಮಾಜಘಾತುಕ ಶಕ್ತಿಗಳ ಕುತಂತ್ರಕ್ಕೆ ಬಲಿಯಾಗಿ ಈ ಪ್ರತಿಭಟನೆ ಮಾಡುತ್ತಿದ್ದೀರಿ' ಎಂದು ಹೇಳಿದ ತಕ್ಷಣ ರೈತರೆಲ್ಲಾ

ಉಪನ್ಯಾಸಕರ ಈ ರಾಕ್ಷಸೀ ಪ್ರವೃತ್ತಿಗೆ ಈಗ ನಾಲ್ಕನೇ ...ಬಲಿಯಾಗಿ ಯಶವಂತ ಪಾಟೀಲ್ ನೇಣಿಗೆ ಶರಣಾಗಿದ್ದಾನೆ.

ಮಿತಿಮೀರಿದ ಉಪನ್ಯಾಸಕರ ದೌರ್ಜನ್ಯ!


ಧನಂಜಯ

ಆದಿಚುಂಚನಗಿರಿ ಮಠದ ಈ ಕಾಲೇಜು ಅನಾಮತ್ತು ...ವತ್ತೆರಡು ಎಕರೆ ಪ್ರದೇಶದಲ್ಲಿ ಹರಡಿಕೊಂಡಿರುವ ಇನ್ನೂರ ...ಪ್ಪತ್ನಾಲ್ಕು ಕೊಠಡಿಗಳಿರುವ ಬೃಹತ್ ಸಂಸ್ಥೆ. ಇಲ್ಲಿ ಅರವತ್ತು ...ಉಪನ್ಯಾಸಕರಿದ್ದು ಸುಮಾರು ಎರಡೂವರೆ ಸಾವಿರ ವಿದ್ಯಾರ್ಥಿಗಳು ...ವ್ಯಾಸಂಗ ಮಾಡುತ್ತಿದ್ದಾರೆ. ಇಂಜಿನಿಯರಿಂಗ್ ವಿಭಾಗದ ಹತ್ತು ...ಹಲವು ಕೋರ್ಸುಗಳನ್ನು ಓದುವುದಕ್ಕೆ ಇಲ್ಲಿ ಅವಕಾಶವಿದೆ. ...ಮೂಲಸೌಕರ್ಯಗಳ ವಿಚಾರದಲ್ಲಿ, ಉಪನ್ಯಾಸಕ ಮತ್ತು ...ಸಿಬ್ಬಂದಿಯ ವಿಚಾರದಲ್ಲಿ ಅಥವಾ ಇನ್ಯಾವುದೇ ನಾಗರಿಕ ...ಸೌಲಭ್ಯಗಳ ವಿಚಾರದಲ್ಲಿ ಇಲ್ಲಿ ಯಾವುದೇ ಕೊರತೆಯಿಲ್ಲ. ...ಇರುವ ಒಂದೇ ಒಂದು ಕೊರತೆಯೆಂದರೆ ಮಾನವೀಯತೆಯದ್ದು.

ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ...ಸಾಮಾನ್ಯವಾಗಿ ಹಿರಿಯ ವಿದ್ಯಾರ್ಥಿಗಳು ಕಿರಿಯ ವಿದ್ಯಾರ್ಥಿಗಳ ...ಮೇಲೆ ರ್‍ಯಾಗಿಂಗ್ ಮಾಡಿ ದೈಹಿಕ ಮತ್ತು ಮಾನಸಿಕ ಹಿಂಸೆ ಕೊಡುತ್ತಾರೆ. ...ಆದರೆ ಈ ಕಾಲೇಜಿನಲ್ಲಿ ಮೆಕ್ಯಾನಿಕಲ್ ಸೈನ್ಸ್ ಮತ್ತು ಕಂಪ್ಯೂಟರ್ ...ಸೈನ್ಸ್ ವಿಭಾಗದ ಕೆಲ ಉಪನ್ಯಾಸಕರೇ ಖುದ್ದು ವಿದ್ಯಾರ್ಥಿಗಳಿಗೆ ...ರ್‍ಯಾಗಿಂಗ್ ಮಾಡಿ ಅಮಾಯಕ ಜೀವಗಳನ್ನು ಬಲಿತೆಗೆದುಕೊಳ್ಳುತ್ತಿದ್ದಾರೆ. ...ಕಾಲೇಜಿನ ಹುಡುಗಿಯರನ್ನು ತಮ್ಮ ವಿಕೃತ ಖಯಾಲಿಗಳಿಗೆ ...ಬಳಸಿಕೊಳ್ಳುವುದು, ಒಪ್ಪದವರನ್ನು ಮಾನಸಿಕವಾಗಿ ಹಿಂಸಿಸುವುದು ...ಇಂತಹವರ ದಿನಚರಿಯಾಗಿಬಿಟ್ಟಿದೆ. ತಮಗೆ ಎದುರಾಡುವ ...ಹುಡುಗ-ಹುಡುಗಿಯರ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಿ ...ಅವರನ್ನು ಮಾನಸಿಕವಾಗಿ ಕೊಲ್ಲುವುದು ಕೂಡ ಇವರ ಚಾಳಿಯಾಗಿ ...ಬಿಟ್ಟಿದೆ.

ಈ ಹಿಂದೆ ಧರ್ಮಸ್ಥಳಕ್ಕೆ ಹೋಗಿದ್ದ ಇದೇ ಕಾಲೇಜಿನ ಹುಡುಗನೊಬ್ಬ ...ಸ್ತೆ ಬದಿಯಲ್ಲಿ ಕುಡಿದು ಮಲಗಿದ್ದ ಎಂದು ...ಮೆಕ್ಯಾನಿಕಲ್ ಸೈನ್ಸ್ ವಿಭಾಗದ ಉಪ...ನ್ಯಾಸಕ ಗಿರೀಶ್ ಕಾಲೇಜಿನಲ್ಲಿ ಡಂಗೂರ ...ಹೊಡೆದು ರಂಪ-ರಾಮಾಯಣ ಮಾಡಿದ್ದ. ...ನಂತರ ಆ ಹುಡುಗನ ಪೋಷಕರೇ ...ಕಾಲೇಜಿಗೆ ಬಂದು "ನಮ್ಮ ಮಗ ...ನಮ್ಮೊಂದಿಗೇನೇ ಧರ್ಮಸ್ಥಳಕ್ಕೆ ಬಂದಿದ್ದ, ...ನಮ್ಮ ಜೊತೆಯಲ್ಲಿಯೇ ಇದ್ದ, ಆತ ...ಎಲ್ಲೂ ಕುಡಿದು ಮಲಗಿರಲಿಲ್ಲ" ಎಂದು ...ಗಿರೀಶ್‌ಗೆ ಮುಖಕ್ಕೆ ಉಗಿದು ಮಂಗ...ಳಾರತಿ ಎತ್ತಿದ ಮೇಲೆಯೇ ಆತ ತನ್ನ ...ವಟರಕಲು ಬಾಯಿಯನ್ನು ಮುಚ್ಚಿಕೊಂಡದ್ದು.



ಇನ್ನೊಮ್ಮೆ ವಿದ್ಯಾರ್ಥಿವೇತನ ಪಡೆದುಕೊಂಡು ವಿದ್ಯಾಭ್ಯಾಸ ...ಮಾಡುತ್ತಿರುವ ಬಡ ಹುಡುಗನೊಬ್ಬ ಮೀಟರ್ ಎಂದು ಓದಬೇಕಾದ ...ಜಾಗದಲ್ಲಿ ಮಿಲಿಮೀಟರ್ ಎಂದು ಓದಿದ್ದನ್ನೇ ನೆಪ ಮಾಡಿಕೊಂಡು ...ಆ ಹುಡುಗನನ್ನು ಕಾಲೇಜಿನಿಂದ ಹೊರದಬ್ಬಿ ಪೋಷಕರನ್ನು ಕರೆಸಿ ...ಅವರೆದುರಲ್ಲಿ ದಂಡಿಸಿ ಅವಮಾನಿಸಿದ್ದ. ಇದೇ ವಿದ್ಯಾರ್ಥಿಗೆ ಹಾಜರಾತಿ ...ಕಡಿಮೆಯಿದೆ ಎಂದು ಮೂರು ಸಾವಿರ ದಂಡ ವಿಧಿಸಲಾಗಿತ್ತು.

ಒಟ್ಟಿನಲ್ಲಿ ಹೇಳಬೇಕೆಂದರೆ, ಈ ಕಾಲೇಜಿನ ವಿದ್ಯಾರ್ಥಿಗಳಿಗೆ ನಿತ್ಯ ...ಹಿಂಸೆ ಕೊಡುವುದು ಇಲ್ಲಿನ ಉಪನ್ಯಾಸಕರಿಗೆ ಅಭ್ಯಾಸವಾಗಿ ಹೋಗಿದೆ. ...ಕಡ್ಡಿಯನ್ನು ಗುಡ್ಡ ಮಾಡಿ ಪೋಷಕರನ್ನು ಕರೆಸುವುದು, ಅವರೆದುರೇ ...ವಿದ್ಯಾರ್ಥಿಗಳನ್ನು ಅವಮಾನಿಸುವುದು ಅವರ ದಿನಚರಿಯ ಭಾಗವಾಗಿ ಹೋಗಿದೆ. ಇದೆಲ್ಲ ಪ್ರಾಂಶುಪಾಲರಾದ ಡಾ.ಸಿ.ಕೆ. ಸುಬ್ಬರಾವ್ ಅವರಿಗೆ ಗೊತ್ತಿದ್ದರೂ ಅವರು ಉಪನ್ಯಾಸಕರ ಬೆಂಬಲಕ್ಕೆ ನಿಂತಿದ್ದಾರೆ. ಪ್ರತೀಬಾರಿ ಆತ್ಮಹತ್ಯೆ ನಡೆದಾಗಲೂ ಪೋಷಕರನ್ನು ಬೆದರಿಸಿ ಆ ದೌರ್ಜನ್ಯಗಳು ಹೊರಬರದಂತೆ ನೋಡಿಕೊಳ್ಳುವಲ್ಲಿ ಈ ಸಿಬ್ಬಂದಿಗಳು ಚಾಣಾಕ್ಷವಾಗಿಬಿಟ್ಟಿದ್ದಾರೆ.

ವಿನಾಕಾರಣ ದಂಡ ವಸೂಲಿ!

ಕಾಲೇಜು ಸೇರುವಾಗ ವಿದ್ಯಾರ್ಥಿಗಳು ಲಕ್ಷಾಂತರ ರೂಪಾಯಿ ಡೊನೇಷನ್ ಕೊಟ್ಟು ಇಲ್ಲಿ ಸೀಟು ಗಿಟ್ಟಿಸಿಕೊಳ್ಳಬೇಕು. ಈ ಡೊನೇಷನ್ ಎಂಬುದಕ್ಕೆ ಒಂದು ಮಿತಿಯೇ ಇಲ್ಲವೆಂಬಂತಾಗಿಬಿಟ್ಟಿದೆ. ಮಕ್ಕಳ ಭವಿಷ್ಯವನ್ನು ಆದ್ಯತೆಯ ವಿಚಾರವನ್ನಾಗಿಸಿದ ಪೋಷಕರು ಎಲ್ಲಿಂದಲೋ ದುಡ್ಡು ಹೊಂದಿಸಿ ಕೊಟ್ಟರೆ ಮುಗಿಯಿತೆಂಬಂತಿಲ್ಲ. ಹಾಜರಾತಿ ಕಡಿಮೆಯಿದೆಯೆಂದೋ, ನಡತೆ ಸರಿಯಿಲ್ಲ ಎಂದೋ ಯಾವ್ಯಾವುದೋ ನೆಪಗಳನ್ನು ಹುಡುಕಿ ಅರ್ಧದಷ್ಟು ವಿದ್ಯಾರ್ಥಿಗಳಿಗೆ ಸುಖಾಸುಮ್ಮನೇ ದಂಡ ವಿಧಿಸಿ ಹಣ ವಸೂಲಿ ಮಾಡುತ್ತಾರೆ. ಅದನ್ನೂ ಪೋಷಕರು ಭರಿಸಬೇಕು. ಈ ರೀತಿ ವಸೂಲಿ ಮಾಡಿದ ಹಣಕ್ಕೆ ರಶೀದಿಯನ್ನೂ ಕೊಡದೆ ಈ ಪ್ರಾಂಶುಪಾಲ, ಉಪನ್ಯಾಸಕ ಮತ್ತು ಸಿಬ್ಬಂದಿಯವರೆ ನುಂಗಿ ನೀರು ಕುಡಿಯುತ್ತಿದ್ದಾರೆ. ಎದುರು ಮಾತಾಡಿದವರನ್ನು ಅಥವಾ ಇಂತಹ ಲೂಟಿಯ ವಿರುದ್ಧ ದನಿ ಎತ್ತಿದವರನ್ನು ಹಿಂದುಮುಂದು ನೋಡದೇ ಕಾಲೇಜಿನಿಂದ ಕಿತ್ತೆಸೆಯಲಾಗುತ್ತದೆ. ತಮ್ಮ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ವಿದ್ಯಾರ್ಥಿಗಳು ಜೀವವನ್ನು ಕೈಲಿ ಹಿಡಿದು ಉಸಿರುಗಟ್ಟಿಸುವ ವಾತಾವರಣದಲ್ಲಿ ಬದುಕುತ್ತಿದ್ದಾರೆ.

ಸಿಟಿ ರವಿಯ ನಾಟಕ!

ಮೊನ್ನೆ ಯಶವಂತ ಪಾಟೀಲ ಆತ್ಮಹತ್ಯೆ ಮಾಡಿಕೊಂಡಾಗ 'ವಿದ್ಯಾರ್ಥಿಗಳಿಗೆ ಮಾನಸಿಕ ಹಿಂಸೆ ಕೊಡುತ್ತಿರುವ ಉಪನ್ಯಾಸಕರುಗಳು ನಮಗೆ ಬೇಡ, ಅವರನ್ನು ಅಮಾನತ್ತುಗೊಳಿಸಿ' ಎಂದು ಕಾಲೇಜಿನ ವಿದ್ಯಾರ್ಥಿಗಳು ಸ್ವಯಂಪ್ರೇರಿತರಾಗಿ ಪ್ರತಿಭಟನೆ ಗಿಳಿದಿದ್ದರು. ಇದರಲ್ಲಿ ಮಧ್ಯ ಪ್ರವೇಶಿಸಿದ ಸ್ಥಳೀಯ ಶಾಸಕ ಸಿಟಿ ರವಿ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸುವ ನಾಟಕವಾಡಿ ಹೋಗಿದ್ದಾನೆಯೇ ವಿನಃ ಈವರೆಗೆ ಘಟನೆಯ ಕುರಿತು ಏನನ್ನೂ ಮಾಡಿಲ್ಲ.

ಆಡಳಿತ ಮಂಡಳಿಯಲ್ಲಿಯೂ ಕೂಡ ಮೋಹನಗೌಡ, ನಾರಾಯಣಗೌಡ, ಸಣ್ಣತಿಮ್ಮೇಗೌಡ, ಸಣ್ಣಸಿದ್ದೇಗೌಡ ಮುಂತಾದವರೆಲ್ಲಾ ಸಭೆ ನಡೆಸಿ ಇಂತಹ ದುರ್ಘಟನೆಗಳಿಗೆ ಉಪನ್ಯಾಸಕರ ದುರ್ವರ್ತನೆಯೇ ಕಾರಣ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಆದರೂ ಅಂಥ ಉಪನ್ಯಾಸಕರ ಮೇಲೆ ಕ್ರಮ ಜರುಗಿಸಲು ಹಿಂಜರಿಯುತ್ತಿದ್ದಾರೆ. ಬಾಲಗಂಗಾಧರನಾಥ ಸ್ವಾಮಿಗೂ ಇಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆ ಗೊತ್ತಿದ್ದರೂ ಅವರೂ ಮೌನವಹಿಸಿ ಕುಳಿತಿದ್ದಾರೆ.

ಸಾರಾಂಶದಲ್ಲಿ ಇವರೆಲ್ಲರ ಮೌನ ಕುತ್ಸಿತ ಉಪನ್ಯಾಸಕರಿಗೆ ಮತ್ತಷ್ಟು ಕುಮ್ಮಕ್ಕಾಗುವುದಂತೂ ಸ್ಪಷ್ಟ. ಇದರರ್ಥ ಮತ್ತಷ್ಟು ಅಮಾಯಕ ವಿದ್ಯಾರ್ಥಿಗಳ ಬಲಿ!

■ ಅಜೀಜ್ ಕಿರಗುಂದ

...ಗಿರೀಶನ ವಿರುದ್ಧ ತಿರುಗಿ ಬಿದ್ದು ತೀವ್ರವಾಗಿ ಪ್ರತಿಭಟಿಸಿದಾಗ ಬಂದ ...ದಾರಿಗೆ ಸುಂಕವಿಲ್ಲವೆಂಬಂತೆ ಹರೀಶ್ ವಾಪಾಸ್ ಹೊರಟುಹೋದ!

ಗಾಂಧಿ ವೃತ್ತದಲ್ಲಿ ಶವದೊಂದಿಗೆ ದಿಗ್ಬಂಧನ!

ಜೂನ್ 19ರ ಬೆಳಿಗ್ಗೆ 10.30ಕ್ಕೆ ಎಸ್ಪಿ ಹಾಗೂ ಜಿಲ್ಲಾಧಿಕಾರಿಯ ...ಣ ಬೆದರಿಕೆಗಳನ್ನು ಹಿಮ್ಮೆಟ್ಟಿಸಿದ ರೈತರು ಮತ್ತು ಪ್ರಗತಿಪರರು ...ಅಜ್ಜಪ್ಪನ ಶವವನ್ನು ಟ್ರ್ಯಾಕ್ಟರ್‌ನಲ್ಲಿಟ್ಟುಕೊಂಡು ನಗರದ ಪ್ರಮುಖ ...ಬೀದಿಗಳಲ್ಲಿ ಮೆರವಣಿಗೆ ಹೊರಟು ...ದಾವಣಗೆರೆ ನಗರದ ಗಾಂಧಿ ಸರ್ಕಲ್ ...ತಲುಪಿ ಅಜ್ಜಪ್ಪನ ಶವವನ್ನು ಗಾಂಧಿ ...ವೃತ್ತದ ನಡುವೆ ಇಟ್ಟು ಪ್ರತಿಭಟನೆ ...ಯನ್ನು ಪ್ರಾರಂಭಿಸಿದರು. ರೈತ ಸಂಘದ ...ನಾಯಕರಾದ ಕೋಡಿಹಳ್ಳಿ ಚಂದ್ರ...ಶೇಖರ್ ಮತ್ತು ವೀರಸಂಗಯ್ಯನವರು ...ಈ ಪ್ರತಿಭಟನೆಯಲ್ಲಿ ಭಾಗವಹಿಸಿ...ದ್ದರಿಂದ ಪ್ರತಿಭಟನೆಯು ಮತ್ತಷ್ಟು ...ತೀವ್ರತೆಯನ್ನು ಪಡೆದುಕೊಂಡಿತು. ...ಸತತವಾಗಿ ಮೂರು ಗಂಟೆಗಳ ಕಾಲ ...ಗಾಂಧಿ ವೃತ್ತವನ್ನು ದಿಗ್ಬಂಧನಗೊಳಿ...ಸಿದ ಹೋರಾಟಗಾರರು ಬಿಜೆಪಿ ...ಸರ್ಕಾರದ ರೈತವಿರೋಧಿ ನೀತಿಗಳನ್ನು ಎಳೆಎಳೆಯಾಗಿ ಬಯಲಿಗೆಳೆದರು.



...ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ...ಶಾಮನೂರು ಶಿವಶಂಕರಪ್ಪ ಹಾಗೂ ಎಸ್.ಎಸ್.ಮಲ್ಲಿಕಾರ್ಜುನ್ ...ಮುಂತಾದವರು ರೈತರು ಪ್ರತಿಭಟಿಸುತ್ತಿದ್ದ ಸ್ಥಳಕ್ಕೆ ಬಂದು ಅಜ್ಜಪ್ಪನ ...ಕುಟುಂಬಸ್ಥರನ್ನು ಮಾತನಾಡಿಸಿ, ಕೆಪಿಸಿಸಿ ವತಿಯಿಂದ 1 ಲಕ್ಷ ರೂ. ...ಪರಿಹಾರ ಘೋಷಿಸಿದರು. ಆದರೆ ಇದೇ ಜಿಲ್ಲೆಯ ಉತ್ತರ ಕ್ಷೇತ್ರದಿಂದ ಶಾಸಕನಾಗಿ ಗೆದ್ದು ಕೃಷಿ ಮಂತ್ರಿಯೂ ಆಗಿರುವ 'ಖಾರಾಮಂಡಕ್ಕಿ ಆಸಾಮಿ' ಎಸ್.ಎ.ರವೀಂದ್ರನಾಥ್ ಮಾತ್ರ ಅಜ್ಜಪ್ಪನ ಶವವನ್ನಿಟ್ಟಿದ್ದ ಆಸ್ಪತ್ರೆಯ ಹತ್ತಿರವಾಗಲೀ, ಪ್ರತಿಭಟನೆ ನಡೆಯುತ್ತಿದ್ದ ಸ್ಥಳದ ಹತ್ತಿರವಾಗಲೀ ತೋರಿಕೆಗಾದರೂ ಸುಳಿಯದೆ ಕೃಷಿಕರ ಬಗೆಗಿರುವ ತನ್ನಲ್ಲಿನ ನಿರ್ಲಕ್ಷ್ಯತೆಯನ್ನು ಸ್ಪಷ್ಟವಾಗಿ ಸಾಬೀತು ಮಾಡಿದ.

ಅಜ್ಜಪ್ಪನ ಕುಟುಂಬಕ್ಕೆ 1.5 ಲಕ್ಷ ರೂ. ಪರಿಹಾರ, ಮಕ್ಕಳ ಓದಿನ ಖರ್ಚು ಹಾಗೂ ಅಜ್ಜಪ್ಪ ಸಾಗುವಳಿ ಮಾಡಿರುವ 4 ಎಕರೆ ಬಗರ್ ಹುಕುಂ ಜಮೀನಿಗೆ ಹಕ್ಕುಪತ್ರ ನೀಡುತ್ತೇವೆಂದು ಜಿಲ್ಲಾಡಳಿತ ಭರವಸೆ ನೀಡಿದ ನಂತರವೇ ಅಜ್ಜಪ್ಪನ ಶವವನ್ನು ಅಂತ್ಯಕ್ರಿಯೆಗೆ ತೆಗೆದುಕೊಂಡು ಹೋಗಲಾಯಿತು. ದುರಂತವೆಂದರೆ, ಜೂನ್ 18ರಂದು ಆತ್ಮಹತ್ಯೆ ಮಾಡಿಕೊಂಡಿದ್ದ ಅಜ್ಜಪ್ಪನ ಶವವನ್ನು ಅಂತ್ಯಸಂಸ್ಕಾರ ಮಾಡುವ ಮುನ್ನವೇ ಇಂದು (ಜೂನ್ 19) ಮತ್ತೆ 5 ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ! ಈ ಆತ್ಮಹತ್ಯೆ ಮಾಡಿಕೊಂಡ ರೈತರಲ್ಲಿ ಬಿಜೆಪಿಯ ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಸ್ವ-ಸ್ಥಳದ ರಾಜು ಎಂಬ ರೈತ ಕೂಡಾ ಒಬ್ಬ! ರೈತರ ಸಮಸ್ಯೆಗಳನ್ನು ನ್ಯಾಯಯುತವಾಗಿ ಪರಿಹರಿಸಿ ರೈತರ ಆತ್ಮಹತ್ಯೆಗಳನ್ನು ತಡೆಗಟ್ಟದಿದ್ದರೆ ಬರುವ ದಿನಗಳಲ್ಲಿ ಬಿಜೆಪಿ ಸರ್ಕಾರವೇ ಆತ್ಮಹತ್ಯೆಯ ದಾರಿಯನ್ನು ಹಿಡಿಯಬೇಕಾಗುತ್ತದೆ!


■ ಚಂದ್ರಶೇಖರ ತೋರಣಘಟ್ಟ

ಮಂಗಳೂರು: ಪಾಪಿ ಪಾಂಡುವಿಗೆ ಬಂತು ಕೇಡುಗಾಲ!

ಸಾಧು ಶೆಟ್ಟಿ ಮಟ್ಯಾಗಿ ಹೋದ, ಮೂಲ್ಕಿ ರಫೀಕ್ ನಕಲಿ ಎನ್‌ಕೌಂಟರ್‌ನಲ್ಲಿ ಸುಟ್ಟು ಹೋದ. ಇದ್ದೊಬ್ಬ ಚೇತು ಊರೇ ಬಿಟ್ಟು ಹೈದರಾಬಾದ್ ಸೇರಿಕೊಂಡ. ಈ ನಡುವೆ ಛೋಟಾ ರಾಜನ್‌ನ ಪ್ರಮುಖ ಕೊಂಡಿಯಾಗಿ ಕರಾವಳಿಯಲ್ಲಿ ಕಾರ್ಯಾಚರಿಸುತ್ತಿದ್ದ ಏಕೈಕ ವ್ಯಕ್ತಿಯೇ ಪಾಂಡು ಯಾನೆ ಪಾಂಡುರಂಗ ಪೈ!

ಈ ಪಾಂಡು 40ಕ್ಕೂ ಹೆಚ್ಚು ಕ್ರಿಮಿನಲ್ ಕೇಸುಗಳನ್ನು ಮತ್ತು 13ಕ್ಕೂ ಹೆಚ್ಚು ಸುಪಾರಿ ಕೊಲೆಗಳನ್ನು ಮಾಡಿ ಪಳಗಿರುವ ರೌಡಿ. ಛೋಟಾ ರಾಜನ್ ಬಂಟನಾದ ಈತ ಭೂಗತ ಲೋಕದಲ್ಲಿಯೇ ಮೋಸ್ಟ್ ಬ್ರಿಲಿಯೆಂಟ್. ಈ ಬ್ರಿಲಿಯನ್ಸಿಯೇ ಈತನನ್ನು ಈತನಕ ಜೀವಂತ ಇಟ್ಟಿದೆ ಎನ್ನಬಹುದು.

ಮಂಗಳೂರಿನ ಅತ್ತಾವರದ ಪೈ ಎಲೆಕ್ಟ್ರಾನಿಕ್ಸ್‌ನ ಮಾಲಿಕ ತಾರಾನಾಥ ಪೈ ಎಂಬಾತನ ಮಗನಾದ ಪಾಂಡುರಂಗ ಪೈ ಓದಿದ್ದು 9ನೇ ತರಗತಿ. ಆನಂತರ ಸುರತ್ಕಲ್ ಕೆ.ಆರ್.ಇ.ಸಿಯಲ್ಲಿ ಫಿಟ್ಟರ್ ಆಗಿ ಕೆಲಸ ಮಾಡುತ್ತಿರುವಾಗಲೇ ಹಿಂದೂ ಯುವ ಸೇನೆಯ ಹುಡುಗರ ಜತೆ ಸೇರಿ ಸುರತ್ಕಲ್‌ನಲ್ಲಿ ಮುಸ್ಲಿಂ ಯುವಕನೋರ್ವನ ರಿಕ್ಷಾ ಪುಡಿ ಮಾಡಿ ತಲೆ ಮರೆಸಿಕೊಂಡ ಪಾಂಡುವನ್ನು ಮುಂಬೈ ಕೈಬೀಸಿ ಕರೆಯಿತು. ಅಲ್ಲಿ ಮಂಗಳೂರು ಮೂಲದ ಮಟ್ಕಾ ದೊರೆಗಳಾದ ಅಮರ್‌ನಾಥ್ ಮತ್ತು ದಿವಾಕರ ಎಂಬವರ ಪರಿಚಯವಾಗಿ ಅವರ ಮೂಲಕ ಪಾಂಡುಗೆ ಸಿಕ್ಕಿದ್ದು ಸಾಧು ಶೆಟ್ಟಿಯ ಕನೆಕ್ಷನ್. ಸಾಧು ಶೆಟ್ಟಿಯ ಇಶಾರೆಯ ಮೇರೆಗೆ ದೇಜು ಶೆಟ್ಟಿ, ಅಶೋಕ್ ಪೂಜಾರಿ ಜೊತೆ ಸೇರಿ ಚಿಮಣಿ ಸಂತುವನ್ನು ಕೊಲೆ ಮಾಡಿದ ಪಾಂಡುವನ್ನು ಸಾಧು ಶೆಟ್ಟಿಯೇ ಪೊಲೀಸರಿಗೆ ಸರೆಂಡರ್ ಮಾಡಿಸಿದ್ದ. ಆನಂತರ ಸಾಧುಶೆಟ್ಟಿಯ ಆತ್ಮಾಪ್ತನಾಗಿದ್ದುಕೊಂಡೇ ಬರ್ಕೆ ಉದಯ ಶೆಟ್ಟಿ ಮರ್ಡರ್‌ನಲ್ಲಿ ನೇರ ಭಾಗಿಯಾದ. ಹೇಳಿದ ಕೆಲಸವನ್ನು ನಿಯತ್ತಾಗಿ ಮಾಡಿ ಮುಗಿಸುತ್ತಿದ್ದ ಪಾಂಡು, ಸಾಧುಶೆಟ್ಟಿಯ ತರುವಾಯ ಛೋಟಾ ರಾಜನ್‌ನ ನಂಬಿಗಸ್ತ ಬಂಟನಾಗಿ ಕಾಣಿಸಿಕೊಂಡ.


ಪಾಂಡು

ಸಾಧು ಶೆಟ್ಟಿಯ ಮೂಲಕ ಛೋಟಾ ರಾಜನ್‌ಗೆ ಪರಿಚಯನಾದ ಮತ್ತೊಬ್ಬ ಕಿರಾತಕನ ಹೆಸರೇ ಚೇತು. ಈತ ಬಾಂಬೆಯ ಭೀವಂಡಿಯಲ್ಲಿ ಕಾರ್ಪೊರೇಟರ್ ಸಂತೋಷ್ ಶೆಟ್ಟಿ ಮತ್ತು ಕೃಷ್ಣ ಎಂಬುವವರನ್ನು ಕಡಿದು ಕೊಲೆ ಮಾಡಿದ. ಎಮ್ಮೆಕೆರೆ ಸಲಾಂನನ್ನು ಮುಗಿಸಲು ಸುಪಾರಿ ಪಡೆದ ಚೇತು ಸಲಾಂನ ಅಕ್ಕನ ಮಗ ಸಲೀಂನನ್ನು ಕೊಂದು ಹಾಕಿದ. ಆ ಎರಡೂ ಕೊಲೆಗಳ ಸಂದರ್ಭದಲ್ಲಿ ಚೇತುನೊಂದಿಗಿದ್ದವನು ಪಾಂಡು!

ಹೀಗೆ ಸುಪಾರಿ ಕೊಲೆಗಳೆಂದರೆ ಸಿಗರೇಟು ಸೇದಿ ಮುಗಿಸಿದಷ್ಟೇ ಪಾಂಡುಗೆ ಸಲೀಸಾಗಿ ಹೋಗಿತ್ತು. ಇಂತಹ ಪಾಂಡು ಶುಂಠಿಕೊಪ್ಪದ ಎಸ್ಟೇಟ್ ಒಂದರಲ್ಲಿ ಸಾಮಾನ್ಯ ಕೂಲಿ ಆಳಿನಂತೆ ಕೆಲಸ ಮಾಡಿಕೊಂಡಿದ್ದಾಗ 2001ರಲ್ಲಿ ಆತನನ್ನು ಮಂಗಳೂರು ಪೊಲೀಸರು ಬಂಧಿಸಿದರು, ಜೈಲಿಗೆ ದೂಡಿದರು. ಹೇಗಿದ್ದರೂ ಹಿಂದೊಮ್ಮೆ ಜೀವಾವಧಿ ಶಿಕ್ಷೆಗೊಳಪಟ್ಟು ಮಂಗಳೂರಿನ ಸಬ್‌ಜೈಲಿನಲ್ಲಿದ್ದ ವಾಮಂಜೂರು ರೋಹಿಯ ಎಸ್ಕೇಪ್ ಯತ್ನದ ಸ್ಕೆಚ್ ರೂಪಿಸಿದ್ದಕ್ಕಾಗಿ ಮಂಗಳೂರು ಪೊಲೀಸರಿಗೆ ಪಾಂಡು ಬೇಕಾಗಿದ್ದ. ಆದರೆ ಈ ಪಾಂಡು ಪೊಲೀಸರ ಕೈಗೆ ಸಿಗದೇ ಅವರಿಗೆ ಚಳ್ಳೆ ಹಣ್ಣು ತಿನ್ನಿಸಿಯೇ ಕಾಲ ಕಳೆಯುತ್ತಿದ್ದ. ಕೊನೆಗೂ ಪೊಲೀಸರ ಕೈಗೆ ಸಿಕ್ಕಿಹಾಕಿಕೊಂಡ ಪಾಂಡು ನಿಜವಾಗಲೂ ಎಷ್ಟು ನಟೋರಿಯಸ್ ಎಂದು ಸ್ವತಃ ಪೊಲೀಸರಿಗೂ ಸಂಪೂರ್ಣವಾಗಿ ಗೊತ್ತಾಗಿದ್ದು ಆತನನ್ನು ಬಂಧಿಸಿದ ನಂತರವೇ!

ಈ ಪಾಂಡು 2001ರಲ್ಲಿ ತನ್ನ ಸಹಚರರೊಂದಿಗೆ ಸೇರಿಕೊಂಡು ಛೋಟಾ ರಾಜನ್‌ನ ಇಶಾರೆಯಂತೆ ರೈಸ್ ಬಶೀರ್ ಶೇಖ್‌ನನ್ನು ಕೊಂದು ಹಾಕಿದ್ದ. ಅದೂ ಹೇಗಂತೀರ? ದಾವೂದ್ ಇಬ್ರಾಹಿಂನ ಖಾಸಾ ನೆಂಟ ಕಂ ಛೋಟಾ ಶಕೀಲನ ಬಲಗೈ ಬಂಟನಾಗಿದ್ದ ರೈಸ್ ಬಾಟ್ಲಾ ಅಲಿಯಾಸ್ ರೈಸ್ ಬಶೀರ್ ಶೇಖ್ ಅಂದು ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸಿ ಹೊರಬರುತ್ತಿದ್ದಂತೆಯೇ ಆತನನ್ನು ಕಡಿದು ಹಾಕಿದ್ದರು. ಅಂದಿನಿಂದ ದಾವೂದ್ ಗ್ಯಾಂಗಿನ ಕೆಂಗಣ್ಣಿಗೆ ಗುರಿಯಾಗಿದ್ದ ಪಾಂಡು ತನ್ನ ಬ್ರಿಲಿಯನ್ಸಿಯಿಂದಲೇ ದಾವೂದ್ ಕಣ್ಣು ತಪ್ಪಿಸಿ ಬದುಕಿದ್ದ. ಯಾಕೆಂದರೆ ಅಂದು ರೈಸ್ ಬಶೀರ್ ಶೇಖ್‌ನನ್ನು ಕೊಂದು ಹಾಕಿದಾಗ ಪಾಂಡುನೊಂದಿಗಿದ್ದ ಇತರೆ ಆರು ಮಂದಿಯನ್ನು ನಕಲಿ ಎನ್‌ಕೌಂಟರ್‌ಗಳಲ್ಲಿ ಮುಗಿಸಿ ಹಾಕುವಲ್ಲಿ ದಾವೂದ್ ಈಗಾಗಲೇ ಯಶಸ್ವಿಯಾಗಿದ್ದ. ಅವರುಗಳಲ್ಲಿ ಆನಂದ್ ಪುತ್ರನೆಂಬ ಗುರು ಸಾಟಂ ಸಹಚರನನ್ನು ಗುಜರಾತ್‌ನ ಪೊಲೀಸರು ನಕಲಿ ಎನ್‌ಕೌಂಟರ್ ಮಾಡಿ ಮುಗಿಸಿದ್ದರು.

ಮಂಗಳೂರು ಪೊಲೀಸರಿಗೆ ಪಾಂಡು ಸೆರೆಸಿಕ್ಕಿ ಜೈಲು ಪಾಲಾದಾಗ ಬಾಟ್ಲಾ ಹತ್ಯೆಯ ಕೊನೆಯ ರಿವೇಂಜಿಗೆ ದಾವೂದ್ ದೂರದಿಂದಲೇ ತಹತಹಿಸತೊಡಗಿದ್ದ. ಇದನ್ನರಿತ ಪಾಂಡು "ಇನ್ನು ನನಗೆ ಜೈಲೇ ಸೇಫ್" ಎಂದು ಲೆಕ್ಕ ಹಾಕಿ ತನಗೆ ಜಾಮೀನು ಸಿಗುವ ಸಂದರ್ಭವಿದ್ದಾಗಲೂ ಜೈಲಲ್ಲೇ ಇರಲು ನಿರ್ಧರಿಸಿದ್ದ. ಆದರೆ ಇತ್ತೀಚಿನ ಚುನಾವಣೆ ಸಂದರ್ಭದಲ್ಲಿ ಛೋಟಾ ರಾಜನ್ ಸ್ವತಃ ಕಳಿಸಿಕೊಟ್ಟ 20,000 ರೂ. ಕ್ಯಾಶ್ ಸೆಕ್ಯುರಿಟಿ ಮೇಲೆ ಗುಪ್ತವಾಗಿ ಜೈಲಿನಿಂದ ಹೊರಬಂದಿದ್ದ.

ಹೀಗೆ ಹೊರ ಬಂದವನು ಸುಮ್ಮನಿರದೇ ಕರಾವಳಿಯ ಬಿಲ್ಡರ್‌ಗಳ ಹಫ್ತಾ ವಸೂಲಿ ಕಾಯಕಕ್ಕೆ ಇಳಿದ. ಇದು ಗೊತ್ತಾಗುತ್ತಲೇ ಉಳ್ಳಾಲದ ಇನ್ಸ್‌ಪೆಕ್ಟರ್ ಜಯಂತ್ ಶೆಟ್ಟಿ ಪಾಂಡುನನ್ನು ಮತ್ತೆ ಬಂಧಿಸಿದರು. ಇವನನ್ನು ಹೇಗಾದರೂ ತಪ್ಪಾಗಿಸಬೇಕೆಂದು 2001ರಲ್ಲಿ ಗುಜರಾತ್‌ನ ವ್ಯಾಪಾರಿಯೋರ್ವನ ಕೊಲೆಯತ್ನದ ವಾರಂಟ್ ಮೇಲೆ ಪಾಂಡುವನ್ನು ಗುಜರಾತ್ ಪೊಲೀಸರಿಗೆ ಒಪ್ಪಿಸಿದರು.

ಈಗ ಖತರ್ನಾಕ್ ಗುಜರಾತ್ ಪೊಲೀಸರ ಪಾಲಾಗಿರುವ ಪಾಂಡು ಅವರ ಕಪಿಮುಷ್ಟಿಯಿಂದ ಪಾರಾಗುತ್ತಾನಾ? ಹಾಗೆ ಸೇಫಾಗಿ ಹೊರ ಬರಲು ದಾವೂದ್ ಅವನನ್ನು ಬಿಡುತ್ತಾನಾ? ಕಾದು ನೋಡಬೇಕಾಗಿದೆ.

■ ಪ್ರಕಾಶ್ ಪಿಂಟೋ


ಹೆಣ್ಣು ಹೆತ್ತವರ ಪಾಡು ಕೇಳುವವರ್‍ಯಾರು?

ಆಸಿಡ್ ದಾಳಿಗೆ ಬಲಿಯಾದ ಹಸೀನಾ, ಶೃತಿ; ಈಗ ಇರಿತಕ್ಕೆ ತುತ್ತಾಗಿ ಆಸ್ಪತ್ರೆ ಪಾಲಾದ ಪ್ರಸನ್ನಲಕ್ಷ್ಮಿ, ರೂಪಾ ಮತ್ತು ಮೇ 2ರ ರಾತ್ರಿ ತಲಘಟ್ಟಪುರ ಪೊಲೀಸ್ ವ್ಯಾಪ್ತಿಯಲ್ಲಿ ಕೊಲೆಯಾದ ರಹೀನಾ; ಎಲ್ಲರದೂ ಒಂದೇ ಕತೆ. ಇವರ್‍ಯಾರೂ ತಮ್ಮ ಮೇಲೆ ದಾಳಿ ನಡೆಸಿದ ಸೋಕಾಲ್ಡ್ ಭಗ್ನಪ್ರೇಮಿ(!)ಯನ್ನು ಪ್ರೀತಿಸಿರಲಿಲ್ಲ. ಹೆಚ್ಚೆಂದರೆ ಮಾತಾಡಿಸಿರಬಹುದು ಅಥವಾ ಸುಮ್ಮಸುಮ್ಮನೇ ನನ್ನನ್ನು ಪೀಡಿಸಬೇಡ ಎಂದು ಉಗಿದಿರಬಹುದು.


ಶ್ರುತಿ

ಆದರೆ stalking ಅಂದರೆ ಕೀಚಕ ಪ್ರವೃತ್ತಿಯ ಲಕ್ಷಣಗಳೇ ವಿಚಿತ್ರ. ಯಾರೋ ಪುಂಡನೊಬ್ಬನಿಗೆ ಆಕೆ ಇಷ್ಟವಾದಳೆಂದರೆ ಮುಗಿದೇಹೋಯಿತು. ವಿನಾಕಾರಣ ಹಿಂಬಾಲಿಸುತ್ತಾನೆ. ಹುಡುಗಿಯ ಮನೆಯವರು ಹಿಡಿದುಬಡಿದರೂ ಅದನ್ನೇ ಆತ ತನ್ನ ತ್ಯಾಗ ಎಂದು ಭಾವಿಸುತ್ತಾನೆ. ಇವತ್ತಲ್ಲಾ ನಾಳೆ ತನ್ನ ಪ್ರೀತಿ ಆಕೆಗೆ ಅರ್ಥವಾಗಿ ಖಂಡಿತಾ ಒಲಿದೇ ಒಲಿಯುತ್ತಾಳೆಂದು ಮತ್ತಷ್ಟು ದುಸ್ಸಾಹಕ್ಕೆ ಕೈಹಾಕುತ್ತಾನೆ. ತನ್ನ ಪರಿಚಿತರು ಸ್ನೇಹಿತರ ಬಳಿ ಆಕೆ ತನ್ನನ್ನು ಪ್ರೀತಿಸುತ್ತಿದ್ದಾಳೆಂದೇ ಸುಳ್ಳು ಹೇಳುತ್ತಾನೆ. ಆಕೆಯ ಮನೆ ಸುತ್ತಮುತ್ತಲ ಗೋಡೆಗಳ ಮೇಲೆ ತನ್ನ ಹೆಸರಿನ ಜೊತೆ ಆಕೆಯ ಹೆಸರನ್ನೂ ಸೇರಿಸಿ ಬರೆಯುತ್ತಾನೆ. ಬೇಕುಬೇಕೆಂತಲೇ ಮನೆ ಸುತ್ತಮುತ್ತ ಓಡಾಡುತ್ತಾನೆ.

ಹೀಗೆ ಅಪಪ್ರಚಾರ ಮಾಡಿಬಿಟ್ಟರೆ ಬೇರೆ ವಿಧಿಯಿಲ್ಲದೇ ಆಕೆ ತನ್ನ ವಶವಾಗುತ್ತಾಳೆಂಬ ಭ್ರಮೆಗೆ ಬಿದ್ದವನು ಒಂದು ಹಂತದಲ್ಲಿ ಆಕ್ರಮಣಕಾರಿಯಾಗುತ್ತಾನೆ. ಯಾವುದೂ ಫಲಿಸದೇ ಹೋದಾಗ ಆಕೆ ತನಗೆ ಸಿಗದಿದ್ದರೆ ಬೇರೆ ಯಾರಿಗೂ ಸಿಗಬಾರದೆಂಬ ನಿರ್ಧಾರಕ್ಕೆ ಬರುತ್ತಾನೆ. ಆಕೆಯನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಳ್ಳಲು ಅಥವಾ ಆಸಿಡ್ ಹಾಕಿ ವಿರೂಪಗೊಳಿಸಲು ನಿರ್ಧರಿಸುತ್ತಾನೆ.


ಹಸೀನಾ

ಇಂಥ ನವಕೀಚಕರ ಪೀಡೆಗೆ ಬಲಿಯಾದ ಕುಟುಂಬ ಅನುಭವಿಸುವ ಪಾಡಂತೂ ಇನ್ನೂ ಭಯಂಕರ. ಒಂದೋ ಮನೆ ಖಾಲಿ ಮಾಡಿಕೊಂಡು ಅಜ್ಞಾತಸ್ಥಳಕ್ಕೆ ಹೋಗಬೇಕು. ಯಾರ ಗಮನಕ್ಕೂ ಬರದಂತೆ ವಾಸಿಸಬೇಕು. ಪೀಡನೆಗೆ ಬಲಿಯಾದ ಹುಡುಗಿ ಮತ್ತೆ ಕಾಲೇಜಿಗೆ ಬರುವಂತಿಲ್ಲ, ಕೆಲಸಕ್ಕೆ ಹೋಗುವಂತಿಲ್ಲ, ಹಾಗೊಮ್ಮೆ ತಿರುಗೇಟು ಕೊಡುವ ಪೋಷಕರಾಗಿದ್ದರೆ ಎಲ್ಲಾ ಕೆಲಸಬಿಟ್ಟು ಈತನನ್ನೇ ಹಿಂಬಾಲಿಸಬೇಕು. ಈತನ ನೆರವಿಗೆ ಬರುವ ರೌಡಿಗಳನ್ನು ಎದುರಿಸಲು ಸಜ್ಜಾಗಬೇಕು. ವಿನಾಕಾರಣ ಬಡಿದಾಟಕ್ಕೆ ನಿಂತು ರೌಡಿ, ಪೊಲೀಸು, ಕೋರ್ಟು ಎಲ್ಲಕ್ಕೂ ತಲೆ ಕೊಡಬೇಕು.

ಎಂಥಾ ತಾಪತ್ರಯವಲ್ಲವೆ? ಈ ಥರದ ಪ್ರವೃತ್ತಿಗೆಂದೇ ವಿಶೇಷ ಕಾನೂನಿಲ್ಲ. ನಮ್ಮ ಹುಡುಗಿಯನ್ನು ಇಂಥವನು ಹಿಂಬಾಲಿಸುತ್ತಿದ್ದಾನೆ, ಪ್ರೀತ್ಸೇ ಅಂಥ ಪೀಡಿಸುತ್ತಿದ್ದಾನೆ ಎಂದು ಪೊಲೀಸರಿಗೇನಾದರೂ ದೂರು ಕೊಟ್ಟರೆ ಇದಕ್ಕೆ ದಂಡಸಂಹಿತೆಯಲ್ಲಿ ಯಾವುದೇ ವಿವರಣೆಯಿಲ್ಲ. ಪೊಲೀಸರು ತಲೆ ಕೆಡಿಸಿಕೊಳ್ಳುವುದಿಲ್ಲ. ಆಸಿಡ್ ಹಾಕಿದ ನಂತರವೋ, ಕೊಲೆಗೆ ಯತ್ನಿಸಿದ್ದಕ್ಕೋ ಪೊಲೀಸರು ಕ್ರಮ ಕೈಗೊಳ್ಳುತ್ತಾರೆ ನಿಜ. ಆದರೆ ಆ ಹೊತ್ತಿಗೆ ಕಾಲ ಮಿಂಚಿರುತ್ತದೆ.

Stalking ಪಿಡುಗನ್ನು ಪ್ರಾರಂಭದ ಹಂತದಲ್ಲೇ ಚಿವುಟ ಹಾಕಿದ್ದರೆ ಅದೆಷ್ಟು ಹೆಣ್ಣುಮಕ್ಕಳ ಬದುಕು ಹಸನಾಗುತ್ತಿತ್ತೋ? ಈಗಲೂ ಕಾಲ ಮಿಂಚಿಲ್ಲ.


ಅವನು ಬಯಸಿದ ಎಂದಾಕ್ಷಣ ಅವಳು ಒಪ್ಪಲೇಬೇಕೆ? ಒಪ್ಪದೇ ಹೋದರೆ ಆಕೆಗೆ ಮರಣದಂಡನೆಯೆ?

ಪ್ರೀತಿಸಿದ ತಪ್ಪಿಗೆ ತಲೆತಿರುಕನೊಬ್ಬ ಕಂಡ ಹೆಣ್ಣು ಮಗಳೊಬ್ಬಳಿಗೆ ಆಸಿಡ್ ಹಾಕುತ್ತಾನೆಂದರೆ, ಆಕೆಗೆ ಇಷ್ಟವಿಲ್ಲದೇ ಹೋದರೂ ತನ್ನನ್ನು ಮದುವೆಯಾಗಲಿಲ್ಲ ಎಂಬ ಒಂದೇ ಕಾರಣಕ್ಕೆ ಚಾಕು ಹಾಕಿ ಕೊಲ್ಲುತ್ತಾನೆಂದರೆ ಆತನನ್ನು ಪತ್ರಿಕೆಗಳು ಭಗ್ನಪ್ರೇಮಿ ಎನ್ನಬಹುದಾ?

'ಯುವತಿಯ ಕತ್ತು ಕುಯ್ದ ಭಗ್ನಪ್ರೇಮಿ' ಎಂಬ ಶೀರ್ಷಿಕೆಯಡಿಯಲ್ಲಿ ಇತ್ತೀಚೆಗೆ ವಿ.ಕ. ಪ್ರಕಟಿಸಿದ ಕ್ರೈಮ್ ರಿಪೋರ್ಟ್ ಒಂದರ ಪ್ರಕಾರ ಮನೆಯೊಂದಕ್ಕೆ ನುಗ್ಗಿ ತನ್ನನ್ನು ಮದುವೆಯಾಗಲೊಪ್ಪದ ಯುವತಿಯ ಕತ್ತು ಸೀಳಿದವನು ಭಗ್ನಪ್ರೇಮಿಯಂತೆ!

ಅದು ಇದೇ ಜೂನ್ 18ರಂದು ಬ್ಯಾಟರಾಯನಪುರ ಪೊಲೀಸ್ ಠಾಣೆ ವ್ಯಾಪ್ತಿಯ ಟಿಂಬರ್ ಯಾರ್ಡ್ ಲೇಔಟ್‌ನಲ್ಲಿ ನಡೆದ ದುರ್ಘಟನೆ. ಇನ್ನೂ ಹದಿನೇಳರ ಪ್ರಾಯದ ರೂಪಾಳ ತಂದೆ ಪೊಲೀಸ್ ಕಾನ್‌ಸ್ಟೇಬಲ್. ಇನ್ನೆರಡು ದಿನಕ್ಕೆ ಆಕೆಯ ನಿಶ್ಚಿತಾರ್ಥ ನಿಗದಿಯಾಗಿತ್ತು, ಎಲ್ಲಾ

ಅಷ್ಟಕ್ಕೂ ರೂಪಾ ಆತನನ್ನು ಪ್ರೀತಿಸಿರಲಿಲ್ಲ. ಒಂದಷ್ಟು ದಿನಗಳ ಕಾಲ ಆಕೆಯ ಅಜ್ಜ ನಡೆಸುತ್ತಿದ್ದ ತರಕಾರಿ ಅಂಗಡಿಯ ಕೆಲಸಗಾರನಾಗಿದ್ದು ಕ್ರಮೇಣ ಆಟೋ ಓಡಿಸಿ ಕೊಂಡಿದ್ದ ಶಿವಾನಂದನಿಗೂ ರೂಪಾಳಿಗೂ ವಯಸ್ಸಿನಲ್ಲಿ ಹತ್ತು ವರ್ಷ ಅಂತರವಿತ್ತು. ಎಸ್ಸೆಲ್ಸಿ ಮುಗಿಸಿ ಕಾಲೇಜಿಗೆ ಹೋಗುತ್ತಿದ್ದ ರೂಪಾಳ ಮೇಲೆ ಕೆಲಸಗಾರ ಶಿವನ ಕಣ್ಣು ಬಿತ್ತು. ಪದೇಪದೇ ಆಕೆಯನ್ನು ಹಿಂಬಾಲಿಸುತ್ತಿದ್ದ. ಎಲ್ಲೆಂದರಲ್ಲಿ ಅಡ್ಡಗಟ್ಟಿ 'ನಿನ್ನನ್ನೇ ಪ್ರೀತಿಸ್ತೀನಿ' ಅಂದ. ಇದನ್ನು ತನ್ನ ಚಿಕ್ಕಪ್ಪನಿಗೆ ಹೇಳಿಕೊಂಡು ಕಣ್ಣೀರಿಟ್ಟಿದ್ದ ರೂಪಾಳಿಗೆ ಆತನ ಬಗ್ಗೆ ಕಿಂಚಿತ್ತೂ ಆಸಕ್ತಿಯಿರಲಿಲ್ಲ. ಈ ಬಗ್ಗೆ ಆಕೆಯ ಚಿಕ್ಕಪ್ಪ ಕೂಡ ಒಂದೆರಡು ಬಾರಿ ಶಿವನನ್ನು ಗದರಿಸಿ ವಾರ್ನಿಂಗ್ ಕೂಡ ಮಾಡಿದ್ದರು.


ಕೀಚಕ ಶಿವಾನಂದ

ಆದರೆ ಶಿವನ ಹುಚ್ಚು ದಿನೇದಿನೇ ಉಲ್ಬಣಿಸಿತೇ ಹೊರತು ಕಮ್ಮಿಯಾಗಲಿಲ್ಲ. ಇದರಿಂದ ನೊಂದ ತಂದೆತಾಯಿ ರೂಪಾಳನ್ನೇ ಕಾಲೇಜು ಬಿಡಿಸಿ ತುರ್ತಾಗಿ ಆಕೆಗೆ ಮದುವೆ ಮಾಡಲು ನಿಶ್ಚಯಿಸಿ ಜೂನ್ 20ರ ಶುಕ್ರವಾರದಂದು ನಿಶ್ಚಿತಾರ್ಥವನ್ನೂ ನಿಗದಿಗೊಳಿಸಿದ್ದಾರೆ. ಇದು ಗೊತ್ತಾಗಿದ್ದೇ ಜೂನ್ 18ಕ್ಕೆ

ಪೋರ್ಕಿಯೊಬ್ಬ ಪದೇಪದೇ ಆಕೆಗೆ ಅಶ್ಲೀಲ ಮೆಸೇಜ್ ಕಳಿಸಲಾರಂಭಿಸಿದ. ಆತ ಕೂಡ ಅನಂತಪುರದವನೇ. ಮೊದಮೊದಲು ಯಾರೋ ತಮಾಷೆಗೆ ಕಳಿಸುತ್ತಿರಬೇಕೆಂದು ನಿರ್ಲಕ್ಷಿಸಿದ ಪ್ರಸನ್ನಲಕ್ಷ್ಮಿ ಆನಂತರ ಆತನಿಗೆ ಬುದ್ಧಿ ಹೇಳಿದ್ದಾಳೆ.

ಆದರೆ ವಿಷ್ಣು ಬಿಡಲಿಲ್ಲ, ನಿನ್ನನ್ನೇ ಪ್ರೀತಿಸ್ತೀನಿ. ನಿನ್ನ ಬಿಟ್ಟು ಬದುಕೋಲ್ಲ ಎಂದು ಪದೇಪದೇ ಇಮೇಲಿಗೆ ಮೆಸೇಜ್ ಕಳಿಸಲಾರಂಭಿಸಿದ್ದಾನೆ. ಮೇ ಇಪ್ಪತ್ತರ ಹೊತ್ತಿಗೆ ಅನಂತಪುರದಿಂದ ಬಸ್ ಹತ್ತಿ ಬೆಂಗಳೂರಿಗೆ ಬಂದೇಬಿಟ್ಟ. ಸೀದಾ ಆಕೆ ಕೆಲಸ ಮಾಡುತ್ತಿದ್ದ ಗ್ರಾನೈಟ್ ಅಂಗಡಿಗೇ ಬಂದು ಪೀಡಿಸುತ್ತಿದ್ದ. ರೋಸತ್ತ ಪ್ರಸನ್ನಲಕ್ಷ್ಮಿ ಆತನನ್ನು ವಾಚಾಮಗೋಚರ ಬಯ್ಯುತ್ತಿದ್ದರೆ ಅದನ್ನೇ ಸಲುಗೆ ಎಂದುಕೊಂಡ. ಅಂತಿಮವಾಗಿ ಪ್ರಸನ್ನಲಕ್ಷ್ಮಿಯನ್ನೇ ಕೊಂದುಬಿಡಲು ನಿರ್ಧರಿಸಿದ. ಅದಕ್ಕೆಂದೇ ಉದ್ದದ ಚಾಕು, ಖಾರದ ಪುಡಿ, ಡಬ್ಬಿಯೊಂದರ ತುಂಬ ಸೀಮೆಎಣ್ಣೆ ಮತ್ತು ಬೆಂಕಿಪೆಟ್ಟಿಗೆಯ ಸಮೇತ ಜೂನ್ ಮೂರರ ಬೆಳಿಗ್ಗೆ ರಾಜ್‌ಕುಮಾರ್ ರಸ್ತೆಗೆ ಬಂದವನೇ ಆದಿತ್ಯ ಗ್ರಾನೈಟ್ಸ್‌ಗೆ ನುಗ್ಗಿ ಪ್ರಸನ್ನಲಕ್ಷ್ಮೀಯನ್ನು ಹಿಡಿದು ಮನಸೋಚ್ಛೆ ತಿವಿದುಬಿಟ್ಟ!

ಪ್ರೀತಿಸದಿದ್ದರೆ ಮರಣದಂಡನೆ


ಸಿದ್ಧತೆಯೂ ನಡೆದಿತ್ತು. ಆದರೆ ಜೂನ್ 18ರ ಬೆಳಿಗ್ಗೆ ಹನ್ನೊಂದೂವರೆಯ ಹೊತ್ತಿಗೆ ಇದ್ದಕ್ಕಿದ್ದಂತೆ ಆಕೆಯಿದ್ದ ಮನೆಯೊಳಕ್ಕೆ ನುಗ್ಗಿಬಂದ ಶಿವಾ ಅಲಿಯಾಸ್ ಶಿವಾನಂದಗಿರಿ ಎಂಬ ಪುಂಡನೊಬ್ಬ ರೂಪಾಳನ್ನು ಎಳೆಕೊಂಡಿದ್ದ 'ನೀನೇನಾದ್ರೂ ನನ್ನನ್ನ ಮದುವೆಯಾಗದೇ ಹೋದ್ರೆ ನಾನು ಸಾಯ್ತೀನಿ. ನಿನ್ನನ್ನೂ ಕೊಂದುಬಿಟ್ಟೇ ಆತ್ಮಹತ್ಯೆ ಮಾಡ್ಕೋತೀನಿ' ಎಂದು ಹುಚ್ಚುನಂತೆ ಬಡಬಡಿಸುತ್ತಿದ್ದ.

■ ರಾ. ಸೋಮನಾಥ್

ಹೇಳಿಕೇಳಿ ಅದು ರೂಪಾಳ ಅಜ್ಜ ಜಯಮ್ಮನ ಮನೆ. ಅಜ್ಜಿಯ ಹೊರತಾಗಿ ಆ ಮನೆಯಲ್ಲಿ ಬೇರೆ ಯಾರೂ ಇಲ್ಲದ್ದನ್ನೇ ಹೊಂಚಿ ಶಿವಾ ನುಗ್ಗಿಬಿಟ್ಟಿದ್ದಾನೆ. ವಿಕಾವಿಕಿ ಸಂಭವಿಸಿದ ದಾಳಿಯಿಂದ ದಿಕ್ಕುತೋಚದಂತಾದ ರೂಪಾ ಕಿರುಚಿದ್ದಾಳೆ. ಅಕ್ಕಪಕ್ಕದ ಜನ ಇನ್ನೇನು ಬಂದೇಬಿಟ್ಟರು ಎನ್ನುವಾಗಲೇ ಶಿವಾ ಮತ್ತಷ್ಟು ಕ್ರುದ್ಧನಾದ. ರೂಪಾಳನ್ನು ಎಳೆಕೊಂಡಿದ್ದೇ ಕೋಣೆಗೆ ನುಗ್ಗಿ ಬೋಲ್ಟ್ ಹಾಕಿಕೊಂಡ. ಕೊಲ್ಲಲೆಂದೇ ನಿಶ್ಚಯಿಸಿ ಮೊದಲೇ ಬ್ಲೇಡ್ ಒಂದನ್ನು ತಂದಿದ್ದ ಆತ ತಡಮಾಡದೇ ರೂಪಾಳ ಕುತ್ತಿಗೆ ಸೀಳಿಬಿಟ್ಟ. ಆಕೆ ವಿಕಾರವಾಗಿ ಚೀರಾಡುತ್ತಿದ್ದರೆ ಇನ್ನಷ್ಟು ಉನ್ಮತ್ತನಾದ ಆತ ಆಕೆಯ ಕೈ, ಬೆನ್ನು, ಹೊಟ್ಟೆಗೆ ಬ್ಲೇಡ್ ಎಳೆದು ಇನ್ನಷ್ಟು ರಕ್ತ ಹರಿಸಿದ. ಚೀರಾಟ ಕೇಳಿ ನೆರೆದ ಜನ ಕೋಣೆಯ ಬಾಗಿಲು ಒಡೆಯಲು ಯತ್ನಿಸುತ್ತಿದ್ದರು. ಆದರೆ ಶಿವಾ ತಾನೂ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದ.

ಬಾಗಿಲು ಮುರಿದು ಜನ ನುಗ್ಗುವ ಹೊತ್ತಿಗೆ ರೂಪಾ ರಕ್ತದ ಮಡುವಿನಲ್ಲಿ ಬಿದ್ದಿದ್ದರೆ ಶಿವಾ ನೇಣಿಗೆ ಬಿದ್ದು ಒದ್ದಾಡುತ್ತಿದ್ದ. ಇಬ್ಬರನ್ನೂ ಜನರೇ ಆಸ್ಪತ್ರೆಗೆ ಸೇರಿಸಿದ್ದಾರೆ. ಸದ್ಯ ಯಾರೂ ಸತ್ತಿಲ್ಲ ನಿಜ, ಆದರೆ ಯಾವ ತಪ್ಪಿಗೆಂದು ಬಾಲೆ ರೂಪಾಳಿಗೆ ಈ ಶಿಕ್ಷೆ?

ಮನೆಗೆ ನುಗ್ಗಿದ ಶಿವಾನಂದ ಅನಾಹುತ ಮಾಡೇಬಿಟ್ಟಿದ್ದ!



ಯಾರೋ ತಲೆ ತಿರುಕನೊಬ್ಬ ಮಾಡಿದ ದುರಾಚಾರಕ್ಕೆ ಬಲಿಯಾಗಿದ್ದು ರೂಪಾ ಮತ್ತು ಆಕೆಯ ಕುಟುಂಬ.

ಯಾವ ತಪ್ಪಿಲ್ಲದೇ ಹೆಣ್ಣು ಹೆತ್ತ ತಪ್ಪಿಗೆ ಕುಟುಂಬವೊಂದು ಅನುಭವಿಸಿದ ಕ್ರೌರ್ಯಕ್ಕೆ ಯಾರು ಹೊಣೆ? ಇದನ್ನೇ ಪತ್ರಿಕೆಗಳು ಭಗ್ನಪ್ರೇಮಿಯ ಕೃತ್ಯ ಎಂದು ತಿಪ್ಪೆ ಸಾರಿಸುತ್ತವೆ. ಆಕೆ ಪ್ರೀತಿಸಿ ಕೈಕೊಟ್ಟಳು, ನನ್ನನ್ನು ಮೋಸ ಮಾಡಿದ್ದಕ್ಕೇ ನಾನು ಕೊಲ್ಲಲು ನಿರ್ಧರಿಸಿದೆ ಎಂದೆಲ್ಲಾ ಆತ ಬೊಗಳಿದ್ದನ್ನೇ ಯಥಾವತ್ತಾಗಿ ಪತ್ರಿಕೆಗಳು ಸುದ್ದಿ ಬರೆಯುತ್ತವೆ. ಜನರೂ ನಂಬುತ್ತಾರೆ. ಪೊಲೀಸರು ಕೂಡ ಇದರ ಸತ್ಯಾಸತ್ಯತೆಯನ್ನು ವಿವೇಚಿಸುವುದಿಲ್ಲ. ಅಲ್ಲಿಗೆ ಹುಡುಗಿಯದೇ ತಪ್ಪು, ಆಕೆ ಪ್ರೀತಿಸಿ ಮೋಸ ಮಾಡಿದ್ದಕ್ಕೇ ಈ ಶಿಕ್ಷೆ ಎಂಬಂಥ ವಿಕೃತ ಪ್ರವೃತ್ತಿಯೊಂದು ಇತ್ತೀಚೆಗೆ ಉಲ್ಬಣಿಸುತ್ತಿದೆ. ಕಳೆದ ಎರಡೇ ಎರಡು ತಿಂಗಳಲ್ಲಿ ಬೆಂಗಳೂರೊಂದರಲ್ಲೇ ಈ ರೀತಿಯ ಕೀಚಕ ಪಿಡುಗಿಗೆ ಬಲಿಯಾದ ಹೆಣ್ಣುಮಕ್ಕಳ ಸಂಖ್ಯೆ ಎಂಟು.


ಪ್ರಸನ್ನಲಕ್ಷ್ಮಿ

ರಾಜಾಜಿನಗರದ ರಾಜ್‌ಕುಮಾರ್ ರಸ್ತೆಯ ಆದಿತ್ಯ ಗ್ರಾನೈಟ್ಸ್ ಉದ್ಯೋಗಿ ಪ್ರಸನ್ನ ಲಕ್ಷ್ಮಿಯನ್ನು ವಿಷ್ಣು ಎಂಬ ಕಾಮುಕನೊಬ್ಬ ಹಾಡುಹಗಲೇ ಕೊಲ್ಲಲು ಹೋಗಿ ಜನರಿಂದ ಒದೆ ತಿಂದದ್ದು ಕೂಡ ಇದೇ ಜೂನ್ 3ರ ಬೆಳಿಗ್ಗೆ. ಮೂಲತಃ ಆಂಧ್ರದ ಅನಂತಪುರದ ಪ್ರಸನ್ನಲಕ್ಷ್ಮಿ ಇಬ್ಬರು ಮಕ್ಕಳ ತಾಯಿ. ಆಕೆಯ ಪತಿ ಗಾರ್ಮೆಂಟ್ ಉದ್ಯೋಗಿ. ಈ ಮಧ್ಯೆ ವಿಷ್ಣು ಉರ್ಫ್ ವಿಷ್ಣುವರ್ಧನ್ ಎಂಬ



ಕಿವಿ ಕತ್ತರಿಸಿ, ಕೆನ್ನೆ ಕುಯ್ದು ಮೈತುಂಬ ಇರಿತಕ್ಕೀಡಾಗಿ ರಕ್ತದ ಮಡುವಿನಲ್ಲಿ ಬಿದ್ದಿದ್ದ ಪ್ರಸನ್ನಲಕ್ಷ್ಮಿಯನ್ನು ನೋಡಿದ ಜನ ವಿಷ್ಣುವನ್ನು ಹಿಡಿದು ಹೀನಾಮಾನ ಬಡಿದು ಪೊಲೀಸರಿಗೊಪ್ಪಿಸಿದ್ದಾರೆ.


ಆದರೆ ಪ್ರಸನ್ನಲಕ್ಷ್ಮಿಯ ಬಾಕು? ಹಾಗೊಮ್ಮೆ ಆಕೆ ಆತನನ್ನು ವಂಚಿಸಿದ್ದೇ ಆಗಿದ್ದರೆ ಅದಕ್ಕೆ ಕೊಲ್ಲುವುದು ಯಾವ ನ್ಯಾಯ? ನಾನು ಪ್ರೀತಿಸುತ್ತಿದ್ದ ಆಕೆ ನನ್ನನ್ನು ಕುರೂಪಿ ಎಂದಳು ಅದಕ್ಕೇ ಕೊಲ್ಲಲು ಹೋಗಿದ್ದೆ ಎಂದು ಒಮ್ಮೆ ಹೇಳುವ ವಿಷ್ಣು ಮತ್ತೊಮ್ಮೆ ಆಕೆ ನನ್ನಿಂದ ದುಡ್ಡು ಕಿತ್ತಿದ್ದಳು. ಮೋಸ ಮಾಡಿದಳು ಎಂದೆಲ್ಲಾ ರೈಲು ಬಿಡುತ್ತಿದ್ದಾನೆ. ನೆಟ್ಟಗೆ ಕೆಲಸವೇ ಇಲ್ಲದ ವಿಷ್ಣು ಅದೆಲ್ಲಿಂದ ದುಡ್ಡು ಕೊಟ್ಟ. ಪರಿಚಯವಾಗಿದ್ದೇ ಇಂಟರ್‌ನೆಟ್ ಮೂಲಕ ವಾದರೆ ಬೆಂಗಳೂರಿಗೆ ಬಂದೇ ಎರಡು ವಾರ ವಾಗಿದ್ದರೆ ಯಾವತ್ತು ದುಡ್ಡು ಕೊಟ್ಟ?

ಇದು ಕೀಚಕ ಪೀಡೆ. ಮನಶ್ಶಾಸ್ತ್ರೀಯವಾಗಿ ಇದನ್ನು stalking ಎನ್ನುತ್ತಾರೆ. ಈ ಹಿಂದೆ ಹಸೀನಾಳ ಮುಖಕ್ಕೆ ಆಸಿಡ್ ಹಾಕಿ ಸದ್ಯ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಜೋಸೆಫ್ ರಾಡ್ರಿಗ್ಸ್‌ಗೂ, ಈಗ ಬಾಲಕಿ ರೂಪಾ ಮತ್ತು ಗೃಹಿಣಿ ಪ್ರಸನ್ನಲಕ್ಷ್ಮಿಯನ್ನು ಕೊಲ್ಲಲೆತ್ನಿಸಿದವರಿಗೂ ಹೆಚ್ಚು ವ್ಯತ್ಯಾಸವಿಲ್ಲ. ಅವನು ಆಸಿಡ್ ಎರಚಿ ವಿರೂಪಗೊಳಿಸಲೆತ್ನಿಸಿದರೆ ಇವರು ಕೊಲ್ಲಲು ಸಜ್ಜಾಗಿಯೇ ಬಂದವರು. ಜಯನಗರದ ಶ್ರುತಿ ಎಂಬ ಬಾಲಕಿಯ ಮುಖಕ್ಕೆ ಆಸಿಡ್ ಸುರಿದ ಪೋರ್ಕಿಯೊಬ್ಬ ಒಂದೆರಡು ಬಾರಿ ಬಸ್ ನಿಲ್ದಾಣದಲ್ಲಿ ಆಕೆಯನ್ನು ಅಡ್ಡಗಟ್ಟಿದ್ದು ಬಿಟ್ಟರೆ ಆತ ಯಾರು? ಎತ್ತ ಎಂಬುದೇ ಆಕೆಗೆ ಗೊತ್ತಿರಲಿಲ್ಲ.

ಇದು ಹೇಗೆ ಭಗ್ನಪ್ರೇಮವಾಗುತ್ತೆ? ಇಬ್ಬರೂ ಪರಸ್ಪರ

▶▶▶ 13ನೇ ಪುಟಕ್ಕೆ

ನರಪಿಶಾಚಿ– ಅಲ್ಲಾಬಕಾಷ್ ಮತ್ತು ನತದೃಷ್ಟೆ ರಹೀನಾ



ಮೊನ್ನೆಯಷ್ಟೇ ಮೇ 2ರಂದು ತಲಘಟ್ಟಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ದುರಂತವಿದು.

ತಲಘಟ್ಟಪುರದ ಹೊರವಲಯದ ಅವಲಹಳ್ಳಿಯ ಫುಟ್‌ಪಾತ್ ವ್ಯಾಪಾರಿ ರಿಯಾಜುಲ್ಲಾ ಓರ್ವ ಕಡುಬಡವ. ಇನ್ನೂ ಒಂಬತ್ತನೇ ತರಗತಿ ಓದುತ್ತಿದ್ದ ಹದಿನಾಲ್ಕರ ಬಾಲೆ ರಹೀನಾ ಆತನ ಒಬ್ಬಳೇ ಮಗಳು. ಮನೆ ಪಕ್ಕದಲ್ಲೇ ಮದೀನಾ ಹೆಸರಿನ ಚಾಕಣಾ ಹೋಟೆಲಿದೆ. ಅಲ್ಲಿ ಅಡುಗೆಗಿದ್ದ ಅಲ್ಲಾಬಕಾಷ್ ಇನ್ನೂ 21ರ ಹುಡುಗ. ದಿನ ಬೆಳಗ್ಗೆಯಾದರೆ ರಹೀನಾಳನ್ನೇ ಕೆಕ್ಕರಿಸಿ ನೋಡುತ್ತಿದ್ದ, ಶಾಲೆ ತನಕ ಹಿಂಬಾಲಿಸಿ ಪೀಡಿಸುತ್ತಿದ್ದ. ರಹೀನಾ ಇದನ್ನು ತಂದೆ ತಾಯಿಗೆ ಹೇಳಿದ್ದಾಳೆ. ಖುದ್ದು ಹೋದ ಅಪ್ಪ ಹೋಟೆಲಿಗೆ ಹೋಗಿದ್ದೇ ಅಲ್ಲಾಬಕಾಷ್‌ನನ್ನು ರಿಪೇರಿ ಮಾಡಿದ್ದಾನೆ.

ಇಷ್ಟಾಗೂ ಹುಚ್ಚು ಬಿಡದ ಅಲ್ಲಾಬಕಾಷ್ ಮೇ 2ರ ರಾತ್ರಿ ರಹೀನಾ ಒಬ್ಬಳೇ ಇರುವುದನ್ನು ಕಾದಿದ್ದು ಚಾಕು ಒಂದನ್ನು ಬಚ್ಚಿಟ್ಟುಕೊಂಡು ರಿಯಾಜುಲ್ಲಾನ ಮನೆಗೆ ನುಗ್ಗಿದ್ದಾನೆ. ನೀನು ನನ್ನ ಪಾಲಿಗಿಲ್ಲ ಎಂದರೆ ಬೇರೆ ಯಾರಿಗೂ ಸಿಗಬಾರದು ಎಂದಿದ್ದೇ ಆಕೆಗೆ ಚಾಕು ಹಾಕಿ ತಿವಿದಿದ್ದಾನೆ. ಆಕೆ ಬಿದ್ದು ನರಳಾಡುತ್ತಿದ್ದರೆ ತನ್ನ ಕುತ್ತಿಗೆಯನ್ನೂ ಕುಯ್ದುಕೊಂಡಿದ್ದಾನೆ. ಅಕ್ಕಪಕ್ಕದವರು ಬಂದು ಇಬ್ಬರನ್ನೂ ಆಸ್ಪತ್ರೆಗೆ ಸಾಗಿಸುವ ಹೊತ್ತಿಗಾಗಲೇ ರಹೀನಾ ಹೆಣವಾಗಿದ್ದಳು. ಯಾವ ತಪ್ಪನ್ನೂ ಮಾಡದ, ಪ್ರೀತಿ ಪ್ರೇಮದ ಗಂಧವೇ ಗೊತ್ತಿಲ್ಲದ ಆಕೆಯನ್ನು ಅನ್ಯಾಯವಾಗಿ ಕೊಂದ ಅಲ್ಲಾಬಕಾಷ್ ಮಾತ್ರ ಸಾಯದೇ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಬದುಕುಳಿದ.

ಮೃಗಗಳು ಕೂಡ ಬಲಿಯದ ಹೆಣ್ಣನ್ನು ಕೊಲ್ಲುವುದಿಲ್ಲ. ಅಲ್ಲಾಬಕಾಷ್‌ನಂಥ ನರಪಿಶಾಚಿಗಳ ಹಾವಳಿಗೆ ಇನ್ನೆಷ್ಟು ಹೆಣ್ಣು ಕಂದಮ್ಮಗಳು ಬಲಿಯಾಗಲ್ಲ? ■

ಆತ್ಮಹತ್ಯೆ ಮಾಡಿಕೊಂಡವರೆಲ್ಲ ರೈತರಲ್ಲ ಗೊತ್ತುಂಟಾ!

ನಮ್ಮ ಉಡುಪಿ ಭಟ್ಟರು ಕೈಯಾರೆ ಹೆಂಡತಿಯನ್ನು ನೀಗಿಕೊಂಡ ನಂತರ ಇದೀ ರಾಜ್ಯಕ್ಕೆ ಸಂಶಯ ಬರದಂತೆ ದುಃಖಿಸಬೇಕೆಂದು ತೀರ್ಮಾನಿಸಿಕೊಂಡರಂತಲ್ಲಾ. ಆದರಂತೆ ಸೀತಾಮಾತೆ ಅಗ್ನಿಪ್ರವೇಶವಾದನಂತರ ರಾಮ ತಮ್ಮಂದಿರನ್ನ ತಬ್ಬಿ ಅತ್ತಂತೆ. ಪದ್ಮಪ್ರಿಯಾರ ಮಕ್ಕಳನ್ನು ಹಿಡಿದು ರೋದಿಸಿರಂತಲ್ಲಾ. ಇಂತಹ ನಟನೆಯೆಲ್ಲಾ ಮುಗಿದ ಮೇಲೆ "ನನ್ನನ್ನ ಹೇಗೋ ಸಹಿಸಿಕೊಂಡಿದ್ದ ನನ್ನ ಹೆಂಡತಿ ತಲೆಕೆಡಿಸಿದವನನ್ನ ಸುಮ್ಮನೆ ಬಿಡಬಾರದು" ಎಂದು ಆತುರಗೆಟ್ಟ ಆಂಜನೇಯನಂತೆ ಅತುಲ್ ರಾವ್ ಮೇಲೆ ದೂರುಕೊಟ್ಟು ಸುಮ್ಮನಾದನಂತಲ್ಲಾ. ಇದರಿಂದ ಕೆಂಡಾಮಂಡಲವಾದ ಅತುಲ್ ರಾವ್ ಅಭಿಮಾನಿಗಳು "ನಮ್ಮ ಅತುಲ್ ರಾವ್ ತಡೆದಿದ್ದರಿಂದಲೇ ಪದ್ಮಪ್ರಿಯಾ ಭಟ್ಟನ ಚುನಾವಣೆ ಮುಗಿಯುವವರೆಗಾದರೂ ಬದುಕಿದ್ದರು. ಇಲ್ಲದಿದ್ದರೆ ಚುನಾವಣೆಗಿಂತಲೂ ಮೊದಲೇ ಭಟ್ಟನ ಮಾನ ಹರಾಜು ಮಾಡುತ್ತಿದ್ದಳು. ಈಗಲೂ ಭಟ್ಟನಿಗೇನಾದರೂ ಬುದ್ಧಿಯಿದ್ದರೆ ಅತುಲ್‌ನನ್ನು ಅಪ್ಪಿಕೊಂಡು ಅಭಿನಂದಿಸಬೇಕು" ಎಂದರಂತಲ್ಲಾ. ಥೂತ್ತೇರಿ!

*****

ಭಟ್ಟನ ಕುಟುಂಬದ ರಕ್ಷಣೆಗಾಗಿ ಗೃಹಖಾತೆಯ ಸಿಬ್ಬಂದಿಯನ್ನು ಗುಲಾಮರಂತೆ ಬಳಸಿಕೊಂಡ ವಿ.ಎಸ್.ಆಚಾರ್ಯ ಕರ್ನಾಟಕ ಈವರೆಗೆ ಕಂಡರಿಯದ ಗೃಹ ಸಚಿವನಾಗಿ ಕಂಗೊಳಿಸುತ್ತಿದ್ದಾನಂತಲ್ಲಾ. ಅತ್ತ ಉಡುಪಿ ಭಟ್ಟನ ಹೆಂಡತಿ ಪದ್ಮಪ್ರಿಯಾ ಪ್ರಕರಣವನ್ನು ತನ್ನ ಮಗ, ಸೊಸೆಯ ಸಮಸ್ಯೆಯೆಂಬಂತೆ ಬಗೆಹರಿಸಿ, ಸಬೂಬುಗಳಿಂದಲೇ ಸಮಜಾಯಿಸಿ ನೀಡಿದ ಆಚಾರಿ, ಇತ್ತ ಆತ್ಮಹತ್ಯೆಗೊಳಗಾದ ರೈತರ ಸಮಸ್ಯೆಯನ್ನು ಸುಲಲಿತವಾಗಿ ನಿಭಾಯಿಸಿದರಂತಲ್ಲಾ. ಇದನ್ನು ಕಂಡು ದಂಗುಬಡಿದ ನಾವು, ಆತನನ್ನು ಮಾತನಾಡಿಸಲೇಬೇಕೆಂದು ತೀರ್ಮಾನಿಸಿ, ಫೋನ್ ಮಾಡಲಾಗಿ ಸಿಕ್ಕೇಬಿಟ್ಟರು.

ರಿಂಗ್‌ಟೋನ್ : "ಓಂ ಶಕ್ತಿ ಓಂ ಶಕ್ತಿ ಧಿಯೋ ಯೋನಃ ಪ್ರಚೋದಯಾತ್"

"ಹಲೋ ಯಾರು?"

ಥೂತ್ತೇರಿ

ಯಾಹೂ

"ನಾನು ಯಾಹೂ ಅಂತ ಪತ್ರಕರ್ತ ಸಾರ್."

"ಪತ್ರಕರ್ತರ, ಹೇಳಿ ಇವರೆ."

"ತಾವು ಗೃಹಸಚಿವರಾಗಿದ್ದಕ್ಕೆ ಅಭಿನಂದನೆ ಸಾರ್."

"ಥ್ಯಾಂಕ್ಸ್ ಇವರೆ."

"ಇಷ್ಟೊಂದು ಜವಾಬ್ದಾರಿ ಇರೋ ಖಾತೆನಾ ಹೇಗೆ ನಿಭಾಯಿಸ್ತೀರೀ?"

"ಜವಾಬ್ದಾರಿ ಅಂದರೆ ನನ್ನದೇನು ಐಜಿಪಿ ಕೆಲಸವಾ ಅಥವಾ ಡಿಐಜಿ ಕೆಲಸವಾ?"

"ನಿಜ ಸಾರ್, ಹಾಗೇ ನೋಡಿದ್ರೆ ಒಬ್ಬ ಡಿವೈಎಸ್ಪಿ ಜವಾಬ್ದಾರಿನೂ ಇಲ್ಲ. ಪಾಪ ಆತನಿಗಾದ್ರೆ ಎಸ್ಪಿ, ಅಡಿಷನಲ್ ಎಸ್ಪಿ ಬೈತಾಯಿರತ್ತಾರೆ. ಅದ್ಕೆ ಆತ ಇನ್ಸ್‌ಪೆಕ್ಟರಿಗೆ ಬೈತಾನೆ, ಇನ್ಸ್‌ಪೆಕ್ಟರ್ ಪಿಸಿಗಳಿಗೆ ಚಾರ್ಜ್ ಮಾಡ್ತಾನೆ, ಆ ಪಿಸಿಗಳು ಜನಗಳಿಗೆ ಲಾಠಿ ಚಾರ್ಜ್ ಮಾಡ್ತವೆ. ಇಂತಹ ಯಾವುದೇ ಒತ್ತಡವಿಲ್ಲದೆ ಇರೋರು ಅಂದ್ರೆ ನೀವು ಸಾರ್. ನಿಮ್ಮನ್ನ ನೋಡಿದಾಗಲೇ ಗೊತ್ತಾಯ್ತು, ಈ ಸಮಯದಲ್ಲಿ ನೀವಲ್ಲದೆ ಇನ್ಯಾರಾದ್ರೂ ಗೃಹಸಚಿವರಾಗಿದ್ರೆ, ಇನ್ನೂ ಒಂದು ಡಜನ್ ಹೆಣ ಉರುಳವು, ಇನ್ನೂ ಎರಡು ಡಜನ್ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು."

"ಆತ್ಮಹತ್ಯೆ ಮಾಡಿಕೊಂಡ ರೈತರು ನಿಜವಾದ ರೈತರಲ್ಲ ಎಂಬುದು ನಿಮಗೆ ಗೊತ್ತುಂಟಾ?"

"ಹೌದಾ ಸಾರ್?"

"ದಾವಣಗೆರೆ ಪ್ರಾಂತ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಹೆಸರಿನಲ್ಲಿ ಭೂಮಿಯಿಲ್ಲ, ಇನ್ನು ಗೊಬ್ಬರಕ್ಕಾಗಿ ಸಾಯುವುದು ಎಲ್ಲಿಂದ ಬಂತು?"

"ಭೂಮಿ ಇಲ್ಲದೆಯಿದ್ರು ಬಗರ್‌ಹುಕುಂ ಸಾಗುವಳಿ ಮಾಡ್ತಾ ಇರಬಹುದಲ್ಲಾ ಸಾರ್? ಗೋಮಾಳ ಉಳತಾಯಿರೊ ರೈತರ ಹೆಸರಿಗೆ ಆ ಜಮೀನ ಖಾತೆ ಆಗಿಲ್ಲವಂತೆ?"

"ಖಾತೆ ಆಗಿಲ್ಲ ಅಂದರೆ ಮಾಡಿಕೊಡುವ. ಆದರೆ ಸಹಜವಾಗಿ ಸತ್ತವರನ್ನೆಲ್ಲಾ ತಂದು ಆತ್ಮಹತ್ಯೆ ಅಂತ ಹೇಳುವುದಾದರೆ ಅದನ್ನ ನಂಬಲಿಕ್ಕೆ ನಾವು ಕಾಂಗ್ರೆಸ್ಸಿನವರಾ?"

"ಸಹಜವಾದ ಸಾವು ಅಂದ್ರೇನು ಸಾರ್"

"ಸಹಜವಾದ ಸಾವು ಅಂದರೆ, ಸುಮ್ಮನೆ ಸಾಯುವುದು, ಇದ್ದಕ್ಕಿದ್ದಂತೆ ಕುಸಿದು ಬಿದ್ದು ಸಾಯುವುದು, ಮಲಗಿದ್ದಲ್ಲೇ ಸಾಯುವುದು, ಇಂತಹವೆಲ್ಲಾ ಸಹಜ ಸಾವು."

"ತಾವು ವೈದ್ಯವೃತ್ತಿ ಬಿಟ್ಟು ಗೃಹ ಸಚಿವರಾದದ್ದಕ್ಕೂ ಸಾರ್ಥಕ ಆಯ್ತು ಸಾರ್. ಸಾವುಗಳ ವಿಷಯದಲ್ಲಿ ನಿಮ್ಮ ಇಲಾಖೆಯ ವರದಿಗಳ ಅಗತ್ಯವಿಲ್ಲ ಅಲ್ಲವೇ?"

"ಹಾಗೆ ಹೇಳಲು ಬರುವುದಿಲ್ಲ."

"ಈಗಾಗ್ಲೆ ಸತ್ತ ಎಂಟು ರೈತರ ಸಾವು ಸಹಜ ಸಾವ ಸಾರ್?"

"ಹೌದು. ಒಬ್ಬ ಕುಡಿದು ಸತ್ತಿದ್ದಾನೆ, ಮತ್ತೊಬ್ಬ ಹೆಂಡತಿ ಜೊತೆ ಜಗಳವಾಡಿ ಸತ್ತಿದ್ದಾನೆ, ಮತ್ತೊಬ್ಬ ಹೊಟ್ಟೆನೋವು ತಾಳದೆ ಸತ್ತಿದ್ದಾನೆ... ಹೀಗೆ ಸಾವಿಗೆ ನಾನಾ ಕಾರಣವುಂಟು. ಅದಕ್ಕೆ ಎಡೂರಪ್ಪ ಸರ್ಕಾರ ಹೊಣೆಯಲ್ಲ, ಅದನ್ನ ನಾನು ಮುಖ್ಯಮಂತ್ರಿಗೆ ಹೇಳಲಾಗಿ, ಅವರು ತಮ್ಮ ತವರು ಜಿಲ್ಲೆಯಲ್ಲಿ ಸನ್ಮಾನಕ್ಕೆ ಹೋದರು."

"ರೈತರ ಸಾವಿನ ಸುದ್ದಿಗಳ ನಡುವೆ ಸನ್ಮಾನವ ಸಾರ್?"

"ಸಹಜ ಸಾವುಗಳಿಗೆಲ್ಲಾ ಸನ್ಮಾನ ಬಿಟ್ಟು ಕೂರಲಾಗುವುದಿಲ್ಲ, ಸಾಯುವವರನ್ನ ಯಾರಾದರೂ ತಡೆಯಲಿಕ್ಕೆ ಸಾಧ್ಯವಾ?"

"ನಿಜ ಸಾರ್. ಅದಕ್ಕೆ ಇರಬೇಕು ಸಾರ್, ಹಿಂದೆಂದೂ ಕಂಡರಿಯದಂತ ಸನ್ಮಾನಗಳು ಎಡೂರಪ್ಪನ ಕ್ಷೇತ್ರದಲ್ಲಿ ನಡೆದೊ ಸಾರ್. ಸಾವಿನ ಸೂತಕದಿಂದ ಪಾರಾಗ ಬೇಕಾದ್ರೆ ಸನ್ಮಾನದಲ್ಲಿ ಮುಳುಗಬೇಕು ಸಾರ್."

"ನೋಡಿ ಕಟಕಿಯಾಡುವುದು ಬೇಡ. ನಾವಷ್ಟೇ ಸನ್ಮಾನ ಮಾಡಿಸಿಕೊಳ್ಳುತ್ತಿಲ್ಲ, ಕಾಂಗ್ರೆಸ್‌ನವರು ಮಾಡಿಸಿಕೊಳ್ಳಲಿಲ್ಲವಾ? ಜೆಡಿಎಸ್‌ನವರು 20 ತಿಂಗಳು ಮಾಡಿಸಿಕೊಳ್ಳಲಿಲ್ಲವಾ? ಅವರ ಕಾಲದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿಲ್ಲವಾ?"

"ನಮಗೊಂದು ಅನುಮಾನ ಅದೆ ಸಾರ್?"

"ಯಂತ ಅನುಮಾನ ಹೇಳಿ ಬಗೆಹರಿಸುವ."


"ಪುರೋಹಿತಶಾಹಿ ಮನಸ್ಸು ಎಂದೂ ಕೃಷಿ ಕಸುಬನ್ನ ಗೌರವಿಸಿಲ್ಲ, ಅನ್ನ ಬೆಳೆಯೋ ರೈತನಿಗೆ ಅದೆಂದೂ ಬೆಲೆ ಕೊಟ್ಟಿಲ್ಲ. ತುಂಬಾ ಕೀಳಾಗಿ ಕಾಣ್ತಾ ಬಂದಿದೆ. ಆದ್ರಿಂದ ಆತನ ಸಾವು ಬಿಜೆಪಿಗಳಿಗೆ ಯಾವ ಆಘಾತನೂ ಉಂಟುಮಾಡಲ್ಲ..."

"ಸ್ವಲ್ಪ ಇರಿ ಇವರೆ, ಎಸ್ಸೆಂ ಕೃಷ್ಣರ ಕಾಲದಲ್ಲಿ ರೈತರ ಆತ್ಮಹತ್ಯೆಗಳು ಎಷ್ಟಾಯ್ತು ಗೊತ್ತುಂಟಾ? ಅವರು ಮಂಡ್ಯ ಜಿಲ್ಲೆ ರೈತರ ಮಗ ಅಲ್ಲವಾ?"

"ಅಲ್ಲ ಸಾರ್, ಆತನೆಂದೂ ಕೆಸರಗದ್ದೆಗೆ ಇಳಿದಿಲ್ಲ. ಆತ ಪೇಜಾವರ ಶ್ರೀ ಭಕ್ತನಾಗಿದ್ದರಿಂದ ಆತನಿಗೂ ರೈತನಿಗೂ, ನಿಮಗೂ ರೈತನಿಗೂ ಇರೊ ಸಂಬಂಧವೇ ಇದೆ ಸಾರ್."

"ನೀವು ಮತ್ತೆ ಮಾತಾಡುವುದು ಬೇಡ."

"ಥೂತ್ತೇರಿ!!!"



ಬಿಜೆಪಿ ಅಧಿಕಾರಕ್ಕೆ ಬಂದರೆ ಈ ದೇಶದ ಜಾತ್ಯತೀತ ಮೌಲ್ಯಗಳಿಗೆ ಯಾವ ಗತಿ ಬರುತ್ತದೆಂಬುದನ್ನು ಈ ನಾಡಿನ ಪ್ರಜ್ಞಾವಂತರು ಮೊದಲೇ ಗ್ರಹಿಸಿದ್ದರು. ಅವರ ಗ್ರಹಿಕೆಯೀಗ ಒಂದೊಂದಾಗಿ ನಿಜವಾಗುತ್ತಾ ಹೋಗುತ್ತಿದೆ. ಕೋಮು ಸೌಹಾರ್ದದಿಂದ ಬಾಳುತ್ತಿರುವ ನಾಡಿನ ಜನರ ನಡುವೆ ಕೋಮುದ್ವೇಷದ ವಿಷವನ್ನು ಬಿತ್ತಿ ಸೌಹಾರ್ದತೆಯನ್ನು ಹದಗೆಡಿಸುವುದು, ಕೋಮುದಳ್ಳುರಿ ಹಚ್ಚಿ ಜನ ತಮ್ಮೊಳಗೆ ಬಡಿದಾಡಿಕೊಳ್ಳುವಂತೆ ಮಾಡುವುದು; ಆ ದಳ್ಳುರಿಯಲ್ಲಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವುದು – ಇದು ಅವರ ಹಿಡನ್ ಅಜೆಂಡಾ. ಅದನ್ನೀಗ ಅವರು ನಿಧಾನಕ್ಕೆ ಜಾರಿಮಾಡುತ್ತಿದ್ದಾರೆ.

ಜೆ.ಪಿ.ನಗರ ಮೂರನೇ ಹಂತದ ಒಂಭತ್ತು ಮತ್ತು 15ನೇ ಕ್ರಾಸ್ ನಡುವೆ ಒಂದು ಪುಟ್ಟದಾದ ಪಾರ್ಕ್ ಇದೆ. ಇದನ್ನು ಯಾವ ಕಾರಣಕ್ಕೋ ಗೊತ್ತಿಲ್ಲ ಮೊದಲಿನಿಂದಲೂ ಮಿನಿ ಫಾರೆಸ್ಟ್ ಎಂದೇ ಕರೆಯಲಾಗುತ್ತಿದೆ. ಈ ಪಾರ್ಕಿನ ಎದುರುಗಡೆಯೇ ಬೆಂಗಳೂರು ನಗರದ ಮಾಜಿ ಪೊಲೀಸ್ ಕಮೀಷನರ್ ಕೋದಂಡರಾಮಯ್ಯ ಅವರ ಮನೆಯೂ ಇದೆ. ಇದೇ ಸಾಲಿನಲ್ಲಿ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿಯವರ ಮನೆಯೂ ಇದೆ.

ಮೊದಲೇ ಪ್ರಕೃತಿಪ್ರಿಯರಾದ ಕೋದಂಡರಾಮಯ್ಯನವರು ಈಗ್ಗೆ ಹತ್ತು-ಹನ್ನೆರಡು ವರ್ಷಗಳ ಹಿಂದೆ ಈ ಮಿನಿಫಾರೆಸ್ಟ್‌ನಲ್ಲಿ 25–30 ಮರಗಳನ್ನು ನೆಟ್ಟಿದ್ದರು. ಅವುಗಳನ್ನು ಸುಸೂತ್ರವಾಗಿ ಬೆಳೆಸುವುದಕ್ಕೆ ತಮ್ಮ ಜೇಬಿನಿಂದಲೇ ಖರ್ಚು ಮಾಡಿ



ಕೇಸರೀಕರಣಕ್ಕಿಳಿದ ಯಡ್ಡಿ ಸರ್ಕಾರ!

ಗೊಬ್ಬರ ತಂದು ಹಾಕುತ್ತಿದ್ದರಲ್ಲದೇ ಪ್ರತೀದಿನ ತಮ್ಮ ಮನೆಯಿಂದಲೇ ನೀರು ಒಯ್ದು ಹಾಕುತ್ತಿದ್ದರು. ಇದೆಲ್ಲಾ ಈಗ ಹಳೆಯ ಕಥೆ. ಕೋದಂಡರಾಮಯ್ಯನಂತಹ ಅನೇಕ ಪ್ರಕೃತಿಪ್ರಿಯರ ಶ್ರಮದಿಂದ ಈಗ ಆ ಮಿನಿ ಫಾರೆಸ್ಟ್‌ನಲ್ಲಿ ಹಲವಾರು ಮರಗಳು ಬೆಳೆದು ನಿಂತಿವೆ; ಶಾಂತಿಯನ್ನರಸಿ ಬರುವ ಬಡಾವಣೆಯ ಅನೇಕ ಜನರಿಗೆ ಅದೊಂದು ನೆಮ್ಮದಿಯ ಶಾಂತಿಧಾಮವಾಗಿ ಪರಿವರ್ತಿತವಾಗಿದೆ; ಬೆಳಗ್ಗೆ ಮತ್ತು ಸಂಜೆ ವಾಕ್ ಮಾಡುವವರಿಗೂ ಅತ್ಯುತ್ತಮ ತಾಣವಾಗಿದೆ.

ಈಗ್ಗೆ ಕೆಲವು ತಿಂಗಳ ಹಿಂದೆ ಈ ಮಿನಿ ಫಾರೆಸ್ಟ್ ಅನ್ನು ಇನ್ನಷ್ಟು ಅಭಿವೃದ್ಧಿಪಡಿಸಬೇಕೆಂದು ಕೆಲವು ನಿವೃತ್ತ ಅಧಿಕಾರಿಗಳು, ಕೆಲವು ಕಾರ್ಯನಿರತ ಅಧಿಕಾರಿಗಳು ಸ್ವಇಚ್ಛೆಯಿಂದ ಮುಂದಾದರು. ಅದಕ್ಕಾಗಿ ಅವರು ಬಡಾವಣೆಯ ಜನರಿಂದ ಹಣವನ್ನು ಕ್ರೋಢೀಕರಿಸಿದರು. ಅದಕ್ಕೆ ಕೋದಂಡರಾಮಯ್ಯನವರೂ ಹಣ ಕೊಟ್ಟಿದ್ದಾರೆ. ಜತೆಗೆ ಬೆಂಗಳೂರು ಮಹಾನಗರ ಪಾಲಿಕೆಯಿಂದಲೂ ಒಂದಷ್ಟು ಹಣವನ್ನು ಮಂಜೂರು ಮಾಡಿಸಿಕೊಂಡು ಪಾರ್ಕನ್ನು ಅಭಿವೃದ್ಧಿಪಡಿಸಿದ್ದಾರೆ. ಅಷ್ಟರಮಟ್ಟಿಗೆ ಈ ನಿವೃತ್ತ ಅಧಿಕಾರಿಗಳ ಶ್ರಮ ಮತ್ತು ಕಾಳಜಿಯನ್ನು ಮೆಚ್ಚಬೇಕು.

ಆದರೆ, ಇಂತಹ ಒಂದು ಶಾಂತಿಧಾಮಕ್ಕೆ ಈಗ ಚೆಡ್ಡಿಗಳು ಲಗ್ಗೆಯಿಟ್ಟಿದ್ದಾರೆ. ಪಾರ್ಕನ್ನು ಅಭಿವೃದ್ಧಿಪಡಿಸಿದ ಈ ನಿವೃತ್ತ ಅಧಿಕಾರಿಗಳ ಮೂಲಕವೇ ತಮ್ಮ ಹಿಡನ್ ಅಜೆಂಡಾ ಜಾರಿಗೊಳಿಸಲು ಅವರು ಮುಂದಾಗಿದ್ದಾರೆ. ಈಗ್ಗೆ ಎರಡು-ಮೂರು ತಿಂಗಳುಗಳ ಹಿಂದೆ ಇಲ್ಲೊಂದು ಲೌಡ್ ಸ್ಪೀಕರ್ ಅನ್ನು ಜೋಡಿಸಿ ದಿನಾಲು ಬೆಳಗ್ಗೆ ಮತ್ತು ಸಂಜೆ ಎರಡೆರಡು ತಾಸು ಹಿಂದೂತ್ವದ ಮಂತ್ರಗಳನ್ನು, ಶ್ಲೋಕಗಳನ್ನು ಜೋರಾಗಿ ಹಾಕಿ ಪಾರ್ಕಿನ ನೆಮ್ಮದಿಯನ್ನೇ ಹಾಳು ಮಾಡಲಾರಂಭಿಸಿದ್ದಾರೆ. ಶಾಂತಿ, ನೆಮ್ಮದಿಯನ್ನು ಅರಸಿಬರುವ ಜನರು ಬಲವಂತವಾಗಿ ಈ ಕರ್ಕಶವನ್ನು ಕೇಳಲೇಬೇಕಾದ ಅನಿವಾರ್ಯತೆಯನ್ನು ತಂದೊಡ್ಡಿದ್ದಾರೆ.

ಖುದ್ದು ಕೋದಂಡರಾಮಯ್ಯನವರಿಗೆ ಇದು ಸರಿಕಾಣಲಿಲ್ಲ. ಅದಕ್ಕೆ ಕಾರಣವೂ ಇಲ್ಲದಿಲ್ಲ. ಮೊದಲನೆಯದಾಗಿ, ಈ ಪಾರ್ಕು ಯಾವುದೇ ಒಂದು ಧರ್ಮಕ್ಕೆ ಸೇರಿರದೇ ಒಂದು ಸಾರ್ವಜನಿಕ ಸ್ಥಳವಾಗಿರುವುದರಿಂದ ಈ ರೀತಿ ಯಾವುದೇ ಒಂದು ಧರ್ಮದ ಆಚರಣೆಗಳನ್ನು, ಅಥವಾ ಶ್ಲೋಕಗಳನ್ನು ಬಹಿರಂಗವಾಗಿ ನಡೆಸುವುದು ಕಾನೂನಿನ ಪ್ರಕಾರ ಅಪರಾಧವಾಗುತ್ತದೆ. ಎರಡನೆಯದಾಗಿ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಪರವಾನಗಿಯಿಲ್ಲದೇ ಧ್ವನಿವರ್ಧಕಗಳನ್ನು ಬಳಸುವುದೂ ಅಪರಾಧವಾಗುತ್ತದೆ. ಹೀಗಾಗಿ ಅವರು ಮೊದಲು ಬಹಳ ಸೌಮ್ಯವಾಗಿಯೇ ಇದನ್ನು ವಿರೋಧಿಸಿದರು. ಪಾರ್ಕಿನ ನೆಮ್ಮದಿಯನ್ನು ಹಾಳು ಮಾಡುತ್ತಿರುವುದರ ವಿರುದ್ಧ ಬೆಳಗ್ಗೆ ಮತ್ತು ಸಂಜೆ ವಾಕ್ ಮಾಡಲು ಬರುವ ಸಾರ್ವಜನಿಕರಿಗೆ ಈ ರೀತಿ ತೊಂದರೆ ಕೊಡುತ್ತಿರುವುದರ ವಿರುದ್ಧ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಸಾರ್ವಜನಿಕ ಸ್ಥಳವೊಂದನ್ನು ಒಂದು ನಿರ್ದಿಷ್ಟ ಧರ್ಮದ ಪ್ರಚಾರಕ್ಕಾಗಿ ಬಳಸಿಕೊಳ್ಳುವುದರ ವಿರುದ್ಧ ಪ್ರತಿಭಟಿಸಿದರು. "ನಾಳೆ ಮುಸ್ಲಿಮ್, ಕ್ರಿಶ್ಚಿಯನ್ ಮತ್ತಿತರ ಸಮುದಾಯಗಳ ಜನರೂ ಬಂದು ಪಾರ್ಕ್‌ನಲ್ಲಿ ಇದೇ ರೀತಿ ಧ್ವನಿವರ್ಧಕ ಬಳಸಿ ಅವರವರ ಧರ್ಮಪ್ರಚಾರ ಕಾರ್ಯ ಕೈಗೊಂಡರೆ ಪಾರ್ಕಿನ ನೆಮ್ಮದಿಯಾದರೂ ಉಳಿಯುತ್ತದೆಯೇ?" ಎಂದು ಸೌಮ್ಯವಾಗಿಯೇ ಪ್ರಶ್ನಿಸಿದರು. ಆದರೆ ಇದ್ಯಾವುದಕ್ಕೂ ಜಗ್ಗದ ಆ ಅಧಿಕಾರಿಗಳು ತಿರುಗಿ "ಮುಸ್ಲಿಮರು ಬೆಳಗ್ಗೆ ಐದು ಗಂಟೆಗೇ ಧ್ವನಿವರ್ಧಕ ಬಳಸಿ ನಮಾಜ್ ಮಾಡುತ್ತಾರೆ ಅವರಿಂದ ನಿಮಗೆ ತೊಂದರೆಯಾಗುವುದಿಲ್ಲವೆ? ಈ ದೇಶದಲ್ಲಿ ಎಲ್ಲವೂ ಕಾನೂನಿನ ಪ್ರಕಾರವೇ ನಡೆಯುತ್ತದೆಯೇ? ರಸ್ತೆ ಬದಿಯ ಫುಟ್‌ಪಾತಿನಲ್ಲಿ ತರಕಾರಿ, ಹಣ್ಣು ಹಂಪಲು ಮಾರುವುದು, ಚಿಕ್ಕಪುಟ್ಟ ಅಂಗಡಿ ತೆರೆಯುವುದು, ಚಪ್ಪಲಿ ಹೊಲಿಯುವುದು ಎಲ್ಲಾ ಅಪರಾಧವಲ್ಲವೇ? ಮೊದಲು ಅದನ್ನು ತಡೆಯಿರಿ, ನಂತರ ನಮ್ಮನ್ನು ಪ್ರಶ್ನಿಸಿ" ಎಂದು ಉಡಾಫೆಯಾಗಿ ಮಾತನಾಡಿ ತಮ್ಮ ಬಲವಂತದ ಧರ್ಮಪ್ರಚಾರವನ್ನು ಮುಂದುವರೆಸಿಯೇ ಇದ್ದಾರೆ.

ಇದಕ್ಕೆ ಮೌಢ್ಯತೆ ಎನ್ನಬೇಕೋ ಅಥವಾ ಬಡ ಮತ್ತು ದಲಿತ ಸಮುದಾಯದ ಜನರ ಬಗ್ಗೆ ಅವರ ಕೆಟ್ಟ ಧೋರಣೆ ಎನ್ನಬೇಕೋ ಗೊತ್ತಿಲ್ಲ. ಮೊದಲನೆಯದಾಗಿ ಮುಸ್ಲಿಮರು ಬೆಳಗ್ಗೆ ಐದು ಗಂಟೆಗೆ ಧ್ವನಿವರ್ಧಕ ಬಳಸುವುದು ನಿಜವಾದರೂ ಅದನ್ನವರು ತಮ್ಮ ಮಸೀದಿಯಲ್ಲಿ ಹಾಕುತ್ತಾರೆ. ಅದೂಅಲ್ಲದೇ ಕೇವಲ ಐದಾರು ನಿಮಿಷ ಮಾತ್ರವೇ ಅದನ್ನು ಹಾಕಿ ಮುಗಿಸುತ್ತಾರೆ. ಒಂದು ವೇಳೆ ಅವರು ಪಾರ್ಕುಗಳಂತಹ ಸಾರ್ವಜನಿಕ ಸ್ಥಳಗಳಲ್ಲಿ ಅದನ್ನು ಶುರು ಮಾಡಿದರೆ ಅದನ್ನೂ ಕೂಡ ವಿರೋಧಿಸಬೇಕಾಗುತ್ತದೆ. ಎರಡನೆಯದಾಗಿ, ರಸ್ತೆ ಬದಿಯಲ್ಲಿ ತರಕಾರಿ ಮಾರುವವರು, ಹಣ್ಣು-ಹಂಪಲುಗಳನ್ನು ಮಾರುವವರು, ತಳ್ಳುಗಾಡಿಗಳಲ್ಲಿ ಚಿಕ್ಕಪುಟ್ಟ ತಾತ್ಕಾಲಿಕ ಅಂಗಡಿಗಳನ್ನು ತೆರೆಯುವವರು, ಚಪ್ಪಲಿ ಹೊಲಿಯುವವರು – ಮುಂತಾದವರೆಲ್ಲರೂ ವ್ಯವಸ್ಥೆಯ ಬಲಿಪಶುಗಳಾಗಿ ತುಂಬ ಕಡು ಬಡತನದಲ್ಲಿ ನಗರದ ಸ್ಲಮ್ ಪ್ರದೇಶಗಳಲ್ಲಿ ಬದುಕುತ್ತಿರುವ ಶ್ರಮಜೀವಿಗಳೇ ಹೊರತು ಈ ನಿವೃತ್ತ ಅಧಿಕಾರಿಗಳಂತೆ ಆರ್ಥಿಕವಾಗಿ ಪ್ರಬಲರಾಗಿರುವವರಲ್ಲ. ಅವರಿಗೆ ಬೇರೆ ಪರ್ಯಾಯಗಳಿದ್ದಿದ್ದರೆ ಅಥವಾ ಅಂತಹ ಪರ್ಯಾಯ ವ್ಯವಸ್ಥೆಯನ್ನು ಸರ್ಕಾರ ಮಾಡಿದ್ದರೆ ಫುಟ್‌ಪಾತಿನಲ್ಲಿ ವ್ಯಾಪಾರ ಮಾಡುವಂತಹ ಹೀನ ಸ್ಥಿತಿಗೆ ಅವರು ಬರುತ್ತಿರಲಿಲ್ಲ. ಎರಡು ಹೊತ್ತಿನ ಊಟಕ್ಕಾಗಿ ಶ್ರಮ ಪಡುತ್ತಿರುವ ಅಂತಹ ಜನರ ದುಡಿಮೆಯನ್ನು ಪಾರ್ಕಿನಲ್ಲಿ ಶ್ಲೋಕ ಹಾಕುತ್ತಿರುವುದಕ್ಕೆ ಹೋಲಿಸುತ್ತಾರೆಂದರೆ ಈ ನಿವೃತ್ತ ಅಧಿಕಾರಿಗಳಿಗೆ ಏನೆನ್ನಬೇಕು?

ಇದನ್ನೆಲ್ಲಾ ವಿವರಿಸಿದರೂ ಆ ನಿವೃತ್ತ ಅಧಿಕಾರಿಗಳ್ಯಾರೂ ಜಪ್ಪಯ್ಯ ಎನ್ನದಿದ್ದಾಗ ಕೊನೆಗೆ ಕೋದಂಡರಾಮಯ್ಯನವರು ಬೆಂಗಳೂರು ಮಹಾನಗರ ಪಾಲಿಕೆಯ ಕಮೀಷನರ್‌ಗೆ, ನಗರದ ಪೊಲೀಸ್ ಕಮೀಷನರ್‌ಗೆ ಹಾಗೂ ಧ್ವನಿವರ್ಧಕಗಳನ್ನು ಬಳಸಲು ಬೆಸ್ಕಾಂ ವಿದ್ಯುತ್‌ನ್ನು ಬಳಸುತ್ತಿದ್ದುದರಿಂದ ಬೆಸ್ಕಾಂನ ಎಂ.ಡಿ.ಗೆ ಲಿಖಿತವಾಗಿ ದೂರು ಸಲ್ಲಿಸಿದ್ದಾರೆ. ಪೊಲೀಸರು ಬಂದು ಎರಡು ಮೂರು ಬಾರಿ ಧ್ವನಿವರ್ಧಕ ಬಳಸುತ್ತಿರುವುದನ್ನು ನಿಲ್ಲಿಸಿದ್ದಾರೆ. ಪೊಲೀಸರು ಅತ್ತ ಹೋದ ಮೇಲೆ ಮತ್ತೆ ತಮ್ಮ ಚಾಳಿಯನ್ನು ಇವರು ಮುಂದುವರೆಸುತ್ತಿದ್ದಾರೆ. ಇವರಿಗೆ ಸಕ್ರಿಯವಾಗಿ ಬೆಂಬಲಕ್ಕೆ ನಿಂತಿರುವವನು ಆ ಕ್ಷೇತ್ರದ ಬಿಜೆಪಿ ಎಮ್ಮೆಲ್ಲೆ ವಿಜಯ್ ಕುಮಾರ್.


ಕೋದಂಡರಾಮಯ್ಯನವರು ಒಬ್ಬ ಮಾಜಿ ಪೊಲೀಸ್ ಕಮೀಷನರ್ ಎಂಬ ದರ್ಪದಿಂದ ತಮ್ಮ ಪ್ರಭಾವವನ್ನು ಬಳಸಲು ಹೋಗಿಲ್ಲ. ಅವರೊಬ್ಬ ಸಾಮಾನ್ಯ ನಾಗರಿಕರಾಗಿ ತಮ್ಮ ಅಹವಾಲನ್ನು ಸರ್ಕಾರ ಮತ್ತು ಆಡಳಿತ ಯಂತ್ರಾಂಗಗಳ ಮುಂದಿಟ್ಟಿದ್ದಾರೆ. ಆದರೆ ಅವರ ಅಹವಾಲುಗಳು, ದೂರುಗಳು ಕಸದಬುಟ್ಟಿ ಸೇರಿವೆ.

ಒಬ್ಬ ಮಾಜಿ ಪೊಲೀಸ್ ಕಮೀಷನರ್ ಅವರ ನ್ಯಾಯಸಮ್ಮತ ದೂರುಗಳಿಗೇ ಈ ಗತಿ ಬರುತ್ತದೆಂದರೆ ಇನ್ನು ಜನಸಾಮಾನ್ಯರ ಪಾಡೇನು ಎಂಬ ಪ್ರಶ್ನೆ ಉದ್ಭವಿಸದಿರದು. ಇದು ಬಿಜೆಪಿ ಅಧಿಕಾರದ ಆರಂಭವಷ್ಟೆ. ಬಿಜೆಪಿಯನ್ನು ಅಧಿಕಾರಕ್ಕೆ ತಂದ ಈ ರಾಜ್ಯದ ಜನ ಇನ್ನೂ ನೋಡಬೇಕಾದದ್ದು ಬಹಳಷ್ಟಿದೆ.

■ ಕುಮಾರ್ ಬುರಡಿಕಟ್ಟಿ









ಬಂಗಾರದ ಪಂಜರ ಮತ್ತು ಗುಬ್ಬಚ್ಚಿ ಗೂಡು

■ ಶ್ರೀರಾಮ ದಿವಾಣ



"ಪಂಜರ ಬಂಗಾರದ್ದಾಗಿದ್ದರೇನು... ಅದು ಪಂಜರವೇ....

ಪದ್ಮಪ್ರಿಯಾ ಎಂಬ ನತದೃಷ್ಟ ಹೆಣ್ಣಿಗೆ ಆಕೆಯ ಗಂಡ ಶಾಸಕ ರಘುಪತಿ ಭಟ್ಟ ಉಡುಪಿಯ ಸಮೀಪದ ಕರಂಬಳ್ಳಿಯಲ್ಲಿ ಕಟ್ಟಿಸಿದ್ದ ಐಷಾರಾಮಿ ಬಂಗಲೆ ಮೊದಲನೆ ಪಂಜರವಾಗಿದ್ದರೆ, ದೂರದ ದೆಹಲಿಯಲ್ಲಿ ಆಕೆಯ ಗೆಳೆಯ ಅತುಲ್ ರಾವ್ ಅವಳಿಗೆಂದೇ ಬಾಡಿಗೆಗೆ ಹಿಡಿದಿದ್ದ ಫ್ಲಾಟ್ ಅವಳ ಮೃತ್ಯುವಿನ ಮನೆಯಾಗಿ ಪರಿಣಮಿಸಿತು....

ಹಾಗೆ ನೋಡಿದರೆ, ಅವಳ ಗಂಡನ ಅರಮನೆಯಂತಹ ಮನೆಗೆ ಹೋಲಿಸಿದರೆ ಶಮಾ ಅಪಾರ್ಟ್‌ಮೆಂಟ್ ನಂ. 20 ಫ್ಲಾಟ್ ಒಂದು ಗುಬ್ಬಚ್ಚಿ ಗೂಡು ಎಂದೇ ಹೇಳಬಹುದು. ಆದರೆ ಹೊಸ ಬದುಕನ್ನು ಅರಸಿಹೋಗಿದ್ದ ಪದ್ಮಪ್ರಿಯಾಳಿಗೆ ಆ ಗುಬ್ಬಚ್ಚಿ ಗೂಡೇ ಹಿತಕರವಾಗನ್ನಿಸಿದ್ದರೆ, ಸುರಕ್ಷಿತ ಅನ್ನಿಸಿದ್ದರೆ, ಅಚ್ಚರಿ ಏನಿಲ್ಲ, ಏಕೆಂದರೆ ಈ 32 ವರ್ಷದ ಯುವತಿಯ ಬಾಳು ಆಗಲೇ ನರಕವಾಗಿತ್ತು.

ಏನೂ ಅರಿಯದ ವಯಸ್ಸಿನಲ್ಲೇ ರಘುಪತಿ ಭಟ್ಟನನ್ನು ಮದುವೆಯಾದ ಪದ್ಮಪ್ರಿಯಳಿಗೆ ಕೆಲ ವರ್ಷಗಳಲ್ಲೇ ಆತನ ತೀಟೆ, ತೆವಲು, ಭ್ರಷ್ಟತೆ, ನೀಚತನಗಳು ಅರ್ಥವಾದವು. ಇಂತಹ ಕೆಟ್ಟ ಗಂಡನನ್ನು ಪಡೆದನಲ್ಲಾ ಎಂದು ಪಶ್ಚಾತ್ತಾಪ ಪಡತೊಡಗಿದಳು. ಈ ಮಧ್ಯೆ ಆಕೆಗೆ ರೋಹನ್ ಮತ್ತು ರಾಹುಲ್ ಎಂಬ ಇಬ್ಬರು ಪುತ್ರರು ಜನಿಸಿದರೂ ಆಕೆ ತನ್ನ ಗಂಡನಿಂದ ದೂರವಾಗಲಾರಂಭಿಸಿದಳು. ಆ ಹಂತದಲ್ಲಿ ಆಕೆಗೆ ಹತ್ತಿರವಾದವನೇ ಅತುಲ್ ರಾವ್.

ಹೇಳಿಕೇಳಿ ಈತ ಭಟ್ಟನ ಬಾಲ್ಯ ಸ್ನೇಹಿತ, ಮನೆಯವರಿಗೆಲ್ಲ ಹತ್ತಿರವಾಗಿದ್ದವನು. ಭಟ್ಟನ ವ್ಯವಹಾರ, ಗೋಲ್‌ಮಾಲ್, ಭ್ರಷ್ಟಾಚಾರ ಮತ್ತು ಫೈನಾನ್ಸ್ ದಂಧೆಯಲ್ಲಿ ಆತನಿಗೆ ಹೆಗಲಿಗೆ ಹೆಗಲು ಕೊಡುತ್ತಿದ್ದ ಅತುಲ್ ಭಟ್ಟನ ಮನೆಯ ಒಬ್ಬ ಸದಸ್ಯನೇ ಆಗಿಹೋಗಿದ್ದ.

ಪದ್ಮಪ್ರಿಯಾ ಮತ್ತು ಅತುಲ್ ನಡುವಿನ ಸಂಬಂಧ ಎಂತಹದ್ದೇ ಆಗಿರಲಿ, ಅದು ಅವರ ವೈಯಕ್ತಿಕ ವಿಷಯ. ಆದರೆ ಮದುವೆಯೆಂಬ ಒಡಂಬಡಿಕೆಯನ್ನು ಯಾಂತ್ರಿಕವಾಗಿಯೇ ಅನುಭವಿಸಿದ ಪದ್ಮಪ್ರಿಯಾಳಿಗೆ ಅತುಲ್‌ನಿಂದ ಸಿಕ್ಕಿದ್ದು ಗೆಳೆತನ ಎಂಬುದಂತೂ ಈಗ ಸ್ಪಷ್ಟವಾಗಿದೆ. ಆ ಗೆಳೆತನವನ್ನು ಆಧರಿಸಿಯೇ ಆಕೆ ಹೊಸ ಬದುಕಿನ ಕನಸನ್ನು ಕಂಡಳು ಎಂಬುದೂ ಈಗ ಕಣ್ಣಿಗೆ ರಾಚುತ್ತಿದೆ.

ಆದರೆ ಈ ಅತುಲ್ ಎಂತಹ ಧೋಕಾ ಬಾಜಿ ಎಂದರೆ ಆತ ಒಂದೆಡೆ ಭಟ್ಟನ ವಿಶ್ವಾಸವನ್ನು ಉಳಿಸಿಕೊಳ್ಳಲಿಲ್ಲ, ಇನ್ನೊಂದೆಡೆ ಅವನಲ್ಲಿ ಪದ್ಮ ಇಟ್ಟಿದ್ದ ಭರವಸೆಗೂ ಬೆಲೆ ಕೊಡಲಿಲ್ಲ. ಆ ಕಾರಣಕ್ಕೆ ಪದ್ಮಪ್ರಿಯಾಳ ಸಾವಿಗೆ ಭಟ್ಟ ಮತ್ತು ಅತುಲ್ ಇಬ್ಬರೂ ಹೊಣೆಗಾರರಾಗುತ್ತಾರೆ. ಹಾಗೆಯೇ ಉಡುಪಿಯ ಪೊಲೀಸರು ಮತ್ತು ರಾಜ್ಯದ ಗೃಹಮಂತ್ರಿ ಡಾ. ವಿ.ಎಸ್. ಆಚಾರ್ಯ ಕೂಡ.

ಹೊಸ ಕನಸು

ಪದ್ಮಪ್ರಿಯಾಳಿಗೆ ಹೇಗಿದ್ದರೂ ಡಿಗ್ರಿ ಎಂಬುದೊಂದಿತ್ತು. ಸಾಕಷ್ಟು ಇಂಗ್ಲಿಷ್ ಕೂಡ ಬರುತ್ತಿತ್ತು. ಗಂಡನ ಫೈನಾನ್ಸ್ ಕಂಪನಿಯನ್ನು ನೋಡಿಕೊಂಡ ಅನುಭವವಿತ್ತು. ಇವೆಲ್ಲವುಗಳನ್ನು ಆಧರಿಸಿ ಬಿಪಿಓ ಕಂಪನಿಯೊಂದರಲ್ಲಿ ಕೆಲಸ ಗಿಟ್ಟಿಸಿ ಹೊಸದಾದ ಸ್ವಾವಲಂಬಿ ಬದುಕು ಸಾಗಿಸಬೇಕೆಂದುಕೊಂಡಿದ್ದಳು.

ಈ ಪ್ಲ್ಯಾನ್ ಅನ್ನು ಆಕೆ ಮೊದಲು ಅತುಲ್‌ಗೆ ಹೇಳಿದಾಗ ಆತ ಸೂಚಿಸಿದ್ದು ಮುಂಬೈ ನಗರಿಯನ್ನು. ಆದರೆ ಮುಂಬೈಯಲ್ಲಿ ಕರಾವಳಿ ಪ್ರದೇಶದ ಜನರು ಸಾಕಷ್ಟು ಸಂಖ್ಯೆಯಲ್ಲಿರುವುದರಿಂದ, ಅದಕ್ಕೆ ಬದಲಾಗಿ ದೆಹಲಿಯನ್ನು ಸೂಚಿಸಿದವಳು ಪದ್ಮ. ಆಗ ಕಾರ್ಯಪ್ರವೃತ್ತನಾದ ಅತುಲ್ ದೆಹಲಿಗೆ ಹೋಗಿ ಬಂದು ಬಾಡಿಗೆ ಮನೆಯನ್ನು ಹಿಡಿದು ಸದ್ಯಕ್ಕೆ ಬೇಕಿದ್ದ ಅಗತ್ಯ ವಸ್ತುಗಳ ವ್ಯವಸ್ಥೆಯನ್ನು ಮಾಡಿದ.

ಇದೆಲ್ಲ ರೆಡಿ ಆದ ಮೇಲೆಯೇ ಪದ್ಮಪ್ರಿಯಾ ಕುಂಜಾರುಗಿರಿಯಲ್ಲಿ ತನ್ನ ಕಾರ್ ಅನ್ನು ಬಿಟ್ಟು ಅತುಲ್‌ನೊಂದಿಗೆ ದೆಹಲಿಗೆ ಪರಾರಿಯಾದಳು. ಅದು ಈಗ ಹಳೇ ಕತೆ. ಹೊಸ ಕತೆ ಯಾವುದೆಂದರೆ ಅತುಲ್‌ನನ್ನು ಪೊಲೀಸರು ವಿಚಾರಿಸಿದ ನಂತರ ನಡೆದದ್ದು!

ಪದ್ಮಪ್ರಿಯಾಳ ಕಾರ್ ಪತ್ತೆಯಾದ ನಂತರ ಜೂನ್ 13 ರ ಸಂಜೆ ಬೆಂಗಳೂರಿನಿಂದ ಕುಂಜಾರುಗಿರಿಗೆ ಕೂಗಾಡುತ್ತಾ, ಕಣ್ಣೀರಿಡುತ್ತಾ ಬಂದ ರಘುಪತಿ ಭಟ್ಟ, ಆಕೆಗೆ ಏನಾಗಿರಬಹುದು ಎಂಬುದನ್ನು ಕುರಿತು ಪೊಲೀಸರಿಗೆ ತನ್ನ ಸಂಶಯಗಳನ್ನು ವ್ಯಕ್ತಪಡಿಸಿದ. ಆಗ ಆತ ಮೊದಲೇ ಹೇಳಿದ ಹೆಸರು ತನ್ನ ಬಾಲ್ಯ ಗೆಳೆಯ, ನಂಬಿಕಸ್ಥ, ತನ್ನ 420 ಕೆಲಸಗಳಲ್ಲಿ ಭಾಗೀದಾರ ಅತುಲ್ ರಾವ್‌ನ ಹೆಸರನ್ನು!

ಅಂದರೆ ಅತುಲ್-ಪದ್ಮಾರ ಸ್ನೇಹದ ಬಗ್ಗೆ ಭಟ್ಟನಿಗೆ ಮೊದಲೇ ಗೊತ್ತಿತ್ತೇ? ಅವಳು ಪರಾರಿಯಾಗುವುದಕ್ಕೆ ಅತುಲ್ ನೆರವಾಗಿದ್ದ ಎಂಬ ಗುಮಾನಿ ಭಟ್ಟನಿಗಿತ್ತೆ?

ಅತುಲ್ ಅರೆಸ್ಟ್

ಜೂನ್ 14 ರ ಬೆಳಗ್ಗೆ ಐಜಿಪಿ ಎ.ಎಂ. ಪ್ರಸಾದ್‌ರವರು ಅತುಲ್‌ನನ್ನು ಎಸ್‌ಪಿ ಆಫೀಸಿಗೆ ಕರೆಸಿಕೊಂಡು ವಿಚಾರಿಸಿಕೊಳ್ಳಲಾರಂಭಿಸಿದರು. ಅಷ್ಟು ಬೇಗ ಪೊಲೀಸರ ಸಂಶಯ ತನ್ನತ್ತ ತಿರುಗಿದ್ದರಿಂದ ಹೆದರಿದ ಅತುಲ್ ಎಲ್ಲವನ್ನೂ ಪ್ರಸಾದ್ ಮುಂದೆ ವದರಿದ. ಕುಂಜಾರುಗಿರಿಯಿಂದ ಪದ್ಮಳನ್ನು ಕುಮಟಕ್ಕೆ ಕರೆದುಕೊಂಡು ಹೋದದ್ದು, ಅಲ್ಲಿಂದ ಗೋವೆಗೆ ಪ್ರಯಾಣ ಬೆಳೆಸಿದ್ದು, ಗೋವೆಯಿಂದ ದೆಹಲಿಗೆ ಹಾರಿ ಹೋಗಿ ಅಲ್ಲಿನ 'ಗುಬ್ಬಚ್ಚಿ ಗೂಡಿ'ನಲ್ಲಿ ಆಕೆಯನ್ನು ಬೆಚ್ಚಗೆ ಇಟ್ಟಿರುವುದು... ಎಲ್ಲವನ್ನೂ ಬಾಯಿಬಿಟ್ಟ.

ಅಷ್ಟೇ ಅಲ್ಲ, ರಘುಪತಿ ಭಟ್ಟನೊಂದಿಗೆ ಆಕೆ ಇನ್ನು ಮುಂದೆ ಇರಲು ಬಯಸುವುದಿಲ್ಲವೆಂದೂ, ತನ್ನ ಬದುಕಿಗೆ ಹೊಸ ದಿಕ್ಕನ್ನು ಕಂಡುಕೊಂಡಿದ್ದಾಳೆಂದೂ, ತನ್ನ ಇಲ್ಲಿಯ ತನಕದ ಬದುಕಿನೊಂದಿಗಿನ ಎಲ್ಲಾ ನಂಟನ್ನೂ ಕತ್ತರಿಸಿ ಹಾಕಲು ಇಷ್ಟಪಟ್ಟಿದ್ದಾಳೆಂದೂ, ಅತುಲ್ ಪೊಲೀಸರಿಗೆ ವಿವರಿಸಿದ.

ಆತ ಹೇಳುತ್ತಿರುವುದೆಲ್ಲ ನಿಜವೋ, ಸುಳ್ಳೋ ಎಂದು ಪರೀಕ್ಷಿಸಲು ತನ್ನ ಮುಂದೆಯೇ ಆಕೆಯ ಹೊಸ ಮೊಬೈಲ್ ನಂಬರ್‌ಗೆ ಫೋನ್ ಮಾಡುವಂತೆ ಅತುಲ್‌ಗೆ ಪ್ರಸಾದ್ ಸೂಚಿಸಿದರು. ಮಾತ್ರವಲ್ಲ ಆಕೆಯೊಂದಿಗೆ ಏನೇನನ್ನು ಚರ್ಚಿಸಬೇಕೆಂದೂ ತಾವೇ ಸ್ಕ್ರಿಪ್ಟ್ ಕೂಡ ತಯಾರಿಸಿಕೊಟ್ಟರು. ಅದರಂತೆ ಶನಿವಾರ ಬೆಳಗ್ಗೆ ಐಜಿಪಿ ಎದುರೇ ಅತುಲ್ ಪದ್ಮಳೊಂದಿಗೆ ಫೋನ್ ಮೂಲಕ ಮಾತನಾಡಿದ.

ಆಗ ಸ್ಪಷ್ಟವಾದ ವಿಚಾರ ಯಾವುದೆಂದರೆ ಪದ್ಮಪ್ರಿಯಾ ತನ್ನ ಗಂಡನನ್ನು ತಿರಸ್ಕರಿಸಿ ಸ್ವಇಚ್ಛೆಯಿಂದ ಮನೆಬಿಟ್ಟು ಹೋಗಿದ್ದಾಳೆಂದೂ, ಆಕೆ ಸುರಕ್ಷಿತವಾಗಿದ್ದಾಳೆಂದೂ ಮತ್ತು ಯಾವ ಕಾರಣಕ್ಕೂ ಅವಳು ವಾಪಸ್ಸು ಬರುವುದಿಲ್ಲವೆಂದು.

▶▶▶ 12

ಸರಳ ಸ್ವಭಾವದ ಪದ್ಮಪ್ರಿಯ

ಸ್ವಾತಂತ್ರ್ಯ ಹೋರಾಟಗಾರ ಮತ್ತು ಗಾಂಧಿವಾದಿಯ ಮೊಮ್ಮಗಳಾದ ಪದ್ಮಪ್ರಿಯಾ ಹುಟ್ಟಿದ್ದು ಬಡ ಕುಟುಂಬದಲ್ಲಿ. ಮೂಲ್ಕಿ ಸಮೀಪದ ಕಾರ್ನಾಡು ಎಂಬಲ್ಲಿ ದಾಮೋದರ ರಾವ್ ಹಾಗೂ ಪ್ರೇಮಾರಾವ್ ದಂಪತಿಗಳ ಮೊದಲ ಮಗಳಾದ ಪದ್ಮ ಮೂಲ್ಕಿ ವಿಜಯಾ ಕಾಲೇಜಿನಲ್ಲಿ ಡಿಗ್ರಿ ಓದುತ್ತಿದ್ದಂತೆಯೇ ರಘುಪತಿ ಭಟ್ಟನ ಕೈ ಹಿಡಿದಿದ್ದಳು.

ಫೈನಾನ್ಷಿಯರ್ ರಘುಪತಿ ಭಟ್ಟನನ್ನು ಮದುವೆಯಾದ ಬಳಿಕ ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ ಡಿಗ್ರಿ ಮುಗಿಸಿದ ಪದ್ಮ ಸ್ವಾಭಿಮಾನಿ ಮತ್ತು ಸರಳ ನಡೆ-ನುಡಿಯ ನಿಗರ್ವಿ. ಸ್ವಾವಲಂಬನೆಯ ಬದುಕು ಸಾಗಿಸಬೇಕೆಂಬ ಹಂಬಲ ಹೊಂದಿದ್ದವಳು.

ಆದರೆ ಗಂಡ ಭಟ್ಟನ ರಾಜಕೀಯ, ಉಡುಪಿಯ ಬ್ರಾಹ್ಮಣ ಸಂಪ್ರದಾಯ, ಸಮಾಜದ ಒತ್ತಡಗಳು, ಇವುಗಳ ನಡುವೆ ತನ್ನ ಕನಸು ನನಸಾಗಲಾರವು ಎಂದು ಕೊನೆಗೆ ದೂರ ಓಡಿಹೋದವಳು ಪದ್ಮಪ್ರಿಯಾ.

ಆದರೆ ಆಕೆಯ ದುರಂತ ಎಂತಹದ್ದು ನೋಡಿ. ಯಾವುದನ್ನು ಆಕೆ ತೊರೆದು ಹೋಗಿದ್ದಳೋ ಅವೆಲ್ಲ ಅವಳನ್ನು ಬೇತಾಳದಂತೆ ಹಿಂಬಾಲಿಸಿದವು. ಆಕೆ ನೇಣು ಹಾಕಿಕೊಳ್ಳುವಂತೆ ಮಾಡಿದವು. ಬಡ ಕುಟುಂಬದಿಂದ ಬಂದಿದ್ದ ಈ ಮಹಿಳೆಯನ್ನು ಸಮಾಜ ಮತ್ತು ಸಂಪ್ರದಾಯ ಬಲಿ ತೆಗೆದುಕೊಂಡವು....

ಉತ್ತರಿಸಲೇಬೇಕಾದ ಪ್ರಶ್ನೆಗಳು



* ಪದ್ಮಪ್ರಿಯಾ ಮನೆ ತೊರೆಯಲು ರಘುಪತಿ ಭಟ್ಟ ಕೊಡುತ್ತಿದ್ದ ಹಿಂಸೆಯೇ ಕಾರಣವಾಗಿರುವಾಗ, ಪದ್ಮಪ್ರಿಯಾ ಸಾವಿಗೂ ಈತನೇ ಕಾರಣನಾಗುತ್ತಾನಲ್ಲ? ಹೀಗಿದ್ದರೂ ಪೊಲೀಸರೇಕೆ ಭಟ್ಟನನ್ನು ಇನ್ನೂ ವಿಚಾರಣೆಗೆ ಗುರಿಪಡಿಸಿ ಬಂಧಿಸಿಲ್ಲ?
* ಪದ್ಮಪ್ರಿಯಾರವರ ಕಾರನ್ನು ಕುಂಜಾರುಗಿರಿಯಲ್ಲಿ ಕಾಡಿನ ನಡುವೆ ನಿಲ್ಲಿಸಿ ಅಪಹರಣದ ರೀತಿಯಲ್ಲಿ ಚಿತ್ರಣ ಮೂಡುವಂತೆ ಪ್ಲ್ಯಾನ್ ಮಾಡಿದವರು ಯಾರು? ಈ ಕೃತ್ಯ ನಡೆಸಲು ಯಾರ್‍ಯಾರು ಜತೆಗಿದ್ದರು?
* ಮುರ್ಡೇಶ್ವರದಲ್ಲಿ ನಾನೇ ಪದ್ಮಳನ್ನು ಪತ್ತೆಹಚ್ಚಿದೆ ಎನ್ನುವ ಡಿವೈಎಸ್‌ಪಿ ಎಂ.ಬಿ. ನಾಗರಾಜನ ಹೇಳಿಕೆಯನ್ನು ಸರ್ಕಾರ ಗಂಭೀರವಾಗಿ ಯಾಕೆ ತೆಗೆದುಕೊಳ್ಳುತ್ತಿಲ್ಲ?
* ಪದ್ಮಪ್ರಿಯಾಳೇ ಸ್ವತಃ ಗಂಡನನ್ನು ತಿರಸ್ಕರಿಸಿ ಹೋದ ಬಳಿಕ ದೆಹಲಿಗೆ ರಘುಪತಿ ಭಟ್ಟ ಹಾಗೂ ಗ್ಯಾಂಗ್‌ನ್ನು ಪೊಲೀಸರು ಪದ್ಮಳ ಮನವೊಲಿಕೆ ಹೆಸರಲ್ಲಿ ಕರೆದೊಯ್ದುದ್ದೇ ಅಪರಾಧವಲ್ಲವೇ? ಇದು ಪೊಲೀಸರ ಅಧಿಕಪ್ರಸಂಗವಲ್ಲವೇ? ಪದ್ಮಳ ನಿಲುವು ಗೊತ್ತಿದ್ದರೂ ಭಟ್ಟನನ್ನು ಮತ್ತು ಕಾರ್ಕಳದ ಮಾಜಿ ಶಾಸಕ ಸುನಿಲ್‌ಕುಮಾರ್‌ನನ್ನು ದೆಹಲಿಗೆ ಕರೆದೊಯ್ದುದ್ದೇ ಬಿಜೆಪಿ ಮಾಡಿದ ತಪ್ಪು, ಪದ್ಮಳ ಸಾವಿಗೆ ಇವರೆಲ್ಲರೂ ಕಾರಣರಲ್ಲವೇ?
* ಪದ್ಮ ದೆಹಲಿಯಲ್ಲಿದ್ದಾರೆಂದು ಗೊತ್ತಾದ ಕೂಡಲೇ ಪದ್ಮಳನ್ನು ವಶಕ್ಕೆ ತೆಗೆದುಕೊಳ್ಳುವ ಜವಾಬ್ದಾರಿಯನ್ನು ದೆಹಲಿ ಪೊಲೀಸರಿಗೆ ಕೊಡದೇ ಇದ್ದುದು ಯಾಕೆ? ಅಂದು ಹಾಗೆ ಮಾಡಿದ್ದರೆ ಇಂದು ಪದ್ಮ ಉಳಿಯುತ್ತಿರಲಿಲ್ಲವೇ? ಪದ್ಮ ಸಾಯುವುದೇ ಇವರಿಗೆಲ್ಲ ಬೇಕಾಗಿತ್ತೇ? ಹಾಗಾಗಿ ಅವಳನ್ನು ರಕ್ಷಿಸುವ ಹೆಸರಲ್ಲಿ ಎಲ್ಲರೂ ಒಂದಾಗಿ ಪದ್ಮ ಸಾಯುವಂತೆ ಮಾಡಿದರೇ?
* ಸಿಬಿಐ ತನಿಖೆಗೆ ಯಾಕೆ ಪದ್ಮ ಪ್ರಕರಣವನ್ನು ಹಸ್ತಾಂತರಿಸಿ ಸರ್ಕಾರ ಆರೋಪ ಮುಕ್ತಗೊಳ್ಳಬಾರದು?

ಬದುಕಿದ್ದಾಗಲೂ ಬದುಕಲು ಬಿಡದ ರಾಕ್ಷಸರು

ತನ್ನನ್ನು ನಿರ್ಲಕ್ಷಿಸುತ್ತಿದ್ದ, ಪೂರ್ಣವಾಗಿ ಉಪೇಕ್ಷಿಸುತ್ತಿದ್ದ, ಅನ್ಯರ ತೋಳ್ತೆಕ್ಕೆಯಲ್ಲೇ ಮುಳುಗೇಳುತ್ತಿದ್ದ ಗಂಡ ರಘುಪತಿ ಭಟ್ಟನಿಂದ ಕಾನೂನುಬದ್ಧವಾಗಿಯೇ ಡೈವೋರ್ಸ್ ಬಯಸಿದ್ದರು ಪದ್ಮಪ್ರಿಯಾ ಎಂಬ ಮಾತು ಕೇಳಿಬರುತ್ತಿದೆ.

ಕಳೆದ ಚುನಾವಣೆಗಿಂತ ಸ್ವಲ್ಪ ಮೊದಲೇ ಈ ಡೈವೋರ್ಸ್ ಪ್ರಕ್ರಿಯೆ ಪ್ರಾರಂಭವಾಗಿತ್ತು. ಕಾಗದ ಪತ್ರಗಳನ್ನೆಲ್ಲ ಸಿದ್ಧಪಡಿಸಿಯೂ ಆಗಿತ್ತು. ಅಷ್ಟರಲ್ಲಿ ಡಾ. ವಿ.ಎಸ್. ಆಚಾರ್ಯ ಮಧ್ಯ ಪ್ರವೇಶಿಸಿ ಡೈವೋರ್ಸ್ ಯತ್ನಕ್ಕೆ ತಡೆಯೊಡ್ಡಿದ್ದರು.

ಸಂಪ್ರದಾಯ, ಸಂಸ್ಕೃತಿ, ಭಾರತೀಯತೆ, ನೈತಿಕತೆ, ಮಾತೆಯರು ಎಂದೆಲ್ಲಾ ಬೊಬ್ಬಿಡುತ್ತಿದ್ದ ಬಿಜೆಪಿ ಪಕ್ಷಕ್ಕೆ ಮಾತ್ರವಲ್ಲ; ಭಟ್ಟರಿಗೂ ಡೈವೋರ್ಸ್ ಕೇಸ್ ಡ್ಯಾಮೇಜ್ ಕೊಡುತ್ತದೆ ಎಂದೆಲ್ಲಾ ಪಾಠ ಮಾಡಿದ ಡಾ. ಆಚಾರ್ಯ, ಪದ್ಮ ಆಸೆಗೆ ತಣ್ಣೀರೆರಚಿದ್ದರು.

ಚುನಾವಣೆ ಮುಗಿದ ಬಳಿಕವೂ ಪದ್ಮ ತನ್ನ ಗಂಡನ ಮುಂದೆ ಮತ್ತೆ ಡೈವೋರ್ಸ್ ಪ್ರಸ್ತಾಪ ಇಟ್ಟಿದ್ದಳು. "ನಮ್ಮ ಪಾರ್ಟಿ ಆಡಳಿತಕ್ಕೆ ಬಂದಿದೆ. ಈಗ ಡೈವೋರ್ಸ್ ಕೊಟ್ಟರೆ ನನಗೆ ಸಿಗಬಹುದಾದ ಸ್ಥಾನ, ಅವಕಾಶ ಕೈತಪ್ಪಿ ಹೋಗಬಹುದು. ಮಾನ, ಪ್ರತಿಷ್ಠೆ ಎರಡೂ ಕಳೆದುಹೋಗುತ್ತದೆ" ಎಂದು ಭಟ್ಟ ಎರಡನೇ ಬಾರಿ ಪದ್ಮ ಮುಂದಿಟ್ಟಿದ್ದ ಪ್ರಸ್ತಾಪವನ್ನು ತಳ್ಳಿಹಾಕಿದ್ದ.

ಭಟ್ಟನ, ಆಚಾರ್ಯನ, ಬಿಜೆಪಿಯ ಘನತೆ, ಗೌರವ, ಪ್ರತಿಷ್ಠೆ ಉಳಿಸಲು ಪದ್ಮಳ ಸ್ವಾತಂತ್ರ್ಯ ಮತ್ತು ಹಕ್ಕನ್ನು ಕಸಿದುಕೊಳ್ಳಲಾಯಿತು. ಅಂದು ಪದ್ಮಳ ಹಕ್ಕನ್ನು ಕಸಿದುಕೊಳ್ಳದಿರುತ್ತಿದ್ದರೆ, ಇಂದು ಪದ್ಮಪ್ರಿಯಾ ಬದುಕಿರುತ್ತಿದ್ದಳೋ ಏನೋ?

ಹಾಗೆ ನೋಡಿದರೆ, ಪದ್ಮಪ್ರಿಯಾಳ ಸಾವಿಗೆ ಭಟ್ಟ ಹಾಗೂ ಡಾ. ಆಚಾರ್ಯ ಮೂಲ ಕಾರಣರಾಗುತ್ತಾರೆ. ಯಾಕೆಂದರೆ ಪದ್ಮಳ ಡೈವೋರ್ಸ್‌ಗೆ ಅಡ್ಡಿಪಡಿಸಿದ್ದ ಇವರಿಬ್ಬರೂ ಆಕೆಯನ್ನು ಸಾವಿನಿಂದ ರಕ್ಷಿಸಿಕೊಳ್ಳಲಾಗಲಿಲ್ಲ. ಬದುಕಿದ್ದಾಗ ಆಕೆಯನ್ನು ಬದುಕಲು ಬಿಡಲಿಲ್ಲ, ಆಕೆಯೇ ಹೊಸ ಬದುಕನ್ನರಸಿ ಹೊರಟಾಗಲೂ ಅವಳನ್ನು ಜೀವಿಸಲು ಬಿಡಲಿಲ್ಲ.





ಉಡುಪಿಯ ಸೋಗಲಾಡಿ ಸಂಸ್ಕೃತಿಯ ಕರಾಳ ಕೃತ್ಯ

ರಘುಪತಿ ಭಟ್ಟರ ಪತ್ನಿ ಪದ್ಮಪ್ರಿಯಾ ಅವರ ಮರಣದ ದುರಂತದಲ್ಲಿ ಭಾಗೀದಾರರಾಗಿರುವ ಮೂವರೂ ಸಹ ಶಾಸಕರು, ಅವರ ಪತ್ನಿ, ಹಾಗೂ ಅವರ ಕುಟುಂಬ ಸ್ನೇಹಿತ ಅತುಲ್ - ಬ್ರಾಹ್ಮಣರು. ಹಾಗಾದರೆ ಈ ಮೂವರ ವರ್ತನೆ ದೇಶದ ಹಿಂದೂಗಳನ್ನು ಪ್ರತಿನಿಧಿಸುತ್ತದೆಯೇ? ಕರ್ನಾಟಕದ ಹಿಂದೂಗಳನ್ನು ಪ್ರತಿನಿಧಿಸುತ್ತದೆಯೇ? ಕರಾವಳಿಯ ಹಿಂದೂಗಳನ್ನು? ಉಡುಪಿ ಜಿಲ್ಲೆಯ ಹಿಂದೂಗಳನ್ನು? ಉಡುಪಿ ನಗರದ ಹಿಂದೂಗಳನ್ನು? ಸಮಕಾಲೀನ ಬ್ರಾಹ್ಮಣ ಸಂಸ್ಕೃತಿಯನ್ನು? ಉಡುಪಿಯ ಬ್ರಾಹ್ಮಣರನ್ನು? ಅದೂ ಬೇಡವೆಂದರೆ ಉಡುಪಿಯ ಮಾಧ್ವರನ್ನ?

ಜಿ. ರಾಜಶೇಖರ

ಉಡುಪಿಯ ಬಿಜೆಪಿ ಶಾಸಕರ ಪತ್ನಿಯ ಮರಣ, ಕೊಲೆಯೊ? ಹತ್ಯೆಯೊ? ರಾಜ್ಯ ಗೃಹಮಂತ್ರಿಯವರು ಆ ಕುರಿತು ನೀಡುತ್ತಿರುವ ಹೇಳಿಕೆಗಳು, ...ಲೀಸ್ ಇಲಾಖೆಯವರ ತರಹೇವಾರಿ ನಿರೂಪಣೆಗಳು ಮತ್ತು ಮಾಧ್ಯಮಗಳ ...ಹಾಪೋಹಗಳು ಏನೇ ಇರಲಿ, ಮೃತರ ಸಾವು ಹೇಗೆ ಸಂಭವಿಸಿತು ...ಬುದು ಆಕೆಯ ಕೊನೆಯ ಕ್ಷಣಗಳ ಮನಃಸ್ಥಿತಿ ಹೇಗಿದ್ದಿತು ಎಂಬುದರಷ್ಟೇ ...ಢವಾಗಿದೆ. ಆದರೆ ಈ ದುರಂತದಲ್ಲಿ ಭಾಗೀದಾರರಾಗಿರುವ ಶಾಸಕರು, ...ಕರ ಪತ್ನಿ ಮತ್ತು ರಾಜ್ಯ ಪೊಲೀಸ್ ಇಲಾಖೆಯ ದೃಷ್ಟಿಯಲ್ಲಿ ದುರಂತದ ...ನಾಯಕನಾಗಿರುವ ಶಾಸಕರ ಕುಟುಂಬ ಸ್ನೇಹಿತ–ಈ ಮೂವರ ಮೇಲೂ ...ಮ ಪ್ರೇಮ ಸಂಬಂಧಗಳ ಆರೋಪಗಳಿವೆ; ಅದು ಈ ಸಾವಿನ ಜೊತೆ ...ಕು ಹಾಕಿಕೊಂಡಿದೆ.

ಅಕ್ರಮ ಪ್ರೇಮ, ಗುರುತರವಾದ ನೈತಿಕ ಅಪರಾಧವಲ್ಲ; ಮನುಷ್ಯರು ...ಡದೆ ಇರುವಂತಹದ್ದೂ ಅಲ್ಲ. ಹಾಗೆ ನೋಡಿದರೆ, ಇಂತಹದ್ದನ್ನು ...ಖಂಡಿತವಾಗಿ ವಿರೋಧಿಸುವವರು ಒಂದೋ ಸೋಗಲಾಡಿಗಳು, ಇಲ್ಲ ...ಗಗ್ರಸ್ತ ಮನಸ್ಸಿನವರು. ಈ ಬಗೆಯ ಸಂಬಂಧಗಳು ಅವರವರ ಖಾಸಗಿ ...ಹಾರ ಎಂದು ಅಲಕ್ಷಿಸುವುದೇ ಅತ್ಯಂತ ನೈತಿಕವೂ ಆರೋಗ್ಯಕರವೂ ಆದ ...ವು. ಈ ಸಹನೆ ಮತ್ತು ಔದಾರ್ಯ ಕನ್ನಡಿಗರ ಸಂಸ್ಕೃತಿಯ ಭಾಗವೂ ...ದು. ಕನ್ನಡಿಗರು, ಈ ನಾಡಿನ ರಾಜಕಾರಣಿಗಳ ಬಗ್ಗೆಯೂ ಹೀಗೆಯೇ ...ಚಿಸಿದವರು. ಈ ರಾಜ್ಯದ ಮುಖ್ಯಮಂತ್ರಿಗಳನ್ನೆ ತೆಗೆದುಕೊಳ್ಳಿ.

ಕೆಂಗಲ್ ಹನುಮಂತಯ್ಯನವರಿಂದ ಹಿಡಿದು ಕುಮಾರಸ್ವಾಮಿಯವರೆಗೆ, ...ಟಕದ ಹಲವು ಮುಖಮಂತ್ರಿಗಳ "ಪಾಠೇತರ ಚಟುವಟಿಕೆ"ಗಳ ಬಗ್ಗೆ ...ಗಳು ಹಬ್ಬಿದ್ದವು. ಆದರೆ ಜನ ಅವನ್ನು ತಮ್ಮ ಬಾಯಿಯ ಎಲಡಿಕೆ ...ಡಿಕೊಂಡು ಆನಂದಿಸಿದರೇ ವಿನಃ, ಈ ಯಾವ ರಾಜಕಾರಣಿಯನ್ನೂ ...ಕ್ಕಾಗಿ ತಿರಸ್ಕರಿಸಬೇಕು ಎಂದು ಯೋಚಿಸಲಿಲ್ಲ. ಅಮೆರಿಕದ ಅಧ್ಯಕ್ಷ ಬಿಲ್ ...ಟನ್, ಮೊನಿಕಾಲೆವಿನ್‌ಸ್ಕಿ ಎಂಬಾಕೆಯ ಜೊತೆ ಇರಿಸಿಕೊಂಡ ಸಂಬಂಧ, ಆ ...ಶದಲ್ಲಿ ಒಂದು ದೊಡ್ಡ ಹಗರಣವೇ ಆಯಿತು. ಅಲ್ಲಿನ ಮಾಧ್ಯಮಗಳು ...ನ್ನು ಅಟ್ಟಾಡಿಸಿದವು. ಕ್ಲಿಂಟನ್, ಸ್ವಲ್ಪದರಲ್ಲಿ ಇಂಪೀಚ್‌ಮೆಂಟ್ (ಬಲವಂತದ ...ತ್ಯಾಗ)ದಿಂದ ತಪ್ಪಿಸಿಕೊಂಡ. ಈ ವಿಷಯದಲ್ಲಿ ಅಮೆರಿಕನ್ನರದ್ದು ...ಗಲಾಡಿತನದ ವರ್ತನೆ, ಕನ್ನಡಿಗರದ್ದು ವಿವೇಕಯುತವಾದ ಔದಾರ್ಯ.

ಮನುಷ್ಯ ಸ್ವಭಾವದ ವಾಂಛೆಗಳನ್ನೂ, ದೇಹದ ಮಿತಿಗಳನ್ನೂ ಅರಿತವರ ...ಕ ಅದು. ಆದರೆ ನಮ್ಮ ಈ ಔದಾರ್ಯಕ್ಕೆ ಬಿಜೆಪಿ ರಾಜಕಾರಣಿಗಳೂ ...ರ್ಹರೋ? ಕರ್ನಾಟಕದ ಇತರ ರಾಜಕಾರಣಿಗಳ ಬಗ್ಗೆ ನಮ್ಮ ಜನ ತೋರಿಸಿದ ...ರಾಳತನಕ್ಕೆ ಉಡುಪಿಯ ಹಾಲಿ ಬಿಜೆಪಿ ಶಾಸಕರು, ಹೊನ್ನಾಳಿಯ ಶಾಸಕರು ...ತ್ತು ಇವರಿಗಿಂತ ಮುಖ್ಯವಾಗಿ ಕರ್ನಾಟಕದ ಹಾಲಿ ಮುಖ್ಯಮಂತ್ರಿ ಅರ್ಹರೋ?

ಬಿಜೆಪಿಯ ಫ್ಯಾಸಿಸ್ಟ್ ಸಾಂಸ್ಕೃತಿಕ ಧೋರಣೆಗಳಲ್ಲಿ ಈ ಬಗೆಯ ಔದಾರ್ಯ ...ಗೂ ಸಹನೆಗಳಿಗೆ ಎಡೆ ಇಲ್ಲ. ಅದಕ್ಕೆ ಸರಿಯಾಗಿ, ಕಳೆದ 20-25 ...ರ್ಷಗಳಿಂದ, ಬಿಜೆಪಿ ತನ್ನ ರಾಜಕೀಯದ ಕಡೆಗೆ ಜನರನ್ನು ಒಲಿಸುವ ...ತ್ರವಾಗಿ ಬಳಸಿಕೊಂಡದ್ದು ರಾಮನನ್ನು, ರಾಮ ತನ್ನ ಪತ್ನಿಯ ಶೀಲವನ್ನೇ ಸಂದೇಹಿಸಿದವ; ಅವಳನ್ನು ಅಗ್ನಿಪರೀಕ್ಷೆಗೆ ಒಳಪಡಿಸಿದ 'ಮರ್ಯಾದಾ ಪುರುಷೋತ್ತಮ' ಕಟ್ಟುನಿಟ್ಟಿನ ಏಕಪತ್ನೀವ್ರತಸ್ಥ. ರಾಮನ ಆದರ್ಶಗಳಿಗೆ ತಕ್ಕಂತೆ ಬಾಳದೆ, ಅವನನ್ನು ಕೇವಲ ರಾಜಕೀಯ ಲಾಭಕ್ಕೆ ಬಳಸುವ ಬಿಜೆಪಿಯ ರಾಮಭಕ್ತಿ ಸೋಗಲಾಡಿತನವಲ್ಲದೆ ಮತ್ತಿನ್ನೇನು?

ಬಿಜೆಪಿಗಳಿಗೆ ರಾಮನಲ್ಲಿ ನಿಷ್ಠೆ ಇಲ್ಲ; ಭಾರತೀಯ ಸಂಸ್ಕೃತಿ ಅರಿವು ಕೂಡ ಇಲ್ಲ. ಭಾರತೀಯರಿಗೆ ರಾಮ ಒಬ್ಬ ಆದರ್ಶ ಪುರುಷ, ನಿಜ. ಆದರೆ ರಾಮನ ತದ್ವಿರುದ್ಧ ಗುಣ ಸ್ವಭಾವದ ಕೃಷ್ಣನೂ ಭಾರತೀಯರಿಗೆ ಪ್ರೀತಿಪಾತ್ರನಾದವನು. ರಾಮ ಏಕಪತ್ನೀವ್ರತಸ್ಥ ಕೃಷ್ಣ ಬಹುಪತ್ನೀವಲ್ಲಭ. ರಾಮಸತ್ಯಸಂಧ; ತಾನು ಯಾವುದನ್ನು ಸತ್ಯ ಎಂದು ಭಾವಿಸಿದ್ದಾನೋ ಅದರ ಬಗ್ಗೆ ಕಠೋರನಿಷ್ಠೆಯ ಹಠವಾದಿ; ಹಠಮಾರಿ, ಕೃಷ್ಣನಾದರೋ ಕಪಟನಾಟಕ ಸೂತ್ರಧಾರಿ. ರಾಮಾಯಣದ ಸೀತೆಯ ಕಠೋರ ಪಾತಿವ್ರತ್ಯಕ್ಕೆ ಪ್ರತಿಯಾಗಿ ಮಹಾಭಾರತದಲ್ಲಿ ಕುಂತಿ, ದ್ರೌಪದಿಯರಿದ್ದಾರೆ. ರಾಮಾಯಣದಲ್ಲೇ ಸೀತೆಯ ಮನೋನಿಗ್ರಹಕ್ಕೆ ವೈದೃಶ್ಯದಲ್ಲಿ ತನ್ನದೇ ದೇಹದ ಅದಮ್ಯ ಆಸೆಗಳಿಗೆ ಸೋತ, ಸೋತು ಸುಖ ಪಡೆದ ಅಹಲ್ಯೆಯ ಪ್ರಸಂಗವಿದೆ. ಅಹಲ್ಯೆಯ ಪಾತ್ರವನ್ನು ವಿಭಿನ್ನ ರಾಮಾಯಣಗಳು ತಮ್ಮದೇ ಆದ ರೀತಿಯಲ್ಲಿ ನಿರೂಪಿಸಿವೆ. ವಾಲ್ಮೀಕಿ ರಾಮಾಯಣ, ಅಹಲ್ಯೆ ಇಂದ್ರರ ಸಂಭೋಗದ ಬಗ್ಗೆ ಕಠೋರ ನೈತಿಕತೆಯ ನಿಲುವು ತಳೆದರೆ, ತಮಿಳಿನ ಕಂಬ ರಾಮಾಯಣ ಅಹಲ್ಯೆಯ ಕಾಮದಲ್ಲಿ ಪ್ರಕೃತಿಯ ಫಲವಂತಿಕೆಗೆ ಮೂಲಭೂತವಾದ ಜೀವಕಾಮದ ಆಶಯಗಳನ್ನು ಗುರುತಿಸುತ್ತದೆ.

ಅಹಲ್ಯೆ ಮಾತ್ರವಲ್ಲ, ರಾಮ, ಲಕ್ಷ್ಮಣ, ಸೀತೆ, ರಾವಣ, ಹನುಮಂತ ಮುಂತಾದ ಪಾತ್ರಗಳನ್ನು ಕೂಡ ವಾಲ್ಮೀಕಿ ರಾಮಾಯಣಕ್ಕಿಂತ ಭಿನ್ನವಾಗಿ, ಅನೇಕ ವೇಳೆ ತದ್ವಿರುದ್ಧವಾಗಿ ಚಿತ್ರಿಸಿದ ರಾಮಾಯಣಗಳೂ ಇವೆ. ರಾಮನನ್ನು ನೀಚಪಾತ್ರವಾಗಿಯೂ, ರಾವಣನನ್ನು ಉದಾತ್ತ ಗುಣದವನೆಂದೂ ಚಿತ್ರಿಸುವ ರಾಮಾಯಣಗಳಿವೆ. ಸೀತೆ, ರಾಮನ ಕುರಿತ ತನ್ನ ಅತೃಪ್ತಿಯಲ್ಲಿ, ಲಕ್ಷ್ಮಣ ಮತ್ತು ರಾವಣರಲ್ಲಿ ಪ್ರೀತಿ ತೋರಿದ ಹಾಗೆ ಚಿತ್ರಿಸಿದ ರಾಮಾಯಣಗಳೂ ಇವೆ. ಕನ್ನಡ ಜಾನಪದದ ಚಿತ್ರಪಟ ರಾಮಾಯಣದಲ್ಲಿ ಬರುವ ಸೀತೆಯ ಶಯ್ಯಾಗೃಹದಲ್ಲಿ ರಾವಣನ ಚಿತ್ರ ಸಜೀವವಾಗಿ ಕುಣಿಯುವ ಪ್ರಸಂಗದ ಅರ್ಥವೇನು? ಈ ರಾಮಾಯಣ ರಚಿಸಿದ ಕವಿ ಸೀತೆಯ ಮನದಾಳದ ಇಂಗಿತವನ್ನು ಸೂಚಿಸುತ್ತಿದ್ದಾನೆ? ಈಗಲೂ ಅದು ನಮ್ಮ ಮನಸ್ಸು ಕೆಣಕುವಷ್ಟು ಶಕ್ತವಾಗಿದೆ. ಈ ವೈವಿಧ್ಯ ಏನನ್ನು ಸೂಚಿಸುತ್ತದೆ? ರಾಮಾಯಣಕ್ಕೆ ಒಂದು ಮೂಲ ಪಠ್ಯವೆಂಬುದೇ ಇಲ್ಲ. ಭಾರತ ಉಪಖಂಡ ಮತ್ತು ಆಗ್ನೇಯ ಏಷ್ಯಾದ ಥಾಯ್‌ಲ್ಯಾಂಡ್, ಕಾಂಬೋಡಿಯಾ ಮತ್ತಿತರ ದೇಶಗಳಲ್ಲಿ ಇರುವ ಸಾವಿರಾರು ರಾಮಾಯಣಗಳಿಗೆ, ವಾಲ್ಮೀಕಿ ರಾಮಾಯಣ ಮೊದಲನೆಯದ್ದೂ ಅಲ್ಲ, ಅವು ವಾಲ್ಮೀಕಿ ರಾಮಾಯಣದ ಅನುಕರಣೆಗಳೂ ಅಲ್ಲ; ಅನುವಾದಗಳೂ ಅಲ್ಲ. ಕನ್ನಡದ ಶ್ರೇಷ್ಠ ಲೇಖಕರಲ್ಲಿ ಒಬ್ಬರಾಗಿರುವ

▶▶▶ 12

...ಟ್ಟನ ನೆರಳೂ ನೋಡಲಾರೆ ಎಂದಳು

ಹತ್ತು-ಹನ್ನೆರಡು ವರ್ಷ ಜತೆಗಿದ್ದು, ಇಬ್ಬರು ಮಕ್ಕಳನ್ನು ಹಡೆದಿದ್ದರೂ ಅಂತಿಮವಾಗಿ ತನ್ನ ಗಂಡನ ನೆರಳನ್ನೂ ನೋಡಲಾರೆ ಎಂದು ಪದ್ಮಪ್ರಿಯಾ ...ತ್ತಾಳೆಂದರೆ ಆಕೆಯ ಗಂಡ ರಘುಪತಿ ಭಟ್ಟ ಇನ್ನೆಷ್ಟು ಕೆಟ್ಟ ಮನುಷ್ಯನಿರಬಹುದೆಂದು ಬೇರೆ ಹೇಳಬೇಕಾಗಿಲ್ಲ.

...ಪತ್ನಿ ಕಾಣೆಯಾದಾಗ ದೂರೂ ಸಹ ನೀಡದ ರಘುಪತಿ ಭಟ್ಟ, ಜೂನ್ 13 ರಂದು ಇನ್ನು ತಾನು ಆಕೆಯನ್ನು ಸ್ವೀಕರಿಸಲಾರೆ ಅಂದಿದ್ದಾನೆ. ಇದೇ ... ಜೂನ್ 16 ರಂದು - ಅಂದರೆ ಮೂರೇ ದಿನಕ್ಕೆ - "ನನಗೀಗಲೂ ಆಕೆಯಲ್ಲಿ ಪ್ರೀತಿ ಇದೆ" ಅಂತಾನೆ!

...ಬ್ಬದ ನಾಲಿಗೆ ಎಂದರೆ ಭಟ್ಟನದ್ದೇ ಇರಬೇಕಲ್ಲವೇ?

"ನನ್ನ ಹೆಂಡ್ತಿಯನ್ನು ಅತುಲ್ ಮಂಕುಬೂದಿ ಎರಚಿ ಬಲವಂತವಾಗಿ ಕರೆದೊಯ್ದಿದ್ದಾನೆ" ಎನ್ನುವ ರಘುಪತಿ ಭಟ್ಟ, ಅದೇ ಉಸಿರಿನಲ್ಲಿ "ಪದ್ಮ ...ಯನ್ನು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ನಾನೇ ನೋಡಿದ್ದೇನೆ" ಅಂತಾನೆ.

ಹೆಂಡ್ತಿಯನ್ನೇ ಸರಿಯಾಗಿ ನೋಡಿಕೊಳ್ಳಲಾರದ ಭಟ್ಟ ಇನ್ನು ಶಾಸಕನಾಗಿ ಉಡುಪಿಗೆ ಏನು ಮಾಡಿಯಾನು?

ಆತಂಕವೇನೆಂದರೆ.....

...ಯನ್ನೇ ತನ್ನ ಮಾದರಿಯಾಗಿ ಸ್ವೀಕರಿಸಿ ಮುಖ್ಯಮಂತ್ರಿ ಆದ ಯಡ್ಡಿ ರೈತರನ್ನು ಕೊಲ್ಲುವ ಮೂಲಕ ನಮ್ಮ ರಾಜ್ಯದಲ್ಲಿಯೂ ಮೋದಿ ...ಯನ್ನು ಆರಂಭಿಸಿದ್ದಾರೆ.

...ಯಡ್ಡಿಯನ್ನೇ ತನ್ನ ಮಾದರಿಯಾಗಿ ತೆಗೆದುಕೊಂಡಿರುವ ರಘುಪತಿ ಭಟ್ಟ ಇದೀಗ ತನ್ನ ...ಹೆಂಡತಿಯನ್ನು ಸಾವಿಗೆ ದೂಡಿ ಸಿಎಂ ಆದ ಯಡ್ಡಿಯನ್ನೇ ತನ್ನ ಮಾದರಿಯಾಗಿ ತೆಗೆದುಕೊಂಡಿರುವ ರಘುಪತಿ ಭಟ್ಟ ಇದೀಗ ತನ್ನ ...ಯನ್ನು ಸಾವಿಗೆ ದೂಡಿದ್ದಾನೆ.

...ಇಂಥವರ ಆಡಳಿತದಲ್ಲಿ ದೇವರೇ ಕಾಪಾಡಬೇಕು ಈ ನಾಡನ್ನು. ಈ ನಾಡಲ್ಲಿರುವ ಜನರನ್ನು.

...ದು, ಕಲಿಯುಗ!

ಖಾಕಿಗೆ ಕಳಂಕ



ಐಜಿಪಿ ಅಜಿತ್ ಮೋಹನ್ ಪ್ರಸಾದ್ ಅಲಿಯಾಸ್ ... ಪ್ರಸಾದ್ ಪೊಲೀಸ್ ಇಲಾಖೆಗ ಕಪ್ಪುಚುಕ್ಕೆಯಾಗಿದ್ದಾರೆ.

ಯಾರೇ ಇರಲಿ, ಏನೇ ಆಗಲಿ ಕಟ್ಟುನಿಟ್ಟಾಗಿ ಕಾನೂನು ಪಾಲಿಸಬೇಕಾದ ಪ್ರಸಾದ್ ಎಲ್ಲವನ್ನೂ ಒಬ್ಬ ಎಂಎಲ್‌ಎ ಪಾದದಡಿಯಿಟ್ಟು ಧ್ವಂಸಗೊಳಿಸಿದ್ದಾರೆ.

ಪದ್ಮಪ್ರಿಯಾಳ ಗುರಿ, ಉದ್ದೇಶ, ನಿರ್ಧಾರ, ನಿಲುವು ಎಲ್ಲವನ್ನೂ ಇಡಿಯಾಗಿ ತಿಳಿದುಕೊಂಡ ಬಳಿಕವೂ, ಅವುಗಳನ್ನು ಅರ್ಥ ಮಾಡಿಕೊಳ್ಳದೆ, ಅಡ್ಡದಾರಿಯಲ್ಲಿ ಮುನ್ನುಗ್ಗಿ ಮುಗ್ಧೆಯೊಬ್ಬಳ ಸಾವಿಗೆ ಮುನ್ನುಡಿ ಬರೆದವರು ಇವರೇ.

ಇಂಥವರಿಗೆ ಸದ್ಯದಲ್ಲೇ ಚಿನ್ನದ ಪದಕ ಮತ್ತು ಪ್ರಮೋಶನ್ ಸಿಗುವುದು ಗ್ಯಾರಂಟಿ?

ಇನ್ನು ಉಡುಪಿ ಡಿವೈಎಸ್‌ಪಿ ಎಂ.ಬಿ. ನಾಗರಾಜ ದೇಹ ಮತ್ತು ಹೊಟ್ಟೆ ಎರಡನ್ನೂ ಸಾಕಷ್ಟು ಬೆಳೆಸಿದ್ದಾನೆ. ಆದರೆ ತಲೆ ಮತ್ತು ಮೆದುಳನ್ನು ಬೆಳೆಸಿಲ್ಲ.

ನಾಗರಾಜನೇ ಮಾಧ್ಯಮದವರೊಂದಿಗೆ ಸ್ಪಷ್ಟವಾಗಿ ಪದೇಪದೇ ತಿಳಿಸಿದಂತೆ ಪದ್ಮಳನ್ನು ಜೂನ್ 13 ರ ರಾತ್ರಿ ಮುರುಡೇಶ್ವರದಲ್ಲಿ ನಾಗರಾಜರೇ ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.


ಕಾಣೆಯಾದ ಪದ್ಮ ಸಿಕ್ಕಿದಾಗ ಮೊದಲು ಹೇಳಿಕೆ ಬರೆಸಿಕೊಂಡು ಪ್ರಾಥಮಿಕ ಕರ್ತವ್ಯವನ್ನು ಪಾಲಿಸಬೇಕಾದ ನಾಗರಾಜ ಆಕೆಯನ್ನು ಅಲ್ಲೇಬಿಟ್ಟು ಉಡುಪಿಗೆ ಮರಳಿದ ಸಾಧನೆಗೆ ಹೆಮ್ಮೆಪಡುತ್ತಿದ್ದಾರೆ.

"ಮುರ್ಡೇಶ್ವರದಲ್ಲಿ ನನ್ನ ನೇತೃತ್ವದ ತಂಡಕ್ಕೆ ಸಿಕ್ಕಿದ್ದಾಳೆ. ನಾನೇ ಮಾತನಾಡಿದ್ದೇನೆ. ಆಕೆ ಗಂಡನ ಮನೆಗೆ ಬರಲು ಸಾಧ್ಯವೇ ಇಲ್ಲ ಎಂದು ಬಿಟ್ಟಳು. ಅಲ್ಲಿಂದಲೇ ಐಜಿಪಿಗೆ ತಿಳಿಸಿದೆ" ಎಂದು ಖಚಿತವಾದ ಧ್ವನಿಯಲ್ಲಿ ಸ್ಪಷ್ಟಪಡಿಸುತ್ತಾನೆ ಈ ಹೊಣೆಗೇಡಿ ಡಿವೈಎಸ್‌ಪಿ.

"ಪದ್ಮಪ್ರಿಯಾ ಅಲ್ಲೇ ಇರಲಿ. ನೀನು ಹೊರಟು ಬಾ" ಅಂದರಂತೆ ನಾಗರಾಜರಿಗೆ ಐಜಿಪಿ ಎ.ಎಂ. ಪ್ರಸಾದ್.

ಮುರ್ಡೇಶ್ವರದಿಂದ ಪದ್ಮಪ್ರಿಯಾಳನ್ನು ದೆಹಲಿಗೆ ಕರೆದೊಯ್ದವರು ಯಾರೆಂಬ ಪ್ರಶ್ನೆಗೆ ಉತ್ತರಿಸಬೇಕಾದ ಜವಾಬ್ದಾರಿ ಈಗ ಐಜಿಪಿಯವರದ್ದು. ಕರೆದೊಯ್ದವರು ಯಾರು? ಕೊಂದವರು ಯಾರು? ಎ.ಎಂ. ಪ್ರಸಾದ್ ಇನ್ನಾದರೂ ಬಹಿರಂಗಪಡಿಸಬೇಕು. ಆ ಮೂಲಕ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಅಷ್ಟೆ.

ಗೃಹ ಬಡಿದ ಗೃಹ ಮಂತ್ರಿ



ಡಾ. ವಿ.ಎಸ್. ಆಚಾರ್ಯರು ಈ ರಾಜ್ಯದ ಗೃಹಮಂತ್ರಿಯಾದ ಬೆನ್ನಿಗೆ ಪೊಲೀಸರು ರೈತರನ್ನು ಕೊಲ್ಲಲಾರಂಭಿಸಿದರು. ಇದೀಗ ಇವರ ಅಭಯ ರಕ್ಷೆಯಲ್ಲಿಯೇ ಅವರದೇ ಪಕ್ಷದ ಮಿನಿ ಕ್ರಿಮಿನಲ್‌ಗಳು ಗೌರವಾನ್ವಿತ ಮಹಿಳೆಯೊಬ್ಬಳ ಸಾವಿಗೆ ಕಾರಣಕರ್ತರಾಗಿದ್ದಾರೆ. ಇನ್ನು ಮುಂದೆ ಈ ನಾಡಿಗೆ ಯಾವ್ಯಾವ ದುರಂತಗಳು ಕಾದಿದೆಯೋ?

ಡಾ. ಆಚಾರ್ಯ ಪದ್ಮಪ್ರಿಯಾ ಸುರಕ್ಷಿತವಾಗಿರುವುದಾಗಿಯೂ, ಸದ್ಯದಲ್ಲೇ ಆಕೆಯನ್ನು ಮನೆಗೆ ಕರೆದುಕೊಂಡು ಬರುತ್ತಿರುದಾಗಿಯೂ ಅಧಿಕೃತವಾಗಿ ಪ್ರಕಟಿಸಿದ್ದರು. ಆದರೆ ಕೊಟ್ಟಿದ್ದು ಮಾತ್ರ ಕಹಿ ಸುದ್ದಿ. ಮನೆಗೆ ಸುರಕ್ಷಿತವಾಗಿ ಕರೆದುಕೊಂಡು ಬಂದದ್ದು ಆಕೆಯ ಹೆಣವನ್ನ!

ಪದ್ಮ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಸಾಧಿಸಿದ ಪ್ರಗತಿ (?!)ಯನ್ನು - ಅಂದರೆ ಪದ್ಮ ಬಗೆಗಿನ ಮಾಹಿತಿಗಳನ್ನು - ಐಜಿಪಿಯಿಂದ ಪಡೆದ ಗೃಹ ಸಚಿವರು, ಗೌಪ್ಯತೆ ಕಾಪಾಡುವ ಬದಲು, ಪದ್ಮ ಕುರಿತಾದ ಮಾಹಿತಿಗಳನ್ನು ಆಕೆಯ ಗಂಡನಿಗೆ ಮತ್ತು ಇತರರಿಗೆ ಲೀಕ್ ಮಾಡಿ ಪರೋಕ್ಷವಾಗಿ ಪದ್ಮ ಸಾವಿಗೆ ಕಾರಣರಾಗಿದ್ದಾರೆ.

ಭ್ರಷ್ಟಾಚಾರದಿಂದ ಸಂಪಾದಿಸಿದ 150 ಕೋಟಿ ರೂ. ... ಹೆಸರಲ್ಲಿ ಬೆಂಗಳೂರಿನ ಬನ್ನೇರುಘಟ್ಟದಲ್ಲಿ ಆಸ್ಪತ್ರೆ ಕಟ್ಟುತ್ತಿರುವ ಡಾ. ಆಚಾರ್ಯ ಈ ಪದ್ಮಪ್ರಿಯಾಳ ನಿಗೂಢ ಸಾವಿನ ... ಗೋಮುಖವ್ಯಾಘ್ರವಾಗಿಯೂ ಬದಲಾಗಿದ್ದಾರೆ

▸▸▸ ಕರಾಳ ಕೃತ್ಯ

ದಿ. ಎ.ಕೆ. ರಾಮಾನುಜನ್ "ತ್ರೀ ಹಂಡ್ರೆಡ್ ರಾಮಾಯಣಾಸ್" ಎಂಬ ತಮ್ಮ ಒಂದು ಪ್ರಬಂಧದಲ್ಲಿ ರಾಮಾಯಣದ ಈ ವಾಸ್ತವ ಸಂಗತಿಯನ್ನು ಸೊಗಸಾಗಿ ನಿರೂಪಿಸಿದ್ದಾರೆ. ಆದರೆ ಅವರ ಈ ಪ್ರಬಂಧದ ವಿರುದ್ಧ ದೆಹಲಿಯಲ್ಲಿ ಬಿಜೆಪಿಯ ವಿದ್ಯಾರ್ಥಿ ಸಂಘಟನೆ, ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ತೋಳ್ಬಲದ ಪ್ರತಿಭಟನೆ ನಡೆಸಿತು. ರಾಮಾನುಜನ್ ಪ್ರಬಂಧ ಹಿಂದೂ ದೇವತೆಗಳನ್ನೂ, ಹಿಂದೂ ಸಂಸ್ಕೃತಿಯನ್ನೂ ಅವಹೇಳನ ಮಾಡುತ್ತದೆ ಎಂದು ಬಿಜೆಪಿ ನಾಯಕ ಮುರಳಿಮನೋಹರ ಜೋಷಿ ಆಪಾದಿಸಿದರು. ರಾಮಾನುಜನ್ ಪ್ರಬಂಧದ ಕುರಿತು ಬಿಜೆಪಿಯ ಅಸಹನೆಗೆ ಮೂರು ಕಾರಣಗಳಿವೆ.

1. ಬಿಜೆಪಿಯ ರಾಮಕೇಂದ್ರಿತ ರಾಜಕೀಯ ಚಳವಳಿಯ ತಾತ್ವಿಕತೆ ಮತ್ತು ರಾಮಾಯಣ ಕುರಿತ ಬಿಜೆಪಿಯ ವ್ಯಾಖ್ಯಾನಗಳ ಪೊಳ್ಳುತನವನ್ನು ರಾಮಾನುಜನ್ ಪ್ರಬಂಧ ಸಾಬೀತುಪಡಿಸುತ್ತದೆ.

2. ಲೈಂಗಿಕತೆ, ಗಂಡಹೆಂಡಿರ ಸಂಬಂಧ, 'ಭಾರತೀಯ ನಾರಿಯ 'ಪಾವಿತ್ಯ' ಮುಂತಾದವುಗಳ ಕುರಿತ ಪುರೋಹಿತಶಾಹಿ ಸಂಸ್ಕೃತಿಯ ಪೂರ್ವಗ್ರಹಗಳನ್ನು ರಾಮಾನುಜನ್ ಪ್ರಬಂಧ ತಿರಸ್ಕರಿಸುತ್ತದೆ.

3. ಒಂದು ದೇಶ, ಒಂದು ಭಾಷೆ, ಒಂದು ಧರ್ಮ, ಒಂದು ಸಂಸ್ಕೃತಿ ಎಂಬುದು ಬಿಜೆಪಿಗಳ ಘೋಷ ವಾಕ್ಯ. ರಾಮಾನುಜನ್ ಪ್ರಬಂಧ ಭಾರತದ ಬಹುಭಾಷಾ, ಬಹುಮುಖೀ ಪರಂಪರೆಯನ್ನು ಎತ್ತಿ ಹಿಡಿಯುತ್ತದೆ. ಗಂಡಹೆಂಡಿರ ಸಂಬಂಧ, ಲೈಂಗಿಕತೆ, ಪಾತಿವ್ರತ್ಯ ಪಾವಿತ್ರ್ಯ ಮುಂತಾದರ ಬಗ್ಗೆ ಈ ಪರಂಪರೆ ಎಷ್ಟು ಉದಾರವಾಗಿತ್ತು ಎಂದೂ ರಾಮಾನುಜನ್ ಕಾಣಿಸಿಕೊಡುತ್ತಾರೆ.

ಈಗ ನಾವು ಮತ್ತೆ ಮೊದಲು ಕೇಳಿದ ಪ್ರಶ್ನೆಗೇ ಬರುತ್ತಿದ್ದೇವೆ. ಇತರರ ದೌರ್ಬಲ್ಯಗಳ ಬಗ್ಗೆ-ಕಾಮಪ್ರೇಮಗಳನ್ನು ದೌರ್ಬಲ್ಯ ಎಂದೇ ಕರೆಯುವುದಾದರೆ -ಬಿಜೆಪಿಗಳಿಗೆ ಇಲ್ಲದ ಸಹನೆಯನ್ನು ನಾವು ಬಿಜೆಪಿಗಳಿಗೆ ಯಾಕೆ ತೋರಿಸಬೇಕು?

ಇನ್ನೂ ಒಂದು ಕಾರಣಕ್ಕೆ ಉಡುಪಿಯ ಬಿಜೆಪಿ ಶಾಸಕರು ನಮ್ಮ ಸಹಾನುಭೂತಿಗೆ ಎರವಾಗುತ್ತಾರೆ. ಶಾಸಕರ ಪತ್ನಿಯ ಆಕಸ್ಮಿಕ ಮರಣದ ದುರಂತದಲ್ಲಿ ಭಾಗೀದಾರರಾಗಿರುವ ಮೂವರೂ ಸಹ-ಶಾಸಕರು, ಅವರ ಪತ್ನಿ, ಹಾಗೂ ಅವರ ಕುಟುಂಬ ಸ್ನೇಹಿತ-ಬ್ರಾಹ್ಮಣರು. ಇವರ ನಡವಳಿಕೆ ದೇಶದ ಹಿಂದೂಗಳನ್ನು ಪ್ರತಿನಿಧಿಸುವಂತಹದ್ದೋ? ಅದು ತೀರಾ ತೀರಾ ಸ್ಥೂಲವಾದ ಸಾಮಾನ್ಯೀಕರಣವಾಯಿತು ಎಂದರೆ ಕರ್ನಾಟಕದ ಹಿಂದೂಗಳನ್ನು ಪ್ರತಿನಿಧಿಸುವಂತಹದ್ದು ಎಂದು ಹೇಳಬಹುದೋ? ಅದೂ ಅತಿಯಾಯಿತು ಎಂದರೆ ಕರಾವಳಿಯ ಹಿಂದೂಗಳನ್ನು? ಉಡುಪಿ ಜಿಲ್ಲೆಯ ಹಿಂದೂಗಳನ್ನು? ಉಡುಪಿ ನಗರದ ಹಿಂದೂಗಳನ್ನು? ಅದ್ಯಾವುದೂ ಬೇಡ. ಈ ಪ್ರಕರಣ ಸಮಕಾಲೀನ ಬ್ರಾಹ್ಮಣ ಸಂಸ್ಕೃತಿಯ ಪ್ರತೀಕ ಎಂದು ಭಾವಿಸಬಹುದೋ? ಅಥವಾ ಕಡೆಯಪಕ್ಷ ಉಡುಪಿಯ ಬ್ರಾಹ್ಮಣರದ್ದು? ಅದು ಬೇಡವೆಂದರೆ ಉಡುಪಿಯ ಮಾಧ್ವರನ್ನಾದರೂ ಈ ಸಾವು ಸಂಕೇತಿಸುತ್ತದೆ ಎಂದು ಹೇಳಬಹುದೋ? ಇಲ್ಲಿ ಜನ ಹೀಗೆ ಯೋಚಿಸುತ್ತಿಲ್ಲ; ಯಾಕೆಂದರೆ ನಮ್ಮ ಮಾಧ್ಯಮಗಳು ಈ ದುರಂತವನ್ನು ಹೀಗೆ ಚಿತ್ರಿಸುತ್ತಿಲ್ಲ, ಶಾಸಕರ ಪತ್ನಿಯ ದುರ್ಮರಣ, ಅದರಲ್ಲಿ ಭಾಗೀದಾರರಾಗಿರುವ ಕುಟುಂಬಗಳ ಖಾಸಗೀ ಸಮಸ್ಯೆ ಎಂದೇ ನಮ್ಮ ಮಾಧ್ಯಮಗಳು ಬಿಂಬಿಸುತ್ತಿವೆ. ವ್ಯಕ್ತಿ ಕುಟುಂಬ, ಊರು, ಮನೆ, ಪ್ರಾಂತ್ಯ ಭಾಷೆ, ಬಡವ, ಶ್ರೀಮಂತ ಈ ಯಾವ ವ್ಯತ್ಯಾಸ, ವೈವಿಧ್ಯಗಳನ್ನೂ ಗಮನಿಸದೆ ಸಾರಾಸಗಟು ಸಾಮಾನ್ಯೀಕರಣ, ಇಲ್ಲಿ ಮುಸ್ಲಿಮರಿಗೆ ಮಾತ್ರ ಮೀಸಲು. ಯಾಕೆಂದರೆ ಅವರು ಈಗ ಕನ್ನಡ ಪತ್ರಿಕೆಗಳ ಪ್ರಕಾರ ನಮಗೆ "ಅನ್ಯಮತೀಯರು." ಹೀಗೆ ಒಂದು ಇಡೀ ಸಮುದಾಯಕ್ಕೆ ಎಲ್ಲ ದುರ್ಗುಣಗಳನ್ನು ಆರೋಪಿಸುವ ಈ ಮನೋರೋಗವನ್ನು ಕರ್ನಾಟಕದಲ್ಲಿ ಹಬ್ಬಿಸಿದ್ದು ಬಿಜೆಪಿ, ಸ್ವತಃ ಅವರೇ ಈ ಬಗೆಯ ಮನೋರೋಗಿ ಉಡುಪಿಯ ಹಾಲಿ ಬಿಜೆಪಿ ಶಾಸಕರು ತಮ್ಮ ಪತ್ನಿಯನ್ನು ಕಳೆದುಕೊಂಡಿದ್ದಾರೆ. ತೀರ ಎಳೆಯ ಪ್ರಾಯದ ಅವರ ಇಬ್ಬರು ಮಕ್ಕಳು ತಮ್ಮ ತಾಯಿಯನ್ನು ಕಳೆದುಕೊಂಡಿದ್ದಾರೆ. ಜಾಣೆಯೂ, ವಿದ್ಯಾವಂತೆಯೂ, ಅಪಾರ ಜೀವನೋತ್ಸಾಹ ಉಳ್ಳವರೂ ಆದ ಗೃಹಿಣಿಯೊಬ್ಬರು ತನ್ನ 31 ರ ಹರೆಯದಲ್ಲಿಯೇ ತೀರಿಕೊಂಡಿದ್ದಾರೆ. ತನ್ನ ಪತ್ನಿಯ ಅಕಾಲ ಮರಣ ಉಡುಪಿಯ ಶಾಸಕರನ್ನು ಇನ್ನಾದರೂ ವಿನಯವನ್ನಾಗಿ ಮಾಡಬೇಕು.

ಈಗ ಎರಡು ತಿಂಗಳ ಹಿಂದೆ ಸದ್ರಿ ಶಾಸಕರು ಉಡುಪಿಯಲ್ಲಿ ಗೆಳೆಯ ಶ್ರೀರಾಮ ದಿವಾಣರತ್ತ ಕೈ ಮಾಡಿ "ಇವನೊಬ್ಬನನ್ನು ತೆಗೆದರೆ ಎಲ್ಲ ಸರಿಹೋಗುತ್ತದೆ" ಎಂದು ಅಬ್ಬರಿಸಿದ್ದರು. ಆಗ ಅವರ ಜೊತೆಯಲ್ಲಿದ್ದ ಸಂಘ ಪರಿವಾರದ ಕಿರಾತಕರು ಶ್ರೀರಾಮ ದಿವಾಣರ ವಿರುದ್ಧ ಘೋಷಣೆ ಕೂಗಿದ್ದರು. ಶ್ರೀರಾಮ ದಿವಾಣ ಸಂಸಾರವಂದಿಗ; ಉಡುಪಿಯ ಶಾಸಕರೂ ಸಂಸಾರವಂದಿಗ; ಮೇಲಾಗಿ ಜನಪ್ರತಿನಿಧಿ. ಆದಾಗ್ಯೂ ಅವರ ಬಾಯಿಂದ ಇಂತಹ ಮಾತು! ಅವರ ಪತ್ನಿಯ ಸಾವಿಗೆ ಯಾರೇ ಕಾರಣವಾಗಿರಲಿ, ಜೀವ ತೆಗೆದುಕೊಳ್ಳುವುದು ಮತ್ತು ಜೀವ ತೆಗೆಯುವುದು ಎಂದರೆ ಏನು? ಮನುಷ್ಯ ಜೀವ ಎಷ್ಟು ಅಮೂಲ್ಯ ಎಂದು ಉಡುಪಿಯ ಶಾಸಕರು ಈಗಲಾದರೂ ಯೋಚಿಸಬೇಕು.

ಈ ಸಾವಿನ ಬಗ್ಗೆ ಉಡುಪಿಯ 'ಜಾಣ', 'ವಿದ್ಯಾವಂತ', 'ಮುಂದುವರಿದ ಜನ ಕೂಡ ಆತ್ಮಪರೀಕ್ಷೆ ಮಾಡಿಕೊಳ್ಳಬೇಕಾಗಿದೆ. ಕಳೆದ ಎರಡೂಮೂರು ದಶಕಗಳಿಂದ ಕರಾವಳಿಯ ಜನ ಇಲ್ಲಿನ ಪತ್ರಿಕೆಗಳು ಹಾಗೂ ಸಂಘಪರಿವಾರದ ಜಂಟಿ ಪ್ರಚಾರವನ್ನು ಮರುಮಾತಿಲ್ಲದೆ ನಂಬಿಕೊಂಡುಬಂದಿದ್ದಾರೆ. ಉಡುಪಿಯಲ್ಲಂತೂ ಸಂಘಪರಿವಾರದ ಜೊತೆ ಉಡುಪಿಯ ಮಠಗಳೂ ಕೈಜೋಡಿಸಿವೆ. ಒಂದು ಊರನ್ನು ಗಬ್ಬೆಬ್ಬಿಸುವುದಕ್ಕೆ ಒಂದು ಮಠವೇ ಧಾರಾಳ ಸಾಕು. ಅಂತಹದ್ದರಲ್ಲಿ ಉಡುಪಿಗೆ ಎಂಟು ಮಠಗಳನ್ನು ಪಡೆಯುವ ಸೌಭಾಗ್ಯ! ಉಡುಪಿಯ ಸೋಗಲಾಡಿ ಸಂಸ್ಕೃತಿಗೆ ಇಲ್ಲಿನ ಮೂರ್ಖ ಪತ್ರಿಕೆಗಳು ಮತ್ತು ಸಂಘಪರಿವಾರದ ಜೊತೆ ಈ ಮಠಗಳ ಕೊಡುಗೆಯೂ ದೊಡ್ಡದಿದೆ. ಅದು ಬರೇ ಸೋಗಲಾಡಿತನವಷ್ಟೇ ಆಗಿದ್ದರೆ ಅದರ ಜೊತೆ ಹೇಗೋ ಏಗಿಕೊಂಡು ಬಾಳಬಹುದು. ಆದರೆ ಈ ಸಂಸ್ಕೃತಿಯ ಆಳದಲ್ಲಿ ನಮ್ಮ ಊಹೆಗೆ ನಿಲುಕದಷ್ಟು ಅಗಾಧವಾದ ಕ್ರೌರ್ಯವಿದೆ. ಉಡುಪಿಯ ಶಾಸಕರ ಪತ್ನಿಯ ಅಕಾಲ ಮರಣ ಈ ಸಂಸ್ಕೃತಿಯ ಕರಾಳತೆಯ ಸಂಕೇತವಾಗಿದೆ. ■

▸▸▸ ಗುಬ್ಬಚ್ಚಿ ಗೂಡು

ಆದರೆ ಪದ್ಮಾಳಿಗೆ ಪಾಪ ಇಲ್ಲಿ ನಡೆದಿದ್ದೇನೂ ಗೊತ್ತಿರಲಿಲ್ಲ, ಅತುಲ್ ಹೊರತುಪಡಿಸಿದರೆ ಬೇರಾರಿಗೂ ತನ್ನ ಹೊಸ ಮೊಬೈಲ್ ನಂಬರ್ ಆಗಲಿ, ತಾನು ವಾಸವಿರುವ ಜಾಗವಾಗಲಿ, ಏನೂ ಗೊತ್ತಿಲ್ಲ ಎಂದೇ ನಂಬಿದ್ದಳು. ಆದರೆ ಅವಳಿಗೆ ಗೊತ್ತಿಲ್ಲದಂತೆ ಅವಳಿಟ್ಟಿದ್ದ ನಂಬಿಕೆಗೆ ಮತ್ತು ವಿಶ್ವಾಸಕ್ಕೆ ಅತುಲ್ ದ್ರೋಹ ಬಗೆದಿದ್ದ.

ಇಷ್ಟೆಲ್ಲ ಆಗುವ ಹೊತ್ತಿಗೆ ಶಾಸಕ ರಘುಪತಿ ಭಟ್ಟನ ಮಾನ ಹರಾಜಾಗಿತ್ತು; ಭಾರತೀಯ ಸಂಸ್ಕೃತಿ, ಸಂಪ್ರದಾಯ ಎಂದೆಲ್ಲ ಬೊಬ್ಬೆ ಇಡುವ ಬಿಜೆಪಿ ಪಕ್ಷದ ಮರ್ಯಾದೆ ಬೀದಿಪಾಲಾಗಿತ್ತು; ಚಡ್ಡಿ ಚತುರ ಗೃಹ ಸಚಿವ ಡಾ. ವಿ.ಎಸ್. ಆಚಾರ್ಯನ ಪೊಳ್ಳುತನ ಜನರ ಬಾಯಲ್ಲಿ ನಗೆಪಾಟಲಿಗೀಡಾಗಿತ್ತು; ಆದರೆ ಮಕಾಡೆ ಬಿದ್ದರೂ ಮೀಸೆ ಮಣ್ಣಾಗಿಲ್ಲ ಎಂಬ ಪ್ರವೃತ್ತಿಯವರಲ್ಲವೇ ಈ ಚಡ್ಡಿಗಳು.

ತನ್ನ ಹೆಂಡತಿ ತನ್ನನ್ನು ಧಿಕ್ಕರಿಸಿ, ತಿರಸ್ಕರಿಸಿ, ಸ್ವಂತ ಇಚ್ಛೆಯಿಂದ ಹೋಗಿದ್ದಾಳೆ ಎಂದು ಒಪ್ಪಲು ಸಿದ್ಧನಿರದಿದ್ದ ಭಟ್ಟ "ಅತುಲ್ ಅವಳಿಗೆ ವಶೀಕರಣ ಮಾಡಿಸಿದ್ದಾನೆ" ಎಂದು ಅರಚಾಡಿದ. ಭಟ್ಟಂಗಿ ಭಟ್ಟನಿಗೇ ತನ್ನ ಹೆಂಡತಿಯನ್ನು ಸರಿಯಾಗಿ ನೋಡಿಕೊಳ್ಳುವ ಸಾಮರ್ಥ್ಯ ಇಲ್ಲ ಎಂದು ಒಪ್ಪಲು ಸಿದ್ಧನಿರದ ಆಚಾರ್ಯ "ಆಕೆಯನ್ನು ಬೇಗನೆ ಸುರಕ್ಷಿತವಾಗಿ ಕರೆತರುತ್ತೇವೆ" ಎಂದು ಡೋಂಗಿ ಬಿಟ್ಟ. ಇನ್ನು ಮುಖ್ಯಮಂತ್ರಿಯಾಗಿರುವ ಹೆಂಡತಿ ಪೀಡಕ ಯಡ್ಡಿಯಂತೂ ಪೊಲೀಸರಿಗೆ "ಶಹಭಾಷ್" ಹೇಳಿದ.

ಪೆದ್ದ ಪೊಲೀಸರು

ಉಡುಪಿ ಪೊಲೀಸರ ಪೆದ್ದುತನ ಯಾವ ಮಟ್ಟದ್ದೆಂದರೆ ಅತುಲ್‌ನಿಂದ ಪದ್ಮಾಳ ಹೊಸ ಸಿಮ್ ನಂಬರ್ ಪಡೆದು ಅದನ್ನು ಆಚಾರ್ಯನಿಗೆ ಕೊಟ್ಟರು. ಆ ಆಚಾರ್ಯನೂ ಎಂಥ ಹುಂಬನೆಂದರೆ ಆತ ರಘುಪತಿ ಭಟ್ಟರ ಮನೆಗೆ ಹೋಗಿ ಆತನಿಗೆ ಆ ನಂಬರ್ ಅನ್ನು ತಿಳಿಸಿದನಲ್ಲದೆ, ಪದ್ಮಪ್ರಿಯಾ ಎಲ್ಲಿದ್ದಾಳೆಂದೂ ಹೇಳಿದ!

ಕೊನೆಗೆ ಪದ್ಮಪ್ರಿಯಾ ಆತ್ಮಹತ್ಯೆಗೆ ಅದೇ ಕಾರಣವಾಯಿತು.

ಹೆಂಡತಿ ಮೂರು ದಿನವಾದರೂ ಮನೆಗೆ ಬಾರದಿದ್ದಾಗ, ಒಂದೇ ಒಂದು ಫೋನ್ ಕರೆಯನ್ನು ಮಾಡದಿದ್ದಾಗ ತಲೆ ಕೆಡಿಸಿಕೊಂಡಿರದಿದ್ದ ಭಟ್ಟನಿಗೆ ಅದಷ್ಟು ಬೇಗ ಆಕೆಯನ್ನು ಒದ್ದಾದರೂ ಮನೆಗೆ ಕರೆದುಕೊಂಡು ಬರುವುದು ಅಗತ್ಯವಾಗಿತ್ತು. ಯಾಕೆಂದರೆ ಅದು ಆಕೆಯ ಇಷ್ಟಕ್ಕಿಂತಲೂ ಆತನ ಪ್ರತಿಷ್ಠೆಯ ಪ್ರಶ್ನೆಯಾಗಿತ್ತು.

ಆದ್ದರಿಂದ ತನ್ನ ಮತ್ತೊರ್ವ ಚಡ್ಡಿ ಮಿತ್ರ ಕಾರ್ಕಳದ ಮಾಜಿ ಶಾಸಕ ಸುನಿಲ್ ಕುಮಾರ್‌ನನ್ನು ಕರೆದುಕೊಂಡು ಭಟ್ಟ ರಾತ್ರೋರಾತ್ರಿ ದೆಹಲಿಗೆ ಹೊರಟೇ ಬಿಟ್ಟ. ಜೂನ್ 15ರಂದು ಭಾನುವಾರ ಬೆಳಗ್ಗೆ ಶಮಾ ಅಪಾರ್ಟ್‌ಮೆಂಟನ ಮನೆ ನಂಬರ್ 20ರ ಮುಂದೆ ಹಾಜರಾದ ಭಟ್ಟ ಮತ್ತು ಸುನಿಲ್ ಬಾಗಿಲು ತಟ್ಟಿದ್ದಾರೆ.

ಅತುಲ್ ಬಿಟ್ಟರೆ ತಾನು ಎಲ್ಲಿದ್ದೇನೆಂದು ಯಾರಿಗೂ ಗೊತ್ತಿಲ್ಲ ಎಂದೇ ನಂಬಿದ್ದ ಪದ್ಮಪ್ರಿಯಾ ಇವರಿಬ್ಬರನ್ನು ನೋಡಿ ದಂಗಾಗಿದ್ದಾಳೆ. ತನ್ನೆಲ್ಲ ಧೈರ್ಯವನ್ನು ಕಳೆದುಕೊಂಡು ಕುಸಿದುಬಿದ್ದಿದ್ದಾಳೆ. ಪದ್ಮಪ್ರಿಯಾಳ 'ಮನ ಸೋಲಿಸುವ' ಕೆಲಸವನ್ನು ಭಟ್ಟ ಮತ್ತು ಸುನಿಲ್‌ಕುಮಾರ್ ಯಶಸ್ವಿಯಾಗಿ ಮಾಡಿ ಮುಗಿಸಿದ್ದಾರೆ.

ಸಿನಿಮಾಗಳಲ್ಲಂತೆ ಕ್ಲೈಮಾಕ್ಸ್ ಮುಗಿದ ಮೇಲೆಯೇ ಪೊಲೀಸರು ಹಾಜರಾಗುವಂತೆ ಇಲ್ಲಿಯೂ ನಡೆದ ಭಟ್ಟನಿಗಿಂತ ತಡವಾಗಿ ಅತುಲ್‌ನೊಂದಿಗೆ ಹಾಜರ ಉಡುಪಿ ಪೊಲೀಸರಿಗೆ ಆಕೆಯಿದ್ದ ಮನೆ ಬಾಗಿಲ ಒಡೆಸುವುದಕ್ಕೂ ನಾಲ್ಕೈದು ಗಂಟೆ ಹಿಡಿದಿದೆ.

ಆದರೇನು ಬಂತು? ಕ್ಲೈಮಾಕ್ಸ್ ಆಗ ಮುಗಿದುಹೋಗಿತ್ತು....

ಪದ್ಮಪ್ರಿಯಾ ಹೆಣವಾಗಿ ನೇತಾಡುತ್ತಿದ್ದಳು...

ಹೀಗಾಗಬಾರದಿತ್ತು

ಪದ್ಮಪ್ರಿಯಾ ಎಲ್ಲಿದ್ದಾಳೆಂದೂ, ಆಕೆಯ ಮನಸ್ ಹೇಗಿದೆ ಎಂದೂ ಗೊತ್ತಾದ ನಂತರವಾದರೂ ಆಕೆ ಇದ್ದಲ್ಲಿ ಹೋಗದಂತೆ ಭಟ್ಟನನ್ನು ಪೊಲೀಸರು ತಡೆಯಬಹುದಿತ್ತು ಬೇರೆ ರೀತಿಯಲ್ಲಿ ಆಕೆಗೆ ಮನವರಿಕೆ ಮಾಡ ಪ್ರಯತ್ನಿಸಬಹುದಿತ್ತು. ಅದರ ಬದಲಿಗೆ ಅವಳ ಜೀವನದ ರಾಕ್ಷಸನಂತಾಗಿದ್ದ ಭಟ್ಟನೇ ಅವಳಿದ್ದಲ್ಲಿಗೆ ಹೋಗಲು ಅನು ಮಾಡಿಕೊಟ್ಟ ಪೊಲೀಸರು ಮತ್ತು ಗೃಹ ಸಚಿವ ಆಚಾರ್ಯ ಆಕೆಯನ್ನು ಸಾವಿನತ್ತ ದೂಡಿದರು.

ಅತುಲ್ ಮೂಲಕವಾದರೂ ಆಕೆಯೊಂದಿಗೆ ಅವ ಬದುಕಿನ ಭವಿಷ್ಯದ ಬಗ್ಗೆ ಚರ್ಚಿಸಬಹುದಿತ್ತು. ಅದನ್ ಇವರ್‍ಯಾರೂ ಮಾಡಲಿಲ್ಲ.

ಇನ್ನು ಅತುಲ್ ಕೂಡ ಪದ್ಮಳ ಸಾವಿಗೆ ಜವಾಬ್ದಾರ ಗುತ್ತಾನೆ. ಯಾಕೆಂದರೆ ಆತನಲ್ಲಿ ಪದ್ಮ ಇಟ್ಟಿದ್ದ ನಂಬಿಕೆ ದ್ರೋಹ ಬಗೆದ. ಹೊಸ ಬದುಕಿನ ಕನಸನ್ನು ಕಾಣುತ್ತಿ ಆಕೆಯ ವಿಶ್ವಾಸವನ್ನು ಮಣ್ಣುಪಾಲು ಮಾಡಿದ. ಅತುಲ್ ಈ ವರ್ತನೆಗೆ ಕಾರಣ ಇಲ್ಲದಿಲ್ಲ.

ಹೇಳಿಕೇಳಿ ಅತುಲ್ ಎರಡನೆ ದರ್ಜೆಯ ಸರ್ಕಾ ನೌಕರನಾಗಿದ್ದರೂ ಕೋಟ್ಯಾಧಿಪತಿ ಉದ್ಯಮಿ. ಪರಮ ಭ್ರ ಹೆಂಡತಿ ಇದ್ದಾಳೆ, ಇಬ್ಬರು ಮಕ್ಕಳಿದ್ದಾರೆ, ಕೋಟಿಗಟ್ಟ ಹಣವಿದೆ. ಇಂತಹ ಸನ್ನಿವೇಶದಲ್ಲಿ ಆತ ಪದ್ಮಾಳ ಪ ವಹಿಸದೇ ಬದುಕಿನ ಪರ ವಹಿಸಿದ. ಪದ್ಮಾಳಿಗೆ ಅತುಲ ಬೇಕಾಗಿದ್ದ. ಆದರೆ ಅತುಲ್‌ಗೆ ಪದ್ಮಾಳಿಗಿಂತ ಹೆಚ್ಚಿನದ್ದಾಗಿ ಹೆಂಡತಿ, ಹಣ ಬೇಕಾದವು.

ಪದ್ಮಾಗೆ ಉಳಿದಿದ್ದು ಸಾವಿನ ಅಪ್ಪುಗೆ ಮಾತ್ರ...

ಆಕೆ ಬದುಕಬೇಕಿತ್ತು

ಪದ್ಮಪ್ರಿಯಾಳ ಸಾವಿನಿಂದ ಬಹಳಷ್ಟು ಮಹಿಳೆಯರ ಪಾಠ ಕಲಿಯಬೇಕಿದೆ. ಮಹಿಳೆಯೊಬ್ಬಳು ಮನೆಯ ಹೊಸ್ತಿಲನ್ನು ದಾಟಿ ಹೋದ ಕೂಡಲೇ ಆಕೆಗೆ ಸ್ವಾತಂತ್ರ್ಯ ಸಿಕ್ಕಿತೆಂದು ಅರ್ಥವಲ್ಲ, ಯಾಕೆಂದರೆ ಗಂಡನ ನಂಟು ಮದುವೆ ಎಂಬ ಸಂಕೋಲೆಗಳನ್ನು ತೊರೆದು ಪುರುಷ ಪ್ರಧಾನ ಸಮಾಜದಲ್ಲಿ ಜೀವಿಸುವುದು ಅಷ್ಟು ಸುಲಭವಲ್ಲ ಅಂದ ಮಾತ್ರಕ್ಕೆ, ಪದ್ಮಪ್ರಿಯಾಳಂತೆ ಆತ್ಮಹತ್ಯೆ ಮಾಡಿಕೊಳ್ಳುವುದೂ ಸರಿಯಲ್ಲ.

ಉದಾಹರಣೆಗೆ ಇದೇ ಪದ್ಮಪ್ರಿಯಾಳನ್ನೇ ತೆಗೆದುಕೊಳ್ಳಿ ಆಕೆ "ನಿನ್ನೊಂದಿಗೆ ಬರಲ್ಲ" ಎಂದು ಗಂಡನಿಗೆ ಹೇಳಬಹುದಿತ್ತು. ಆತ ಬಲವಂತ ಮಾಡಿದ್ದರೆ ಮಾಧ್ಯಮಗಳ ಮುಂದೆ ಆತನ ಬಂಡವಾಳವನ್ನು ಬಹಿರಂಗಪಡಿಸ ಬಹುದಿತ್ತು. ಮಹಿಳಾ ಸಂಘಟನೆಗಳ ನೆರವನ್ನು ಪಡೆಯಬಹುದಿತ್ತು. ಆದರೆ ಅದ್ಯಾವುದನ್ನು ಆಕೆ ಮಾಡಲಿಲ್ಲ.

ತನ್ನ ಬಂಗಾರದ ಪಂಜರದಿಂದ ಹಾರಿಹೋದ ಪದ್ಮಪ್ರಿಯಾ ಎಂಬ ಗುಬ್ಬಚ್ಚಿ ತನ್ನ ಗೂಡನ್ನು ಸೇರಿತು. ಆದರೆ ಇಡೀ ಸಮಾಜ, ವ್ಯವಸ್ಥೆ, ಸಂಪ್ರದಾಯ, ಚಡ್ಡಿಗಳ ಮೂಲಭೂತವಾದಿ ಸಿದ್ಧಾಂತ ಆಕೆಯ ಪಾಲಿಗೆ ಆ ಗೂಡನ್ನು ಮರಣದ ಮನೆಯನ್ನಾಗಿಸಿತ್ತು... ■


ಬೆಂಗಳೂರು ಶಿಕ್ಷಕರ ಕ್ಷೇತ್ರ : ಹೊಸಬರಿಗೆ ಪುಟ್ಟಣ್ಣ ಚಾಲೆಂಜ್

ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಜೂನ್ 26ರಂದು ನಡೆಯಲಿರುವ ಚುನಾವಣೆಯಲ್ಲಿ ಹಾಲಿ ಶಾಸಕ ಪುಟ್ಟಣ್ಣ ಮೇಲುಗೈ ಸಾಧಿಸಿದ್ದಾರೆ. ಬೆಂಗಳೂರು ನಗರದಲ್ಲಿ ಪುಟ್ಟಣ್ಣ ವಿರುದ್ಧ ಬಿಜೆಪಿಯ ನೀಲಯ್ಯ ಪೈಪೋಟಿಗೆ ಬಿದ್ದಿದ್ದಾರೆ. ರಾಮನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನೀಲಯ್ಯ ಆಟಕ್ಕುಂಟು ಲೆಕ್ಕಕ್ಕಿಲ್ಲ ಅಷ್ಟೆ. ಅದೇರೀತಿ ಕಾಂಗ್ರೆಸ್ ಅಭ್ಯರ್ಥಿ ರಾಘವೇಂದ್ರಗೆ ಬೆಂಗಳೂರು ನಗರದಲ್ಲಿ ಅಷ್ಟಾಗಿ ಬೆಂಬಲ ಸಿಗುತ್ತಿಲ್ಲ.

ಆದರೆ ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಪ್ರದೇಶದಲ್ಲಿ ಹೋರಾಟ ನಡೆಯುತ್ತಿರುವುದು ದಳದ ಪುಟ್ಟಣ್ಣ ಹಾಗೂ ಕಾಂಗ್ರೆಸ್‌ನ ರಾಘವೇಂದ್ರರ ನಡುವೆ ಮಾತ್ರ.

ಇವರ ಸೆಣಸಾಟದಲ್ಲಿ ಕನ್ನಡ ಚಳವಳಿಯ ವಾಟಾಳ್ ನಾಗರಾಜ್ ಚುನಾವಣೆಗೆ ನಿಂತಿರುವುದನ್ನು ಯಾರೂ ಗಂಭೀರವಾಗಿ ಪರಿಗಣಿಸಿಲ್ಲ, ಅದ್ಯಾವ ತಲೆಕೆಟ್ಟ ಗಿರಾಕಿ ಕೊಟ್ಟ ಸಲಹೆಯೋ ಏನೋ ವಾಟಾಳ್ ಕಿಂಚಿತ್ ಯೋಚನೆಯನ್ನೂ ಮಾಡದೆ ಶಿಕ್ಷಕರ ಕ್ಷೇತ್ರದಿಂದ ಎಲೆಕ್ಷನ್‌ಗೆ ನಿಂತು ತಾವಾಗೇ ಮುಖಭಂಗ ಮಾಡಿಸಿಕೊಳ್ಳುತ್ತಿದ್ದಾರೆ.

ಒಟ್ಟು 19624 ಮತದಾರರಿರುವ ಈ ಕ್ಷೇತ್ರದಲ್ಲಿ ಬೆಂಗಳೂರು ನಗರ ಹಾಗೂ ಬೃಹತ್ ಬೆಂಗಳೂರು ವ್ಯಾಪ್ತಿಯೊಳಗೆ 15827 ಮತದಾರರಿದ್ದಾರೆ. ಕಳೆದಬಾರಿ



ಪುಟ್ಟಣ್ಣರನ್ನು ಗೆಲ್ಲಿಸಿದ್ದು ಇವರೆ. ಬಿಜೆಪಿಯ ನೀಲಯ್ಯ ಇವರಿಗೆಲ್ಲಾ ಹೊಸ ಮುಖ. ಉಳಿದಂತೆ ರಾಮನಗರ ಜಿಲ್ಲೆಯಲ್ಲಿ 2004 ಮತಗಳಿವೆ ಕನಕಪುರ, ರಾಮನಗರ, ಚನ್ನಪಟ್ಟಣ ಹಾಗೂ ಮಾಗಡಿ ತಾಲ್ಲೂಕಿನಲ್ಲಿ ಹಂಚಿಹೋಗಿರುವ ಮತದಾರರಿವರು. ಇನ್ನು ಬೆಂಗಳೂರು ಗ್ರಾಮಾಂತರ ಹೊಸಕೋಟೆ, ನೆಲಮಂಗಲ, ದೇವನಹಳ್ಳಿ, ದೊಡ್ಡಬಳ್ಳಾಪುರದಲ್ಲಿ1796 ಓಟುಗಳಿವೆ.

ಇವರಲ್ಲಿ ಬಹುತೇಕರಿಗೆ ಪುಟ್ಟಣ್ಣ ಪರವಾಗಿ ಒಲವಿದೆ.

ಕಳೆದ ಬಾರಿ ಗೆದ್ದ ಪುಟ್ಟಣ್ಣ ತನಗೆ ಓಟು ಕೊಟ್ಟ ಶಿಕ್ಷಕರನ್ನು ಮರೆಯಲಿಲ್ಲ, ವರ್ಗಾವಣೆ ಇನ್ನಿತರ ವಿಚಾರಗಳಲ್ಲಿ ಶಿಕ್ಷಕರ ಹಿತರಕ್ಷಣೆಗಾಗಿ ಹಗಲು ರಾತ್ರಿ ಕೆಲಸ ಮಾಡಿದ ಪುಟ್ಟಣ್ಣ ಬಗ್ಗೆ ಶಿಕ್ಷಕರಿಗೆ ಈಗಲೂ ನಂಬಿಕೆ ಕಾಣುತ್ತಿದೆ. ಜೊತೆಗೆ ದಕ್ಷಿಣ ಪದವೀಧರ ಕ್ಷೇತ್ರದ ಶಾಸಕ ಮರಿತಿಬ್ಬೇಗೌಡ ಸಹ ಪುಟ್ಟಣ್ಣ ಪರವಾಗಿ ಓಡಾಡುತ್ತಿದ್ದಾರೆ.

ಇತ್ತ ಬಿಜೆಪಿಯ ನೀಲಯ್ಯ ಒಬ್ಬ ಶಿಕ್ಷಣಾಧಿಕಾರಿಯಾಗಿ ಬಿಜೆಪಿಯ ಶಾಸಕ ರಾಮಚಂದ್ರಗೌಡ ಮತ್ತಿತರರ ಬೆಂಬಲ ಇವರಿಗಿದೆ. ನಗರ ಪ್ರದೇಶದ ಬ್ರಾಹ್ಮಣ ಶಿಕ್ಷಕರು ಬಿಜೆಪಿ ಅಭ್ಯರ್ಥಿಯೆಂಬ ಕಾರಣಕ್ಕೆ ನೀಲಯ್ಯನನ್ನು ಬೆಂಬಲಿಸುತ್ತಿದ್ದಾರೆ. ಆದರೆ ಜಾತಿ ಭಾವನೆ ಮೀರಿ ತಮ್ಮ ಹಿತಾಸಕ್ತಿಗಾಗಿ ಹೋರಾಡಬಲ್ಲವರ್‍ಯಾರೆಂದು ಅಳತೆ ಹಾಕುತ್ತಿರುವವರು ಕಾಣುತ್ತಿದ್ದಾರೆ.

ಮೇಲ್ನೋಟಕ್ಕೆ ಪುಟ್ಟಣ್ಣ ಹಾಗೂ ನೀಲಯ್ಯ ನಡುವೆ ಸಮಬಲದ ಹೋರಾಟ ನಡೆದಂತೆ ಕಂಡರೂ ಒಳಮಾತುಗಳೆಲ್ಲಾ ಪುಟ್ಟಣ್ಣನ ಪರವಾಗಿವೆ. ಇನ್ನೂ ಇದು ಹೆಸರಿಗೆ ಶಿಕ್ಷಕರ ಕ್ಷೇತ್ರದ ಚುನಾವಣೆಯಾದರೂ ಉಳಿದೆಲ್ಲ ಎಲೆಕ್ಷನ್ ರೀತಿಯಲ್ಲೇ ಗುಂಡು-ತುಂಡಿನ ಸಮಾರಾಧನೆಗಳು ನಡೆಯುತ್ತಿವೆ. ಮೀಟಿಂಗ್ ನೆಪದಲ್ಲಿ ಶಿಕ್ಷಕರನ್ನು ಕಲೆಹಾಕಿ ಕುಡಿಸಿ ತಿನ್ನಿಸಿ ಓಟು ಕೇಳುವ ಕೆಟ್ಟ ಪ್ರವೃತ್ತಿ ಎಲ್ಲೆಡೆ ಕಾಣುತ್ತಿದೆ.

ಕಳೆದ ಬಾರಿ ಕಾಂಗ್ರೆಸ್‌ನ ಹರಳಪ್ಪ ದೇವೇಗೌಡರ ವಿರುದ್ಧ ನಾಲ್ಕು ಸಾವಿರ ಲೀಡ್‌ನಲ್ಲಿ ಗೆದ್ದಿದ್ದ ಪುಟ್ಟಣ್ಣ ಬಗ್ಗೆ ಈ ಬಾರಿ ಅಂತಾ ದೂರುಗಳೇನೂ ಕೇಳಿಬರುತ್ತಿಲ್ಲ. ಆದರೆ ಬಿಜೆಪಿಯ ನೀಲಯ್ಯ ಪರವಾಗಿ ರಾಜ್ಯ ಒಕ್ಕಲಿಗರ ಸಂಘ ಗುಟ್ಟಾಗಿ ಬೆಂಬಲಿಸುತ್ತಿದೆಯಂತೆ. ತುರುವೆಕೆರೆಯವರಾದ ನೀಲಯ್ಯ ಶಿಕ್ಷಣ ಇಲಾಖೆಯಲ್ಲಿ ನೌಕರಿಯಲ್ಲಿದ್ದಾತ. ಈಗ ಒಂದೆರಡು ಖಾಸಗಿ ಸಂಸ್ಥೆ ನಡೆಸುತ್ತಿದ್ದಾರೆ. ಈಗ ರಾಜ್ಯದಲ್ಲಿ ಬಿಜೆಪಿ ಸರ್ಕಾರವಿರುವುದರಿಂದ ಮತ್ತು ಬೆಂಗಳೂರು ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ನರಹರಿ ತರಹದ ಬ್ರಾಹ್ಮಣ ವಟುಗಳೇ ಗೆದ್ದು ಬರುತ್ತಿದ್ದುದರಿಂದ ಈ ಬಾರಿ ಹೇಗಾದರೂ ಮಾಡಿ ನೀಲಯ್ಯನನ್ನು ಗೆಲ್ಲಿಸಿಕೊಳ್ಳಬೇಕೆಂದು ಆರೆಸ್ಸೆಸ್ ವಟುಗಳು ಚಡ್ಡಿ ಬಿಗಿ ಮಾಡಿಕೊಂಡು ಓಡಾಡುತ್ತಿದ್ದಾರೆ. ಬಿಜೆಪಿಗಳ ಈ ಬ್ರಾಹ್ಮಣ ಕೋಟೆಯನ್ನು ಮೊದಲ ಬಾರಿಗೆ ಚಿಂದಿಯೆಬ್ಬಿಸಿ ಪುಟ್ಟಣ್ಣ ಕಳೆದ ಬಾರಿ ಗೆದ್ದು ಬಂದಿದ್ದರು.

ನಾಲ್ಕೈದು ವರ್ಷಕಾಲ ಶಿಕ್ಷಕರಿಗೆ ನೆರವಾಗುತ್ತಾ, ಅವರ ಕೆಲಸ ಮಾಡಿಕೊಂಡು ಬಂದಿದ್ದ ಪುಟ್ಟಣ್ಣರನ್ನು ಶಿಕ್ಷಕರು ಮರೆತಿರದಿದ್ದರೆ ಈ ಬಾರಿಯೂ ಗೆಲ್ಲುವುದು ಪುಟ್ಟಣ್ಣನೇ ಎಂದು ಕಾಣುತ್ತದೆ. ■



ಶಾಸ್ತ್ರ ಹೇಳಿ ಬದನೆಕಾಯಿ ತಿಂದ ಶ್ರೀಕಾಂತ!

'ಶಾಸ್ತ್ರ ಹೇಳೋದಕ್ಕೆ, ಬದನೆಕಾಯಿ ತಿನ್ನೋದಕ್ಕೆ' ಎಂಬುದನ್ನು ಅಕ್ಷರಶಃ ಪಾಲಿಸುತ್ತಿರುವಾತ ಕೊಪ್ಪಳದ ಡಿಹೆಚ್‌ಓ ಶ್ರೀಕಾಂತ್ ಬಾಸೂರು.

ಕೊಪ್ಪಳ ಜಿಲ್ಲೆಯಲ್ಲಿ ಗುತ್ತಿಗೆ ಆಧಾರದ ಮೇಲೆ 39 ಆಯುಷ್ಯ ವೈದ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ನಿಯಮಗಳ ಪ್ರಕಾರ ಅವರೆಲ್ಲ ಗ್ರಾಮಗಳ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿಯೇ ಕೆಲಸ ಮಾಡಬೇಕು ಮತ್ತು ಕೆಲಸ ಮಾಡುವ ಕೇಂದ್ರ ಸ್ಥಾನದಲ್ಲಿಯೇ ವಾಸಿಸುತ್ತಿರಬೇಕು.

ಆದರೆ ಈ 39 ಜನರಲ್ಲಿ 7 ಜನ ಬಿಟ್ಟರೆ ಉಳಿದವರೆಲ್ಲ ತಮ್ಮ ಕೇಂದ್ರ ಸ್ಥಾನಗಳಲ್ಲಿ ವಾಸಿಸುತ್ತಿಲ್ಲ. ಇದು ಶ್ರೀಕಾಂತ ಬಾಸೂರುಗೂ ಗೊತ್ತು; ಆದರೆ ಶಿವಾನಂದ ಹೈದೂರ ಎನ್ನುವವರು ಈ ಬಗ್ಗೆ ವಿಚಾರಿಸಿ ಅಟಕಾಯಿಸಿದಾಗ ಬಾಸೂರು ಅಬ್ಬರಿಸುತ್ತ ಅವರಿಗೆಲ್ಲ ನೋಟೀಸ್ ನೀಡಿದರು. ಆದರೆ ಅಸಲಿ ವಿಷಯ ಯಾವುದೆಂದರೆ ಇದೇ ಬಾಸೂರುಗೂ ಆತನ ಕೊಪ್ಪಳದ ಕಚೇರಿ ಬಳಿಯೇ ಸರ್ಕಾರಿ ಮನೆ ನೀಡಲಾಗಿದ್ದರೂ, ಆತ ಗಂಗಾವತಿಯಲ್ಲಿ ಮನೆ ಮಾಡಿಕೊಂಡು, ಅಲ್ಲಿಯೇ ಖಾಸಗಿ ಆಸ್ಪತ್ರೆಯನ್ನೂ ತೆರೆದು ನಿತ್ಯ ಗಂಗಾವತಿಯಿಂದ ಕೊಪ್ಪಳಕ್ಕೆ ಓಡಾಡುತ್ತಿದ್ದಾರೆ.

ಕೇಂದ್ರ ಸರ್ಕಾರ ತೈಲ ಬೆಲೆಯನ್ನು ಏರಿಸಿರುವುದರಿಂದ ಈಗ ಆತನ ವಾಹನದ ಖರ್ಚೇ ಬೇಕಾಬಿಟ್ಟಿ ಬರುತ್ತದೆ. ಈತನನ್ನು ಪ್ರತಿ ದಿನ ಗಂಗಾವತಿಯಿಂದ ಕೊಪ್ಪಳಕ್ಕೆ ಕರೆದುಕೊಂಡು ಬಂದು ಮತ್ತೆ ಗಂಗಾವತಿಗೆ ಉದುರಿಸುವುದರ ಓಡಾಟವೇ ದಿನಕ್ಕೆ 160 ಕಿ.ಮೀ. ಆಗುತ್ತದೆ. ಇನ್ನು ಹಳ್ಳಿಗಳ ವಿಸಿಟ್ ಅಂತ ಹೋದರೆ ಅದು ಇನ್ನೆಷ್ಟು ಕಿ.ಮೀ. ಆಗಬಹುದು? ಇತರರಿಗೆ ನೋಟೀಸ್ ಜಾರಿ ಮಾಡಿರುವ ಬಾಸೂರು ಆ ಎಲ್ಲ ವೈದ್ಯರು ತಮ್ಮ ಕೇಂದ್ರ ಸ್ಥಾನದಲ್ಲಿ ವಾಸಿಸುವಂತೆ ಮಾಡಿ, ತಾನು ಕೂಡ ಕೊಪ್ಪಳದಲ್ಲಿ ವಾಸಿಸಲಿ. ಇಲ್ಲದಿದ್ದರೆ ಶಾಸ್ತ್ರ ಹೇಳೋದಕ್ಕೆ, ಬದನೆಕಾಯಿ ತಿನ್ನೋದಕ್ಕೆ ಎಂಬಂತಾಗುತ್ತದೆ.

ಅಷ್ಟೇ ಅಲ್ಲದೆ, ತನ್ನ ಅಧೀನ ಸಿಬ್ಬಂದಿಗಳು ಸಂಬಳಕ್ಕಾಗಿ ಹಿರಿಯ ಅಧಿಕಾರಿಗಳಿಗೆ ಲಂಚ ಕೊಡಬೇಕಾದ ಸಿಸ್ಟಂ ಕೂಡ ಬಾಸೂರುರವರ ಕಚೇರಿಯಲ್ಲೇ ಇದೆ. ಬರೀ ಚೇಂಬರಲ್ಲಿ ಕುಳಿತರೆ ಸಾಲದು, ತಮ್ಮ ಕಚೇರಿಯಲ್ಲಿನ ಅವ್ಯವಸ್ಥೆಯತ್ತ ಕೂಡ ಆತ ಕಣ್ಣಾಡಿಸಬೇಕಿದೆ

ಪಟ್ಟಕ್ಕೆ ಮುನ್ನ 'ಮಹರಾಜ್' ಪದಚ್ಯುತಿ?

ಇಸ್ರೇಲ್, ಪ್ಯಾಲೇಸ್ಟೀನ್ ತರಹ ತಮ್ಮೊಂದಿಗೆ ತಾವೇ ಜಗಳವಾಡಿ ಮೊನ್ನೆಯ ಚುನಾವಣೆಯಲ್ಲಿ ಸೋತು ಸುಣ್ಣವಾಗಿರುವ ಕೊಪ್ಪಳ ಜಿಲ್ಲೆಯ ಕಾಂಗ್ರೆಸ್‌ನ ಎರಡೂ ಬಣಗಳು ಈಗ ತಮ್ಮ ಆಂತರಿಕ ಜಗಳದ ಎರಡನೇ ಇನಿಂಗ್ಸ್ ಪ್ರಾರಂಭಿಸುವ ಸೂಚನೆಗಳು ಎದ್ದು ಕಾಣುತ್ತಿವೆ. ಅದಕ್ಕೆ ಕಾರಣ ಕೊಪ್ಪಳ ಡಿಸಿಸಿ ಅಧ್ಯಕ್ಷರಾಗಿ ಶಾಂತಣ್ಣ ಮುದಗಲ್ ನೇಮಕವಾಗಿದ್ದಾರೆ ಎಂಬ ವದಂತಿ.



ಕೊಪ್ಪಳ ಜಿಲ್ಲೆಯಾದ ಮೇಲೆ ಎರಡು ಅವಧಿಗೆ ರಾಮುಲು ಪುತ್ರ ಶ್ರೀನಾಥನೆ ಅಧ್ಯಕ್ಷನಾಗಿದ್ದರೆ, ಮೂರನೆ ಅವಧಿಗೆ ಈಗ ಬಿಜೆಪಿ ಸೇರಿರುವ ಲಲಿತಾರಾಣಿ ಅಧ್ಯಕ್ಷರಾಗಿದ್ದರು. ಅಂದರೆ ಮೂರು ಅವಧಿಗಳಿಗೂ ಹಿಂದುಳಿದ ವರ್ಗದವರೇ – ಅದರಲ್ಲೂ ಗಂಗಾವತಿಯವರೇ – ಅಧ್ಯಕ್ಷರಾಗಿದ್ದರೆಂಬ ಅಪಸ್ವರ ಕೇಳಿಬಂದಿದ್ದರಿಂದ ಈ ಬಾರಿ ಕೊಪ್ಪಳದಿಂದ ಮೈನಾರಿಟಿ ಕೋಟಾದಲ್ಲಿ ಆಸೀಫ್ ಅಲಿ, ಫಾರ್ವರ್ಡ್ ಕೋಟಾದಲ್ಲಿ ಡಾ. ರಾಂಪುರ ಅವರ ಹೆಸರುಗಳನ್ನು ಪ್ರಸ್ತಾಪಿಸಲಾಗಿತ್ತು.

ಇದ್ದದ್ದೇ ಎರಡು ಪ್ರಪೋಸಲ್. ಅದರಲ್ಲೂ ಇತ್ತೀಚೆಗೆ ಡಾ. ರಾಂಪುರ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿಬಿಟ್ಟರು. ಆಗ ಸಹಜವಾಗಿ ಆಸೀಫ್ ಅಲಿಗೆ ಡಿಸಿಸಿ ಪಟ್ಟ ಅಂತ ಲೆಕ್ಕಹಾಕಿತ್ತು ಹೆಚ್.ಜಿ.ರಾಮುಲುರವರ ಗ್ಯಾಂಗ್. ಆದರೆ ಅವರ ವಿರೋಧಿ ಎಂ.ಪಿ. ವಿರೂಪಾಕ್ಷಪ್ಪನ ಗ್ಯಾಂಗ್ ಶಾಂತಣ್ಣ ಮುದುಗಲ್ ಎಂಬ ಅಘೋಷಿತ 'ಮಹರಾಜ್'ಗೆ ಡಿಸಿಸಿ ಪಟ್ಟ ಕೊಡಿಸಿದ್ದಾರೆ. ತಮ್ಮದೇ ಪಾರ್ಟಿಯ ವಿರೋಧಿಗಳನ್ನು ಎಲೆಕ್ಷನ್‌ನಲ್ಲಿ ಹಣಿದು ಹಾಕಿದ ಖುಷಿಯಲ್ಲಿದ್ದ ರಾಮುಲು ಗ್ಯಾಂಗ್ ಈಗ ಈ ಮುದಗಲ್ ನೇಮಕದಿಂದ ಕೆಂಡಾಮಂಡಲವಾಗಿದೆ.

ಅಧ್ಯಕ್ಷ ಗಾದಿಗೆ ಈಗ ನೇಮಕಗೊಂಡಿರುವ ಶಾಂತಣ್ಣ ಮುದಗಲ್ ಹೆಸರಿಗೆ ತಕ್ಕಂತೆ ಶಾಂತರೇ. ಆದರೆ ಒಳ್ಳೆಯ ಮಾತುಗಾರರು. ಆಗರ್ಭ ಶ್ರೀಮಂತರಾದರೂ ಎಲ್ಲರನ್ನೂ ಮಹರಾಜ್ ಎಂದೇ ಕರೆಯುವವರು. ಅದಕ್ಕೆ ಪ್ರತಿಯಾಗಿ ಅವರೂ ಮಹಾರಾಜ್ ಎಂದೇ ಕರೆಸಿಕೊಳ್ಳುತ್ತಾರೆ. ಆದರೆ ಸಂಘಟಕರೆಲ್ಲ ಇವರು ಎರಡು ಬಾರಿ ಸೋತಿದ್ದರೂ ಜಿಲ್ಲಾ ಕಾಂಗ್ರೆಸಿನಲ್ಲಿ ಹಿರಿಯರು. ಅವರೀಗ ಮಗನನ್ನು ನೋಡಲು ಅಮೆರಿಕಕ್ಕೆ ಹೋಗಿರುವಾಗಲೇ ಅವರ ನೇಮಕ ನಡೆದಿದೆ. ಅವರು ಬರುವುದು ಜೂನ್ 30ರ ನಂತರ. ಈ ಮಧ್ಯೆ "ನಾವು ಸೋನಿಯಾ ಬಳಿ ಹೋಗಿ ಶಾಂತಣ್ಣ ಮುದಗಲ್‌ನ ನೇಮಕವನ್ನು ತಪ್ಪಿಸುತ್ತೇವೆ" ಎಂದಿದೆ ರಾಮುಲು ಬಣ.

ಆದರಲ್ಲಿ ಅವರು ಯಶಸ್ವಿಯಾದರೆ ಪಟ್ಟಾಭಿಷೇಕದ ಮುನ್ನವೇ ಶಾಂತಣ್ಣ ಮುದಗಲ್ 'ಮಹಾರಾಜ'ರು ಪದಚ್ಯುತಿಗೊಳ್ಳುವ ಅಪಾಯವಿದೆ. ಎಲ್ಲದಕ್ಕೂ ಕಾದು ನೋಡಬೇಕಿದೆ.

ಏನು ಮಾಯವೋ ಏನು ಮರ್ಮವೋ

ಹಿಂದೊಮ್ಮೆ ಪಾಠಮಾಡುವಾಗ ಉಪನ್ಯಾಸಕನೊಬ್ಬ ಇಸ್ಲಾಂ ಧರ್ಮದ ಪ್ರವಾದಿ ಪೈಗಂಬರರು 'ಕೊಳಕು' ಎಂದೆಲ್ಲ ಹೇಳಿ ದೊಡ್ಡ ವಿವಾದವೆಬ್ಬಿಸಿ ಪರಾರಿಯಾಗಿದ್ದ. ಆ ಪ್ರಕರಣದಿಂದಲೇ ಕೊಪ್ಪಳದ ಏಕೈಕ ಗರ್ಲ್ಸ್ ಕಾಲೇಜ್ ಮತ್ತು ಹೈಸ್ಕೂಲ್ ಜಿಲ್ಲೆಯಲ್ಲಿ ಫೇಮಸ್ ಆಗಿತ್ತು.

ಕೊಪ್ಪಳ

ಈಗ ಅದೇ ಸಂಸ್ಥೆಯಲ್ಲಿ ಹತ್ತಾರು ದಿನಗಳ ಹಿಂದೆ ಒಬ್ಬ ಹೈಸ್ಕೂಲ್ ಟೀಚರ್ ಮತ್ತು ಎಇಓ ನಡುವೆ ಮಾರಾಮಾರಿ ನಡೆದು ಮತ್ತೂ ಸುದ್ದಿಯಲ್ಲಿದೆ. ಕೊಪ್ಪಳದ ಹುಡುಗಿಯರ ಪಾಲಿಗೆ ಇವತ್ತಿಗೂ ಸರ್ಕಾರದಿಂದ ಇರೋದು ಇದೊಂದೇ ಹೈಸ್ಕೂಲು, ಇದೊಂದೇ ಕಾಲೇಜ್. ಅದೂ ಪಿಯುಸಿ ತನಕವಷ್ಟೇ. ಸಹಜವಾಗಿಯೇ ಈ ಬಡಿದಾಟದ ಪ್ರಕರಣದಿಂದ ಸಾವಿರಾರು ಪಾಲಕರಲ್ಲಿ ದಿಗಿಲು ಹುಟ್ಟಿದೆ.


ಈ ಕಾಲೇಜಿನಲ್ಲಿರುವ ಕಣವಿ ಎಂಬಾತ ಇತ್ತೀಚೆಗೆ ಎಇಓ ನಾಗರಾಜ ಎಂಬಾತನಿಗೆ ಬಡಿದಿದ್ದು ಶಾಲೆಯ ಹಣಕಾಸಿಗೆ ಸಂಬಂಧಪಟ್ಟಂತೆ. ಈ ಕಣವಿ ಬೇರಾರೂ ಅಲ್ಲ, ಈತ ಕೊಪ್ಪಳದ ಶಾಸಕ ಕರಡಿಯ ಖಾಸಾ ಅಳಿಯನ ತಮ್ಮ. ಅಂದಹಾಗೆ ಈ ಪ್ರಕರಣದ ರೂವಾರಿಗಳಿಬ್ಬರೂ ಲಿಂಗಾಯತರೆ, ಅದರಲ್ಲೂ ಒಂದೇ ಒಳ ಪಂಗಡದವರು!

ಬಲ್ಲ ಮೂಲಗಳ ಪ್ರಕಾರ ವಿದ್ಯಾರ್ಥಿನಿಯರಿಂದ ಪಡೆದ ಫೀ ಹಣವನ್ನು ಕಣವಿ ಶಾಲೆಗೆ ಕೊಟ್ಟೇ ಇಲ್ಲ, ಅದನ್ನು ಪ್ರಶ್ನಿಸಿದ್ದಕ್ಕೆ ಕಣವಿಯಿಂದ ನಾಗರಾಜನಿಗೆ ಫಡಾಫಡಾ ಏಟು. ಪ್ರಕರಣದ ಆಳವನ್ನು ಕೆಣಕಿ ನೋಡಿದರೆ ಏಟು ತಿಂದ ನಾಗರಾಜ ಕೂಡಾ ಸೀನಿಯರ್ ನೌಕರನಲ್ಲ, ಆದ್ದರಿಂದ ಶಾಸಕನ ಸಂಬಂಧಿಯಾದ ಕಣವಿ ವಿರುದ್ಧ ದೂರು ಕೊಡುವ ತಾಕತ್ತು ಆತನಿಗಿಲ್ಲ, ಅದೇನೇ ಇರಲಿ, ಕಣವಿ ಮಾಡಿದ್ದು ಮಾತ್ರ ತಪ್ಪು, ಬಡಿದವನಿಗೆ, ಬಡಿಸಿಕೊಂಡವನಿಗೆ, ಇಬ್ಬರಿಗೂ ಪೊಲೀಸ್ ಠಾಣೆ ಹತ್ತುವ ಧೈರ್ಯವಿಲ್ಲ, ಆದರೆ ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳಲು ಇದು ಬೇರೆಯವರಿಂದ ತಮ್ಮ ಜಾತಿ ಮೇಲಾದ ಹಲ್ಲೆ ಎಂಬಂತೆ ಪ್ರಕರಣವನ್ನು ಚಿತ್ರಿಸಲು ಹೋಗಿ ಬಫೂನ್‌ಗಳಾಗಿದ್ದಾರೆ. ಕೊನೆಗೂ ಈ ಪ್ರಕರಣ ಬಿಇಓ ಬಳಿ ಹೋಗಿದೆ. ಆಗ ತಾನು ಶುದ್ಧ ಮುಗ್ಧ ಎಂದು ಕಣವಿ ಪೋಸ್ ಕೊಟ್ಟಿದ್ದಾನೆ. ಅದಕ್ಕೆ ತಕ್ಕಂತೆ ಬಿಇಓ ಕೂಡ ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಜಡ್ಜ್‌ಮೆಂಟ್ ಕೊಟ್ಟು ಇಬ್ಬರನ್ನು ಕಳಿಸಿದ್ದಾರೆ.

ಈ ಪ್ರಕರಣದ ಎಫೆಕ್ಟ್ ಹೇಗಿದೆಯೆಂದರೆ ಕೊಪ್ಪಳ ತಾಲ್ಲೂಕಿನ ಹೈಸ್ಕೂಲ್ ಶಿಕ್ಷಕರೆಲ್ಲ ಈಗ ಬಂದಿರುವ ಪದವೀಧರ ಶಿಕ್ಷಕರ ಕ್ಷೇತ್ರದ ಚುನಾವಣಾ ಪ್ರಚಾರಕ್ಕೆ ಹೋಗಿಯೇ ಇಲ್ಲ, ಅದು ಜಾತೀಯತೆಯ ಎಫೆಕ್ಟ್ ಕೂಡ ಹೌದು. ಒಟ್ಟನಲ್ಲಿ ಇಡೀ ಪ್ರಕರಣವನ್ನು ರಾಜಕೀಯವಾಗಿ ತಿಪ್ಪೆಸಾರಿಸಲಾಗಿದೆ. ■

▶▶▶ 8ನೇ ಪುಟದಿಂದ

ಪ್ರೀತಿಸಿ ಒಂದಾಗದೇಹೋದರೆ ಅದು ಭಗ್ನಪ್ರೇಮ ಇದು ಶುದ್ಧ ವಿಕೃತಕಾಮ. ಮಹಾಭಾರತದ ಕೀಚಕ ಕೂಡ ಈ ರೀತಿ ಆಸಿಡ್ ಹಾಕುವಷ್ಟು, ಕೊಲ್ಲುವಷ್ಟು ಕ್ರೂರಿಯಾಗಿರಲಿಲ್ಲ, ಇಂಥವರಿಗೆ ಕಣ್ಣಿಗೆ ಬಿದ್ದ ಹೆಂಗಸು ಇಷ್ಟವಾಯಿತೆಂದರೆ ಮುಗಿದೇಹೋಯಿತು. ಆಕೆಗೆ ತಾನು ಇಷ್ಟವಾ? ಆಕೆ ತನ್ನನ್ನು ಪ್ರೀತಿಸುತ್ತಿದ್ದಾಳಾ? ಯಾವುದೂ ಇವರಿಗೆ ಲೆಕ್ಕಕ್ಕಿಲ್ಲ, ತಾನು ಇಷ್ಟಪಟ್ಟ ಮಾತ್ರಕ್ಕೆ ಆಕೆ ತನಗೆ ದಕ್ಕಲೇಬೇಕೆಂದು ಹಠಕ್ಕೆ ಬೀಳುತ್ತಾನೆ. ಶತಗಾಯ ಆಕೆಯ ಮನಸ್ಸನ್ನು ಗೆಲ್ಲಲು ಇಲ್ಲದ ಸರ್ಕಸ್ ಮಾಡುತ್ತಾನೆ. ಇದ್ಯಾವುದಕ್ಕೂ ಆಕೆ ಜಗ್ಗದೇ ಹೋದರೆ 'ನಿನ್ನಿಂದಾಗಿ ನನ್ನ ಲೈಫೇ ಹಾಳಾಗಿ ಹೋಯ್ತು' ಎಂಬ ಭ್ರಮೆಗೆ ಬೀಳುತ್ತಾನೆ.



ಡಿ.ಎಸ್.ಗೌಡ

ಇಂಥದೊಂದು ವಿಕೃತ ಸಿದ್ಧಾಂತವನ್ನು ದೊಡ್ಡಮಟ್ಟದಲ್ಲಿ ಚಾಲ್ತಿಗೆ ತಂದವನು ನಟ ಉಪೇಂದ್ರ. 'ಓಂ' ಚಿತ್ರದಲ್ಲಿ ಹೀರೋ 'ನೀನು ಪ್ರೀತಿಸ್ತೀಯೋ ಇಲ್ಲವೋ ನನಗೆ ಬೇಕಾಗಿಲ್ಲ, ಆದರೆ ನಾನು ಪ್ರೀತಿಸ್ತಿದ್ದೀನಲ್ಲ ಆ ಕಾರಣಕ್ಕಾದರೂ ನನ್ನನ್ನು ನೀನು ಪ್ರೀತಿಸಲೇ ಬೇಕು' ಎಂದು ಹೀರೋಯಿನ್ ಅನ್ನು ಪೀಡಿಸಿದ್ದನ್ನು ಕಂಡ ಪಡ್ಡೆ ಹುಡುಗರೇ ಕ್ರಮೇಣ ಈ ಥರದ ಕೀಚಕರಾದರು. ಇಂಥ ತಲೆಕೆಟ್ಟ ಚಾಳಿಯನ್ನು 'ಪ್ರೀತ್ಸೆ ಪ್ರೀತ್ಸೆ' ಚಿತ್ರದ ಮೂಲಕ ಉಪ್ಪಿ ಮತ್ತಷ್ಟು ಜನಪ್ರಿಯಗೊಳಿಸಿದ.

ಗೌರಿಬಿದನೂರಿನಲ್ಲಿ ಪ್ರೀತಿಸದ ತಪ್ಪಿಗೆ ವರಸೆಯಲ್ಲಿ ತನ್ನ ತಂಗಿಯಾಗಬೇಕಿದ್ದವಳ ರುಂಡವನ್ನೇ ಚೆಂಡಾಡಿದವನು, ಶೃತಿ ಎಂಬ ಬಾಲಕಿಗೆ ಆಸಿಡ್ ಹಾಕಿದವನು ಪೊಲೀಸರಿಗೆ ಕೊಟ್ಟ ಹೇಳಿಕೆಯಲ್ಲಿ ತಾವು ಉಪ್ಪಿ ಚಿತ್ರಗಳಿಂದಲೇ ಪ್ರಭಾವಿತರಾಗಿದ್ದನ್ನು ಸ್ಪಷ್ಟಪಡಿಸಿದ್ದರು. ಶೃತಿ ಮತ್ತು ಹಸೀನಾರಿಗೆ ಆಸಿಡ್ ಹಾಕಿದ್ದಕ್ಕೆ ಅವತ್ತು ಇಡೀ ಬೆಂಗಳೂರೇ ಮರುಗಿತ್ತು, ಕಳೆದ ಮೂರ್‍ನಾಲ್ಕು ವರ್ಷಗಳಿಂದ ಈ ಥರದ ಕೀಚಕ ಪೀಡೆಯ ಬಗ್ಗೆ ವರದಿಗಳಿರಲಿಲ್ಲ, ಆದರೆ ಇದೇ 2008 ರ ಮೇ ತಿಂಗಳಿನಿಂದ ಒಂದರಮೇಲೊಂದಾಗಿ ಇಂಥ ದುರಂತಗಳು ಸಂಭವಿಸತೊಡಗಿವೆ.

ಇದೇ ಮೇ 2 ರಂದು ತಲಘಟ್ಟಪುರ ಪೊಲೀಸ್ ಠಾಣೆ ವ್ಯಾಪ್ತಿಯ ಆವಲಹಳ್ಳಿಯ ಮದೀನಾ ಹೋಟೆಲಿನ ಅಡುಗೆಯವನಾದ ಅಲ್ಲಾಬಕಾಷ್ ತನ್ನನ್ನು ಪ್ರೀತಿಸಲಿಲ್ಲ ಎಂದು ಪಕ್ಕದ ಮನೆಯ ಬಾಲಕಿ ರಹೀನಾಳನ್ನು ಕೊಂದ ಘಟನೆ ಇದಕ್ಕೆ ನಾಂದಿಯಾದರೆ, ಈಗ ಶಿವಾನಂದನಿಂದ ಬಚಾವಾಗಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸಾವು ಬದುಕಿನ ಮಧ್ಯೆ ಸೆಣಸುತ್ತಿರುವ ರೂಪಾ ಇಂಥ ಪಿಡುಗಿನ ಲೇಟೆಸ್ಟ್ ಉದಾಹರಣೆಯಂತಿದ್ದಾಳೆ.

ಹಸೀನಾ ಮತ್ತು ಶೃತಿಯರ ದುರಂತದೊಂದಿಗೆ ಸ್ಥಗಿತಗೊಂಡಿದ್ದ ಕೀಚಕ ಸಿಂಡ್ರೋಮ್ ಮತ್ತೆ ಹೆಡೆಯೆತ್ತಿದೆ. ಯಾವ ಕಾರಣಕ್ಕೋ, ಯಾವ ಕೆಡುಕಿಗೋ ಗೊತ್ತಿಲ್ಲ. ಹೆಣ್ಣುಮಕ್ಕಳ ಪಾಲಿಗೆ ಇನ್ನೆಂಥ ಆಪತ್ತು ಕಾದಿದೆಯೋ? ■

ಬಂಗಾರದಂಗಡಿಯ ಕುರ್ಡೇಕರ್‌ನಿಂದ ಸರ್ಕಾರಿ ಜಾಗ ಸ್ವಾಹಾ!

ಉತ್ತರ ಕನ್ನಡದ ಹಿರೇಗುತ್ತಿಯಿಂದ ಬರಿಗೈಯಲ್ಲಿ ಬಂದಿದ್ದ ನಾರಾಯಣ ಸೋಮಯ್ಯ ಕುರ್ಡೇಕರ್ ಇವೊತ್ತು ಬರೋಬ್ಬರಿ ಇಪ್ಪತ್ತೈದು ಕೋಟಿ ತೂಗುತ್ತಾನೆ. ದೋ ನಂಬರ್ ದಂಧೆ, ಬಂಗಾರ ಕಳ್ಳತನ ಮತ್ತೀಗ ಸರ್ಕಾರಿ ಭೂಮಿ ಸ್ವಾಹಾದಂತಹ ಪವಿತ್ರ ಕೆಲಸಗಳೇ ಇವನ ಯಶಸ್ಸಿನ ಹಿಂದಿರುವ ಗುಟ್ಟು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.







ಕುರ್ಡೇಕರ್ ಹುಬ್ಬಳ್ಳಿಗೆ ಕಾಲಿರಿಸಿದ ಪ್ರಾರಂಭದಲ್ಲಿ ಹಳೇಹುಬ್ಬಳ್ಳಿಯ ಸರ್ಕಲ್ ಹತ್ತಿರದ ಬಸ್‌ಸ್ಟ್ಯಾಪ್ ಹಿಂಬದಿಯಲ್ಲಿ ಒಂದು ಚಿಕ್ಕ ಬಂಗಾರದಂಗಡಿ ತೆರೆದು ವ್ಯಾಪಾರ ಶುರು ಮಾಡಿಕೊಂಡಿದ್ದ. ಜನ ಆಭರಣ ಮಾಡಿಸಲು ಇವನಿಗೆ ಬಂಗಾರ ತಂದುಕೊಟ್ಟರೆ ಅದರಲ್ಲಿ ಗೋಲ್‌ಮಾಲ್ ಮಾಡಿ ಜನರಿಗೆ ಟೋಪಿ ಹಾಕಲು ಶುರುಮಾಡಿದ. [illegible] ಈ ಕಸುಬು [illegible] ಏನೋ, ನಂತರದ ದಿನಗಳಲ್ಲಿ ದೋ ನಂಬರ್ ಬಂಗಾರ ಖರೀದಿಯಂತಹ ದಂಧೆಗಿಳಿದ. ಇಷ್ಟು ಹೊತ್ತಿಗಾಗಲೇ ಮಕ್ಕಳು ದೊಡ್ಡವಾಗಿದ್ದವು. ತನ್ನ ಕಳ್ಳದಂಧೆಯಿಂದ ಬಂದಿದ್ದ ಹಣದಲ್ಲಿ ಮತ್ತೆ ಎರಡು ಕಡೆ ಬಂಗಾರದಂಗಡಿ ತೆರೆದು ತನ್ನ ಮಕ್ಕಳನ್ನು ಅಲ್ಲಿ ಕೂರಿಸಿದ.

ಈಗ ಅದೆಲ್ಲ ಸಾಲದೆಂಬಂತೆ ಸರ್ಕಾರಿ ಭೂಮಿಯನ್ನು ಗುಳುಂ ಮಾಡುವ ಕಾಯಕದಲ್ಲಿ ಕುರ್ಡೇಕರ್ ತೊಡಗಿಕೊಂಡಿದ್ದಾನೆ. ಹುಬ್ಬಳ್ಳಿಯ ಗೋಕುಲ್ ರಸ್ತೆಯ ಮಂಜುನಾಥ ನಗರದ ಕೃಷ್ಣಾಪೂರದ ಸರ್ವೇ ನಂ. 99/1 ಬಿ/1 ರಲ್ಲಿನ ನಾಲ್ಕು ಎಕರೆ 6 ಗುಂಟೆ ಸರ್ಕಾರಿ ಜಾಗವನ್ನು ಈತ ಸರ್ವೇ ನಂ 99 ಬಿ ಎಂದು ಬದಲಾಯಿಸಿ ಗುಳುಂ ಮಾಡಿಕೊಂಡಿದ್ದಾನೆ. ಅದರಲ್ಲಿ 42 ನಿವೇಶನ ಮಾಡಿ ಮಾರಿಯೂ ಬಿಟ್ಟಿದ್ದಾನೆ. ಇದೊಂದೇ ಗೋಲ್‌ಮಾಲ್‌ನಲ್ಲಿ ಕುರ್ಡೇಕರ್‌ಗೆ ಏನಿಲ್ಲವೆಂದರೂ ಇಷ್ಟತ್ತು ಕೋಟಿ ಜೇಬಿಗಿಳಿಸಿದ್ದಾನೆ!

ಪಹಣಿ ಪತ್ರಿಕೆಯಲ್ಲಿ ಈ ಜಾಗೆಯ ಕಬ್ಜೆದಾರರ ಹೆಸರು ಸರ್ಕಾರ ಎಂದಿದ್ದರೂ ಗ್ರಾಮ ಲೆಕ್ಕಿಗರಿಂದ ಹಿಡಿದು ತಹಶೀಲ್ದಾರರ ತನಕ ಎಲ್ಲರ ಜೇಬನ್ನೂ ಬಿಸಿ ಮಾಡಿ ಈ ಜಾಗಕ್ಕೆ ಎಳ್ಳು ನೀರು ಬಿಡುವಲ್ಲಿ ಕುರ್ಡೇಕರ್ ಯಶಸ್ವಿಯಾಗಿದ್ದಾನೆ.

ಹುಬ್ಬಳ್ಳಿ


ಈ ಗೋಲ್‌ಮಾಲ್ ನಡೆದು ವರ್ಷಗಳೇ ಸಂದಿಹೋಗಿವೆ. ಈಗ್ಗೇ ಆರು ತಿಂಗಳ ಹಿಂದೆಯೇ ಗಜಾನನ ಮಹಾಮಂಡಳದಂತಹ ಕೆಲವು ಸಂಘಟನೆಗಳು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ತಿಳಿಸಿದ್ದರು. ಆದರೆ ಡಿಸಿಯ ಕಿಸೆಯೂ ಬಿಸಿಯಾಗಿತ್ತೆಂದು ಕಾಣುತ್ತೆ, ಆತನೂ ಬಾಯ್ಮುಚ್ಚಿಕೊಂಡು ಕುಳಿತಿದ್ದಾನೆ.

ಕರ್ನಾಟಕ ಗೃಹ ಮಂಡಳಿಗೂ 14 ಲಕ್ಷ ರೂ. ವಂಚನೆ ಮಾಡಿರುವ ನಾರಾಯಣ ಕುರ್ಡೇಕರ್ ರೆಕಾರ್ಡ್ ತಿದ್ದುವುದರಲ್ಲಿ ನಿಸ್ಸೀಮ. ಮಂಜುನಾಥ ನಗರದ ಕೆಎಚ್‌ಬಿ ಎರಡನೇ ಹಂತದಲ್ಲಿ ಇರುವ 144/1 ನಂಬರಿನ ಮನೆ ಪರಮೇಶ್ವರ ದೊಡ್ಡದ್ಯಾವಳ್ಳಿಯವರಿಗೆ ಸೇರಿದೆ. ಇದರ ಹಿಂಭಾಗದ ಗೋಡೆಗೆ ಹೊಂದಿಕೊಂಡಂತೆಯೇ ಅನಧಿಕೃತವಾಗಿ ಕಲ್ಯಾಣಮಂಟಪ, ದೇವಸ್ಥಾನಗಳನ್ನು ಕುರ್ಡೇಕರ್ ಕಟ್ಟಿದ್ದಾನೆ. ಇವುಗಳನ್ನು ನಿರ್ಮಾಣ ಮಾಡುವುದಕ್ಕೆ ಪಾಲಿಕೆಯಿಂದಾಗಲೀ, ಪ್ರಾಧಿಕಾರದಿಂದಾಗಲೀ ಅನುಮತಿಯನ್ನು ಪಡೆದಿಲ್ಲವೆಂಬುದನ್ನು ಅವೆರಡೂ ಸ್ಪಷ್ಟಪಡಿಸಿವೆ. ಇವುಗಳನ್ನು ಕೆಡವಿ ಹಾಕಲು ಈ ಹಿಂದಿನ ಆಯುಕ್ತ ಮಣಿವಣ್ಣನ್ ಆದೇಶಿಸಿದ್ದರೂ ಈತನಕ ಏನೂ ಆಗಿಲ್ಲ.

ಮಂಜುನಾಥ ನಗರ ಮುಖ್ಯ ರಸ್ತೆಯಲ್ಲಿರುವ ಕುರ್ಡೇಕರ್‌ನ ಅಂಗಡಿ ಹಾಗೂ ಕಾಂಪ್ಲೆಕ್ಸ್‌ಗಳೆರಡಕ್ಕೂ ಕಟ್ಟಡ ಪರವಾನಗಿ ಮತ್ತು ಸಿಸಿ ಪಡೆದಿಲ್ಲ. ಇವುಗಳನ್ನು ಕೆಡವಲೂ ಆದೇಶವಿದೆ.

ಕುರ್ಡೇಕರ್ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸ್ಟಾಫ್ ಅಂಡ ವರ್ಕರ್ಸ್ ಯೂನಿಯನ್ನಿನ ಪದಾಧಿಕಾರಿ ಬೇರೆ. ಇದರ ಅಧ್ಯಕ್ಷ ಬಿಜೆಪಿಯ ಪಾಲಿಕೆ ಸದಸ್ಯ ಜಾಧವ್. ಇಂತಹ ಜೋಡಿಯಿದ್ದರೆ ಸರ್ಕಾರಿ ಭೂಮಿ ಗುಳುಂ ಮಾಡುವುದು ಎಷ್ಟು ಹೊತ್ತು ಹೇಳಿ? ಇವರಿಬ್ಬರ ಲೂಟಿಗೆ ಸಹಾಯಕ ಇಂಜಿನಿಯರ್ ಹೂಗಾರ್ ಬೇರೆ ಸಾಥ್ ನೀಡುತ್ತಿದ್ದಾನೆ. ಎಲ್ಲಿಯತನಕ ಈ ತಿಮಿಂಗಿಲಗಳಿರುತ್ತಾರೋ ಅಲ್ಲಿಯತನಕ ಸರ್ಕಾರಿ ಜಾಗ ಗುಳುಂ ಆಗುತ್ತಲೇ ಇರುತ್ತದೆ.

■ ಹುಬ್ಬಳ್ಳಿಯಾಂವ



ಹೊಸ ಸರಕಾರ ಹಳೇ ಸಮಸ್ಯೆ

■ ನಗರಗೆರೆ ರಮೇಶ್


ಪ್ರಕ್ಷುಬ್ಧ ಕಾಶ್ಮೀರ

ಭಾಗ 3

> ಫರೂಕ್ ಅಬ್ದುಲ್ಲಾ ಮುಖ್ಯಮಂತ್ರಿಯಾದ ನಂತರವೂ ಅಲ್ಲಿನ ಪೊಲೀಸ್ ಕಾರ್ಯಾಚರಣೆಯ ಮೇಲೆ ಸೈನ್ಯದ ಉಸ್ತುವಾರಿ ಮುಂದುವರೆಯಿತು. ಸೈನಿಕರು ಮಾನವ ಹಕ್ಕುಗಳನ್ನು ಉಲ್ಲಂಘಿಸಿದಾಗಲೂ ಅವರ ವಿರುದ್ಧ ನಿಷ್ಪಕ್ಷಪಾತ ತನಿಖೆಗಳು ನಡೆಯಲಿಲ್ಲ, ಬದಲಾಗಿ ಅವೆಲ್ಲವೂ ಕೇವಲ ಮಿಲಿಟರಿಗೆ ಸಂಬಂಧಪಟ್ಟ ವಿಷಯಗಳೆಂಬಂತೆ ಪರಿಸ್ಥಿತಿ ಮುಂದುವರೆಯಿತು. ಮಿಲಿಟರಿಯ ಸೈನಿಕರ ವಿರುದ್ಧ ಬಂದ ದೂರುಗಳು ಸುಳ್ಳು ಎಂದೇ ವಾದಿಸಲಾಯಿತು.

1996ರ ಸೆಪ್ಟೆಂಬರ್‌ನಲ್ಲಿ ಜಮ್ಮು ಕಾಶ್ಮೀರ ವಿಧಾನ ಸಭೆಗೆ ಚುನಾವಣೆಗಳು ನಡೆದು ನ್ಯಾಷನಲ್ ಕಾನ್ಫರೆನ್ಸ್‌ನ ಫರೂಕ್ ಅಬ್ದುಲ್ಲಾ ಮುಖ್ಯಮಂತ್ರಿಯಾದರು. ಆ ಹಿನ್ನೆಲೆಯಲ್ಲಿ ಜನರ ಅನುಭವಗಳನ್ನು ತಿಳಿಯಲು 1997ರಲ್ಲಿ ಮಾನವ ಹಕ್ಕುಗಳ ಸಂಘಟನೆಗಳ ತಂಡ ಆ ರಾಜ್ಯಕ್ಕೆ ಭೇಟಿ ನೀಡಿತು.

ಈ ಬಾರಿ ಹಿಂದೆಂದಿಗಿಂತಲೂ ಹೆಚ್ಚು ಜನರು ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಮಾತನಾಡಿದರು. ಕಾಂಗ್ರೆಸ್, ನ್ಯಾಷನಲ್ ಕಾನ್ಫರೆನ್ಸ್ ಮತ್ತು ಜನತಾ ದಳದಂಥಾ ರಾಜಕೀಯ ಪಕ್ಷಗಳು ಚುನಾವಣೆ ಸಂದರ್ಭದಲ್ಲಿ ಕಿಡಿಗೇಡಿಗಳ ಮತ್ತು ಸೈನ್ಯದ ಅತಿರೇಕಗಳ ಬಗ್ಗೆ ಮಾತನಾಡಿದ್ದರಿಂದ ಅವರನ್ನೆಲ್ಲ ಹೊಸ ಸರ್ಕಾರ ಹದ್ದುಬಸ್ತಿನಲ್ಲಿಡುತ್ತದೆ ಎಂದು ಜನ ನಿರೀಕ್ಷಿಸಿದ್ದರು. ಆದರೆ ಅಧಿಕಾರಕ್ಕೆ ಬಂದ ಮೇಲೆ ಫರೂಕ್ ಅಬ್ದುಲ್ಲಾರ ವಿಧಾನವೇ ಬೇರೆಯಾಯಿತು. ಕಿಡಿಗೇಡಿಗಳನ್ನು ಪೂರ್ತಿಯಾಗಿ ತೊಲಗಿಸುವ ಬದಲು ಅವರನ್ನೇ ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಲೀನವಾಗಿಸುವ ನಿರ್ಧಾರವನ್ನು ಅವರು ತೆಗೆದುಕೊಂಡರು. ಕೇಂದ್ರ ಸರ್ಕಾರವನ್ನು ಎದುರಿಸಲಾಗದೆ ಅವರು ಈ ಕ್ರಮವನ್ನು ತೆಗೆದುಕೊಂಡಿದ್ದರೆಂಬುದು ಸ್ಪಷ್ಟವಾಗಿತ್ತು, ಹೀಗೆ ಈ ರೆನೆಗೇಡುಗಳಿಗೆ ಕಾನೂನು ರಕ್ಷಣೆ ಸಿಕ್ಕ ಮೇಲಂತೂ



AFP

ಅವರ ಅಟ್ಟಹಾಸ ವಿಪರೀತಕ್ಕೆ ಹೋಯಿತು. ಅಪರಾಧಿ ಚರಿತ್ರೆ ಹೊಂದಿದ್ದ ಈ ರೆನೆಗೇಡುಗಳನ್ನು ಸೈನ್ಯ ಅಥವಾ ಅರೆ ಸೈನಿಕ ಪಡೆಗಳಲ್ಲಿ ಸೇರಿಸಿಕೊಳ್ಳುವ ಯೋಜನೆ ಉನ್ನತ ಮಟ್ಟದ ಸೈನ್ಯಾಧಿಕಾರಿಗಳದ್ದಾಗಿತ್ತು, ಕಾಶ್ಮೀರದಲ್ಲಿನ ವಿಶೇಷ ಪರಿಸ್ಥಿತಿಯಿಂದಾಗಿ ಇಂಥ ಕ್ರಮ ಸರಿ ಎಂಬುದು ಆ ಅಧಿಕಾರಿಗಳ ವಾದ.

ಫರೂಕ್ ಅಬ್ದುಲ್ಲಾ ಮುಖ್ಯಮಂತ್ರಿಯಾದ ನಂತರವೂ ಅಲ್ಲಿನ ಪೊಲೀಸ್ ಕಾರ್ಯಾಚರಣೆಯ ಮೇಲೆ ಸೈನ್ಯದ ಉಸ್ತುವಾರಿ ಮುಂದುವರೆಯಿತು. ಸೈನಿಕರು ಮಾನವ ಹಕ್ಕುಗಳನ್ನು ಉಲ್ಲಂಘಿಸಿದಾಗಲೂ ಅವರ ವಿರುದ್ಧ ನಿಷ್ಪಕ್ಷಪಾತ ತನಿಖೆಗಳು ನಡೆಯಲಿಲ್ಲ, ಬದಲಾಗಿ ಅವೆಲ್ಲವೂ ಕೇವಲ ಮಿಲಿಟರಿಗೆ ಸಂಬಂಧಪಟ್ಟ ವಿಷಯಗಳೆಂಬಂತೆ ಪರಿಸ್ಥಿತಿ ಮುಂದುವರೆಯಿತು. ಮಿಲಿಟರಿಯ ಸೈನಿಕರ ವಿರುದ್ಧ ಬಂದ ದೂರುಗಳು ಸುಳ್ಳು ಎಂದೇ ವಾದಿಸಲಾಯಿತು. ಉದಾಹರಣೆಗೆ 1991 ರಿಂದ 1996 ಅಕ್ಟೋಬರ್ ಮಧ್ಯದವರೆಗೆ 490 ದೂರುಗಳು ಬಂದಿದ್ದು ಅವುಗಳಲ್ಲಿ 482 ಪ್ರಕರಣಗಳಲ್ಲಿ ತನಿಖೆ ನಡೆಯಿತು. ಆದರೆ ಆ ಎಲ್ಲಾ 460 ಪ್ರಕರಣಗಳೂ ಆಧಾರರಹಿತವೆಂದು ಮಿಲಿಟರಿಯೇ ನಿರ್ಧರಿಸಿತು. ಅಧಿಕಾರಕ್ಕೆ ಬರುವ ಮುನ್ನ ಸೈನ್ಯವನ್ನು ವಿಮರ್ಶಿಸಿದ್ದ ಫರೂಕ್ ಅಬ್ದುಲ್ಲಾ ತಾವು ಮುಖ್ಯ ಮಂತ್ರಿಯಾದ ಮೇಲೆ ಚುನಾವಣೆಗಳನ್ನು ಯಶಸ್ವಿಯಾಗಿ ನಡೆಸಿದ್ದಕ್ಕೆ ಅದೇ ಸೈನ್ಯವನ್ನು ಹೊಗಳಿದರು.

ಇಂಥ ಬೆಂಬಲವನ್ನು ಪಡೆದ ಸೈನ್ಯ ತನ್ನ ಹಲವು ಸೈನಿಕರು ಅಪರಾಧಿಗಳೆಂದು ನಿರ್ಧರಿಸಿದಾಗಲೂ ಅವರಿಗೆ ಕೊಟ್ಟ ಶಿಕ್ಷೆಯ ಪ್ರಮಾಣ ತುಂಬಾ ಕಡಿಮೆ ಇರುವಂತೆ ನೋಡಿಕೊಂಡಿತು. ಒಂದು ಉದಾಹರಣೆ ನೀಡುವುದಾದರೆ, ಕೊಲೆ ಮಾಡಿದ ಸೈನ್ಯಾಧಿಕಾರಿಗೆ ಕೊಡುವ ಶಿಕ್ಷೆ ಮೂರು ವರ್ಷ ಮಾತ್ರ.

ಸೈನ್ಯದ ಲೆಕ್ಕಾಚಾರದ ಪ್ರಕಾರವೇ ಜಮ್ಮು ಕಾಶ್ಮೀರದಲ್ಲಿನ ಹೋರಾಟಗಾರರ ಸಂಖ್ಯೆ 3ರಿಂದ 4 ಸಾವಿರ. ಆ ಸಂಖ್ಯೆಯ ವಿರುದ್ಧದ ಕಾರ್ಯಾಚರಣೆಗೆ 60 ಸಾವಿರ ಭಾರತದ ಸೈನಿಕರಿದ್ದರಲ್ಲದೆ, ಅವರ ಜೊತೆಗೆ ಸಿಆರ್‌ಪಿಎಫ್, ಬಿಎಸ್‌ಎಫ್, ಮತ್ತಿತರ ಅರೆ ಸೈನಿಕ ಪಡೆಗಳೂ ಇದ್ದವು. ಇವರೆಲ್ಲರ ಕಾರ್ಯಾಚರಣೆ ಕೇವಲ ಬಂದೂಕ ಹಿಡಿದ ಹೋರಾಟಗಾರರ ವಿರುದ್ಧ ಮಾತ್ರವಾಗಿರದೇ ಸರ್ಕಾರವನ್ನಾಗಲೀ, ಆದರ ನೀತಿ ನಿಯಮಗಳನ್ನಾಗಲೀ ವಿಮರ್ಶಿಸುವವರ ವಿರುದ್ಧವೂ ಇತ್ತು, ಮಾತ್ರವಲ್ಲ, ತಮಗೆ ಅನುಮಾನ ಬಂದವರ ಮೇಲೆಯೂ ಸೈನ್ಯವು ಕ್ರಮ ತೆಗೆದುಕೊಳ್ಳುತ್ತಿತ್ತು.

ಸೈನ್ಯದ ಮತ್ತು ಹೋರಾಟಗಾರರ ಕೃತ್ಯಗಳಲ್ಲಿ ಪ್ರಾಣ ನಷ್ಟದ ಜೊತೆಗೆ ಹೆಚ್ಚಾಗಿ ಆಸ್ತಿ ಪಾಸ್ತಿಗಳ ನಷ್ಟವೂ ನಡೆಯುತ್ತದೆ. ಆಸ್ಪತ್ರೆಗಳು, ಶಾಲೆಗಳು, ಸಾರ್ವಜನಿಕ ಕಟ್ಟಡಗಳು ಧ್ವಂಸವಾಗುತ್ತವೆ. 1996 ಅಕ್ಟೋಬರ್ 29ರ ಹೊತ್ತಿಗೆ ಒಟ್ಟು 4,018 ಇಂಥ ಘಟನೆಗಳು ಸಂಭವಿಸಿ, 11,528 ಕಟ್ಟಡಗಳು ನಾಶವಾದವು. ಇದಕ್ಕೆ ಸೈನ್ಯ ಹಾಗೂ ಹೋರಾಟಗಾರರು, ಇಬ್ಬರೂ ಕಾರಣೀಭೂತರಾಗಿದ್ದಾರೆ.

ಹಲವು ಬಾರಿ ಕೆಲ ಸಂಶಯಗಳ ಮೇಲೆ, ಕೆಲ ಬಾರಿ ಯಾವ ಕಾರಣವೂ ಇಲ್ಲದೆ ಸೈನ್ಯದ ಬಂಧನಕ್ಕೊಳಗಾದವರು ಅನಂತರ ಹೆಣಗಳಾಗಿ ಕಾಣಿಸಿಕೊಂಡದ್ದಕ್ಕೆ ಅಥವಾ ಸುಳಿವಿಲ್ಲದಂತೆ ನಾಪತ್ತೆಯಾಗಿದ್ದಕ್ಕೆ ನೂರಾರು ಉದಾಹರಣೆಗಳೂ ಸಿಗುತ್ತವೆ. ಆದರೆ ಇಂತಹ ಕೃತ್ಯಗಳಿಗೆ ಕಾರಣರಾದ ಸೈನಿಕರು ಅಥವಾ ಪೊಲೀಸ್ ಅಧಿಕಾರಿಗಳು ಮಾತ್ರ ಸುಲಭವಾಗಿ ಸಿಗುವುದಿಲ್ಲ, ಕೆಲವೊಮ್ಮೆ ಅಂತಹವರನ್ನು ಬಂಧಿಸಲು ನ್ಯಾಯಾಲಯದ ಆಜ್ಞೆ ಇದ್ದಾಗಲೂ ಅವರನ್ನು ಬಂಧಿಸಿಲ್ಲ, ಅಥವಾ ಆಜ್ಞೆಯ ವಿರುದ್ಧ ಅಂಥ ಅಪರಾಧಗಳನ್ನು ಎಸಗಿದ್ದ ಬಂಧಿತರನ್ನು ಬಿಡುಗಡೆ ಮಾಡಿದ ಪ್ರಕರಣಗಳೂ ಹೇರಳವಾಗಿ ಸಿಗುತ್ತವೆ.


ಈ ಮಧ್ಯೆ ನಿರಪರಾಧಿಗಳನ್ನು ಬಿಡುಗಡೆ ಮಾಡಬೇಕೆಂದು ನ್ಯಾಯಾಲಯಗಳು ಆಜ್ಞೆ ಮಾಡಿದ್ದರೂ ಅಂಥವನ್ನು ಬಿಡುಗಡೆಗೊಳಿಸಿಲ್ಲ. ಅದಕ್ಕೆ ಉದಾಹರಣೆ ಫರೂಕ್ ಅಹಮ್ಮದ್ ಖಾನ್. 1989-90ರಲ್ಲಿ ಬಂಧಿತನಾದ ಫರೂಕ್ ಅಹಮ್ಮದ್ ಖಾನ್‌ನನ್ನು 1997ರವರೆಗೂ ಬಿಡುಗಡೆ ಮಾಡಿರಲಿಲ್ಲ, ನ್ಯಾಯಾಲಯಗಳು ಹಲವು ಬಾರಿ ಅವರನ್ನು ಬಿಡುಗಡೆಗೊಳಿಸಬೇಕೆಂದು ಆದೇಶ ನೀಡಿದ್ದರೂ ಅವರು ಬಿಡುಗಡೆಯಾಗಲೇ ಇಲ್ಲ, ನಂತರವೂ ಬಿಡುಗಡೆಯಾಗುತ್ತಾರೆಂಬ ಖಾತರಿ ಇಲ್ಲ.



ಯುದ್ಧ ವಿರಾಮ-ಮಾತುಕತೆಗಳ ಪ್ರಸ್ತಾಪ

2000ದ ರಂಜಾನ್ ಹಬ್ಬದ ಸಂದರ್ಭದಲ್ಲಿ ಭಾರತ ಸರ್ಕಾರ ತಾನಾಗಿಯೇ ಯುದ್ಧ ವಿರಾಮವನ್ನು ಪ್ರಕಟಿಸಿತಲ್ಲದೆ, ಕೆ.ಸಿ.ಪಂತ್ ಅವರನ್ನು ಕೇಂದ್ರದ ಪ್ರತಿನಿಧಿಯಾಗಿ ಜಮ್ಮು ಕಾಶ್ಮೀರಕ್ಕೆ ಕಳುಹಿಸಿತು. ಈ ಹೊಸ ಬೆಳವಣಿಗೆಗಳನ್ನು ಅಧ್ಯಯನ ಮಾಡಲು 2002ರ ಮೇನಲ್ಲಿ ಮತ್ತೆ ಮಾನವ ಹಕ್ಕುಗಳ ಸಮಿತಿಯೊಂದು ಆ ರಾಜ್ಯಕ್ಕೆ ಭೇಟಿ ನೀಡಿತು.

ಯುದ್ಧ ವಿರಾಮವನ್ನು ಘೋಷಿಸಿದ್ದ ಆಜ್ಞೆಯಲ್ಲಿಯೇ ಹಲವು ಗೊಂದಲಗಳಿದ್ದು ಅವುಗಳನ್ನು ಬೇರೆ ಬೇರೆ ಅಧಿಕಾರ ವರ್ಗದವರು ತಮ್ಮ ಮೂಗಿನ ನೇರಕ್ಕೆ ಅರ್ಥ ಮಾಡಿಕೊಂಡರು. ಈ ಮಧ್ಯೆ ಹೋರಾಟಗಾರರು ಕೂಡ ಸರಕಾರದ ಆ ಪ್ರಕಟಣೆಯನ್ನು ಒಪ್ಪದಿದ್ದುದರಿಂದ ಯುದ್ಧ ವಿರಾಮವೆಂಬುದು ಪೂರ್ತಿಯಾಗಿ ಜಾರಿಗೆ ಬರಲೇ ಇಲ್ಲ, ಇಂಥ ಸಂದರ್ಭದಲ್ಲಿ ತಮಗಾದ ಅನ್ಯಾಯದ ವಿರುದ್ಧ ದನಿಯೆತ್ತಿದ ಜನ ಸೈನ್ಯದ ಬಂದೂಕಿಗೆ ಆಹಾರವಾದ ಪ್ರಕರಣಗಳೂ ನಡೆದುವು. ಇಂಥ ಘಟನೆಗಳ ಬಗ್ಗೆ ಮತ್ತೆ ಸೈನ್ಯವೇ ತನಿಖೆಯನ್ನು ನಡೆಸಿತು. ಆ ತನಿಖೆಗಳ ಪರಿಣಾಮ ಏನಾಗಿತ್ತೆಂಬುದನ್ನು ಯಾರಾದರೂ ಊಹಿಸಬಹುದು. ತಮ್ಮ ಪ್ರಾಣಗಳನ್ನು ಕಾಪಾಡಿಕೊಳ್ಳಲು ಸಾಮಾನ್ಯರನ್ನು ಅಪಾಯಕ್ಕೆ ದೂಡಿದ ಸೈನಿಕರು ಬದುಕುಳಿದ ಸನ್ನಿವೇಶಗಳೂ ಇವೆ. ಈ ಎಲ್ಲ ಪ್ರಕರಣಗಳಲ್ಲಿ ಅಪರಾಧಿ ಸೈನಿಕನಿಗೆ ಶಿಕ್ಷೆಯಾಗುವುದಿರಲಿ, ಯಾವ ತನಿಖೆಯೂ ನಡೆದಿಲ್ಲ.



ಮಾನವ ಹಕ್ಕುಗಳ ಆಯೋಗವೂ ಸೇರಿದಂತೆ ಹಲವು ಸರ್ಕಾರಿ ಕಚೇರಿಗಳಿಗೆ ತಮಗಾದ ಅನ್ಯಾಯದ ಬಗ್ಗೆ ಜನ ದೂರು ನೀಡಿದರೂ ಏನೂ ಪ್ರಯೋಜನವಾಗಿಲ್ಲ, ರಾಜ್ಯ ಮಾನವ ಹಕ್ಕುಗಳ ಆಯೋಗ 1997ರಲ್ಲಿಯೇ ಅಸ್ತಿತ್ವಕ್ಕೆ ಬಂದಿದ್ದರೂ ಅದಕ್ಕೆ ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸುವ ಅನುಕೂಲಗಳನ್ನಾಗಲಿ, ವಾತಾವರಣವನ್ನಾಗಲೀ ನಿರ್ಮಿಸಿಲ್ಲ, ಮುಖ್ಯವಾಗಿ ಈ ಆಯೋಗಕ್ಕೆ ಸೈನ್ಯವು ಯಾವ ಸಹಕಾರವನ್ನು ನೀಡದಿದ್ದುದರಿಂದ ಅದು ನಿರುಪಯುಕ್ತ ಸಂಸ್ಥೆಯಾಗಿದೆ. ತಮ್ಮ ಮೇಲೆ ಯಾರೂ ಅಧಿಕಾರವನ್ನು ಹೊಂದಿಲ್ಲ, ಆದ್ದರಿಂದ ತಮ್ಮ ವಿರುದ್ಧದ ದೂರುಗಳನ್ನು ಯಾರೂ ವಿಚಾರಿಸುವಂತಿಲ್ಲ ಎಂಬ ನಿಲುವು ಭಾರತದ ಸೈನ್ಯದ್ದಾಗಿದೆ.

ಇಂಥ ಅಭದ್ರ ಸ್ಥಿತಿಯು ಮುಖ್ಯವಾಗಿ ಕೆಟ್ಟಪರಿಣಾಮ ಬೀರಿದ್ದು ಶಿಕ್ಷಣ ಕ್ಷೇತ್ರದ ಮೇಲೆ. ಜೀವನಕ್ಕೇ ಖಾತ್ರಿ ಇಲ್ಲದಿರುವಾಗ ಯಾವ ಮನಸ್ಥಿತಿಯಲ್ಲಿ ಅಲ್ಲಿನ ಯುವಕ-ಯುವತಿಯರು ತಮ್ಮ ಓದು ಮುಂದುವರೆಸಲು ಸಾಧ್ಯ? ಒಂದೆಡೆ ಯುವತಿಯರ ಮೇಲೆ ಸೈನ್ಯದಿಂದ ಅತ್ಯಾಚಾರಗಳು ನಡೆಯುತ್ತಿದ್ದರೆ, ಇನ್ನೊಂದೆಡೆ ಸನಾತನವಾದಿಗಳು ಮಹಿಳೆಯರ ಶಿಕ್ಷಣಕ್ಕೆ ಅಡ್ಡಿಯಾಗುತ್ತಿದ್ದಾರೆ. ಇಷ್ಟಾದರೂ ಅಲ್ಲಿನ ಯುವ ಜನತೆ ಶಿಕ್ಷಣದ ಬಗ್ಗೆ ಸಾಕಷ್ಟು ಆಸಕ್ತಿಯನ್ನು ಹೊಂದಿರುವುದು ಅಚ್ಚರಿ ಎಂದೇ ಹೇಳಬಹುದು.

ಯುದ್ಧ ವಿರಾಮ ಪ್ರಕಟವಾದಾಗ ತಮ್ಮ ಸಮಸ್ಯೆಗಳ ಬಗ್ಗೆ ಮುಕ್ತವಾಗಿ ಚರ್ಚೆ ಮಾಡುವ ವಾತಾವರಣವಾದರೂ ಸೃಷ್ಟಿಯಾಗುತ್ತದೆಂಬುದು ಕಾಶ್ಮೀರದ ಜನತೆಯ ನಿರೀಕ್ಷೆಯಾಗಿತ್ತು, ಅವರೇನು ತಕ್ಷಣದಲ್ಲೇ ತಮಗೆ ಸ್ವಾತಂತ್ರ್ಯ ಬೇಕು ಎಂದು ಕೇಳುತ್ತಿರಲಿಲ್ಲ, ತಮ್ಮ ಭವಿಷ್ಯವನ್ನು ಕುರಿತ ಚರ್ಚೆಗಳಲ್ಲಿ ಕೇವಲ ಭಾರತ ಮತ್ತು ಪಾಕಿಸ್ತಾನ ಮಾತ್ರವಲ್ಲ, ಆ ಪ್ರಕ್ರಿಯೆಯಲ್ಲಿ ತಮ್ಮ ಪಾಲುಗೊಳ್ಳುವಿಕೆಯೂ ಮುಖ್ಯವೆಂದು ಅವರು ಬಹಳ ವರ್ಷಗಳಿಂದ ಒತ್ತಿ ಹೇಳುತ್ತಿದ್ದಾರೆ. ಆದರೆ ಅವರ ಪ್ರತಿನಿಧಿ ಯಾರು ಎಂಬುದೇ ಭಾರತ ಮತ್ತು ಪಾಕಿಸ್ತಾನದ ಸರಕಾರಗಳಿಗೆ ಮುಖ್ಯ ಪ್ರಶ್ನೆಯಾಗಿದೆ. ಹುರಿಯತ್ ಕಾನ್ಫರೆನ್ಸ್‌ನ ಒಳಗೆ ಎಷ್ಟೇ ಭಿನ್ನಾಭಿಪ್ರಾಯವಿರಲಿ, ಕಾಶ್ಮೀರದ ಜನರನ್ನು ಸ್ವಲ್ಪ ಮಟ್ಟಿಗಾದರೂ ಪ್ರತಿನಿಧಿಸಬಲ್ಲ ಸಂಘಟನೆಯೆಂದರೆ ಅದೊಂದೇ ಎಂಬುದನ್ನು ಭಾರತ ಹಾಗೂ ಪಾಕಿಸ್ತಾನಗಳೆರಡೂ ಒಪ್ಪಿಕೊಳ್ಳುತ್ತಿಲ್ಲ, ಬದಲಾಗಿ ತಮ್ಮ ಸ್ವಾರ್ಥಕ್ಕಾಗಿ ಕಾಶ್ಮೀರದಲ್ಲಿನ ಸೂಕ್ಷ್ಮ ಪರಿಸ್ಥಿತಿಯನ್ನು ತೋರಿಸಿ ಪ್ರಸ್ತುತ ಯಥಾಸ್ಥಿತಿಯನ್ನು ಮುಂದುವರೆಸಿಕೊಂಡು ಹೋಗುವ ಎಲ್ಲ ಪ್ರಯತ್ನಗಳನ್ನು ಮಾಡಿದ್ದಾವೆ.

2001ರಲ್ಲಿ ನಡೆದ ಆಗ್ರಾ ಮಾತುಕತೆಗಳಿಂದಲೂ ಈ ಪರಿಸ್ಥಿತಿ ಬದಲಾಗಲಿಲ್ಲ, ಈ ಮಧ್ಯೆ ಆ ರಾಜ್ಯದಲ್ಲಿ ಸೈನಿಕರ ಕುಕೃತ್ಯಗಳು, ಹೋರಾಟಗಾರರ ದಾಳಿಗಳು ಎರಡೂ ಮುಂದುವರೆಯುತ್ತಾ ಕೊನೆಗೆ ಯುದ್ಧ ವಿರಾಮವು ತನ್ನೆಲ್ಲ ಅರ್ಥ ಕಳೆದುಕೊಂಡಿತು. ಯುದ್ಧ ವಿರಾಮದ ಪ್ರಥಮ ವಾರ್ಷಿಕದ ಹೊತ್ತಿಗೆ ಪರಿಸ್ಥಿತಿಯು ಪೂರ್ತಿ ವಿರುದ್ಧದ ಲಕ್ಷಣಗಳನ್ನು ಹೊಂದಿತ್ತು.

ಹೊಸ ಸರ್ಕಾರ, ಹಳೆ ವಾಸ್ತವಗಳು

2002ರಲ್ಲಿ ಮತ್ತೆ ಜಮ್ಮು ಕಾಶ್ಮೀರದಲ್ಲಿ ಚುನಾವಣೆಗಳು ನಡೆದು ರಾಜ್ಯದ ಚರಿತ್ರೆಯಲ್ಲಿ ಮೊದಲ ಬಾರಿಗೆ ನ್ಯಾಷನಲ್ ಕಾನ್ಫರೆನ್ಸ್, ಕಾಂಗ್ರೆಸ್ ಮತ್ತು ಪಿಡಿಪಿ ಪಕ್ಷಗಳ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂತು. ಈ ಚುನಾವಣಾ ಪ್ರಕ್ರಿಯೆಯಲ್ಲಿ ಕಣಿವೆಯ ಪ್ರದೇಶದಲ್ಲಿನ ಶೇಕಡ 28 ಜನ ಮಾತ್ರ ಪಾಲ್ಗೊಂಡಿದ್ದರು. ಆದರೆ ರಾಜ್ಯದ ಇತರೆಡೆ ನಡೆದ ಮತದಾನದ ದೊಡ್ಡ ಸಂಖ್ಯೆಯನ್ನು ತೋರಿಸಿ ಈ ವಾಸ್ತವವನ್ನು ಮರೆಮಾಚಲಾಯಿತು.

ರಾಜ್ಯಾದ್ಯಂತ ಹಿಂದಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಈ ಬಾರಿ ಜನರು ಮತದಾನ ಮಾಡಿದ್ದಕ್ಕೆ ಕಾರಣ ಪಿಡಿಪಿಯ ಭಾಗವಹಿಸುವಿಕೆ. ಆ ಪಕ್ಷದ ನಾಯಕಿ ಮೆಹಬೂಬಾ ಮಫ್ತಿ ರಾಜ್ಯದಲ್ಲಿನ ಮಾನವ ಹಕ್ಕು ಉಲ್ಲಂಘನೆಗಳ ಬಗ್ಗೆ ಕಾಳಜಿ ಉಳ್ಳವರಾದ್ದರಿಂದ, ಅವರಿಂದ ನಿರೀಕ್ಷೆಗಳನ್ನಿಟ್ಟುಕೊಂಡು ಜನರು ಆ ಪಕ್ಷ ಭಾಗಿಯಾಗಿದ್ದ ಒಕ್ಕೂಟಕ್ಕೆ ಮತ ಹಾಕಿದರು.

ಕಾಶ್ಮೀರದ ಸಮಸ್ಯೆಯ ಬಗ್ಗೆ ನಡೆಯಬಹುದಾದ ಮಾತುಕತೆಗಳನ್ನು ಕುರಿತು ಅಲ್ಲಿನ ಜನ ದೊಡ್ಡ ಆಶಾಭಾವನೆಯನ್ನು ಹೊಂದಿದ್ದಾರೆ. ಮುಖ್ಯವಾಗಿ ಯಾವಾಗಲೂ ಯುದ್ಧ ವಾತಾವರಣವೇ ಇರುವ ಗಡಿಭಾಗದ ಜನರ ಜೀವನವಂತೂ ಈ ಸಮಸ್ಯೆಯ ಕಾರಣದಿಂದಾಗಿ ಅಭದ್ರಗೊಂಡಿದೆ. ಭಾರತದೊಂದಿಗೆ ಕಾಶ್ಮೀರದ ವಿಲೀನವನ್ನು ಪಾಕಿಸ್ತಾನ ಪ್ರಶ್ನಿಸುತ್ತಿರುವುದರಿಂದ ಉಂಟಾದ ಸಮಸ್ಯೆ ಇದಲ್ಲ, ಬದಲಾಗಿ ಕಾಶ್ಮೀರಿಗಳೇ ಈ ವಿಲೀನವನ್ನು ಪ್ರಶ್ನಿಸುತ್ತಿದ್ದಾರೆ. ಆದರೆ ಅವರ ಬದುಕನ್ನು ಕುರಿತ ಮಾತುಕತೆಗಳು ನಡೆದಾಗಲೆಲ್ಲ ಅವರ ಭಾಗವಹಿಸುವಿಕೆ ಇಲ್ಲದಂತೆ ನೋಡಿಕೊಳ್ಳಲಾಗಿದೆ.

ಇದಕ್ಕೆ ಬೇರೇನೂ ಕಾರಣವಿಲ್ಲ, ಭಾರತ ಮತ್ತು ಪಾಕಿಸ್ತಾನದ ಸರಕಾರಗಳು ಇದನ್ನು ಕಾಶ್ಮೀರಿ ಜನರ ಸಮಸ್ಯೆ ಎಂದು ಪರಿಗಣಿಸದೇ ಅದನ್ನು ಕಾಶ್ಮೀರ್ ಎಂಬ ಭೂಭಾಗದ ಸಮಸ್ಯೆ ಎಂದು ಭಾವಿಸಿರುವುದೇ ಇದೆಲ್ಲಕ್ಕೆ ಮೂಲ ಕಾರಣವಾಗಿದೆ....

(ಮುಂದುವರೆಯುವುದು)

ಅಮೆರಿಕದ ಉಕ್ಕಿನ ರಾಜರು, ಪೆಟ್ರೋಲ್ ದೊರೆಗಳು, ಇಂತಹದ್ದೇ ಇತರೆ ಸಾಮ್ರಾಟರು ಯಾವಾಗಲೂ ನನ್ನ ಕಲ್ಪನಾ ಶಕ್ತಿಯನ್ನು ಪ್ರಚೋದಿಸಿದ್ದಾರೆ. ಅಷ್ಟೊಂದು ಹಣವಂತರಾದ ಆ ಬಲಿಯಾಧೀಶರು ಖಂಡಿತವಾಗಿಯೂ ಇತರೆ ಸಾಮಾನ್ಯ ಮನುಷ್ಯರಂತಿರುವುದಿಲ್ಲ ಎಂಬುದೇ ನನ್ನ ನಂಬಿಕೆ.

ಪ್ರತಿ ಬಲಿಯಾಧೀಶನು ಕನಿಷ್ಠವೆಂದರೂ ಮೂರು ಹೊಟ್ಟೆಗಳನ್ನು ಮತ್ತು ನೂರೈವತ್ತು ಹಲ್ಲುಗಳನ್ನು ಹೊಂದಿರಲೇಬೇಕು ಅಂದುಕೊಂಡಿದ್ದೆ. ಬೆಳಗ್ಗೆ ಆರು ಗಂಟೆಯಿಂದ ಮಧ್ಯರಾತ್ರಿಯವರೆಗೆ ಬಿಡುವಿಲ್ಲದೆ ಆತ ನಿರಂತರವಾಗಿ ತಿನ್ನುತ್ತಿರುತ್ತಾನೆ ಎಂಬುದರ ಬಗ್ಗೆ ನನಗೆ ಯಾವ ಅನುಮಾನವೂ ಇರಲಿಲ್ಲ. ಅದೆಲ್ಲ ಆಹ್ಲಾದಕರ ಭಕ್ಷ್ಯ ಭೋಜ್ಯಗಳಾಗಿರುತ್ತದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ದಿನವಿಡೀ ಹೀಗೆ ಅಗೆದು ಸಂಜೆ ಹೊತ್ತಿಗೆ ಸುಸ್ತಾದಾಗ ಆತ ತಾನು ತಿಂದದ್ದನ್ನೆಲ್ಲ ತನ್ನ ಸೇವಕರು ಜೀರ್ಣಿಸಿಕೊಳ್ಳುವಂತೆ ಆದೇಶಿಸುತ್ತಾನೆ ಎಂದು ಭಾವಿಸಿದ್ದೆ. ಅಷ್ಟೊಂದು ತಿಂದಿದ್ದರಿಂದ ಬೆವರು ಮತ್ತು ಉಸಿರುಗಟ್ಟುವಿಕೆಯಿಂದ ದಣಿದ ಬಲಿಯಾಧೀಶನನ್ನು ಆತನ ಸೇವಕರು ಎತ್ತಿಕೊಂಡು ಹೋಗಿ ಹಾಸಿಗೆಯಲ್ಲಿ ಮಲಗಿಸುತ್ತಾರೆಂದೂ, ಮಾರನೆ ದಿನ ಆತ ಎದ್ದ ಕೂಡಲೇ ಮತ್ತೆ ತಿನ್ನುವ ತನ್ನ ಕಾಯಕವನ್ನು ಪ್ರಾರಂಭಿಸುತ್ತಾನೆಂದೂ ಊಹಿಸಿದ್ದೆ.

ಆದರೆ ಅಂತಹ ಮನುಷ್ಯ ಎಷ್ಟೇ ಕಷ್ಟಪಟ್ಟು ತಿಂದರೂ ಆತನಿಂದ ತನ್ನ ಆಸ್ತಿಯ ಮೇಲಿನ ಬಡ್ಡಿಯ ಅರ್ಧ ಭಾಗವನ್ನೂ ತಿನ್ನುವುದು ಅಸಾಧ್ಯವಿರಬೇಕಲ್ಲವೆ.

ನಿಜ, ಅಂತಹ ಬದುಕು ತುಂಬಾ ಕಷ್ಟಕರ. ಆದರೆ ವಿಧಿ ಇಲ್ಲವಲ್ಲ. ಇತರೆ ಸಾಮಾನ್ಯ ಮನುಷ್ಯರಿಗಿಂತ ಹೆಚ್ಚು ತಿನ್ನಲಾಗದಿದ್ದರೆ ಆತ ಅದೆಂತಹ ಬಲಿಯಾಧೀಶ? ಅಂತಹ ಅದೃಷ್ಟವಂತ ಬಂಗಾರದಿಂದ ಮಾಡಲಾಗಿದ್ದ ಒಳಉಡುಪುಗಳನ್ನು ಧರಿಸುತ್ತಾನೆಂದೂ, ಚಿನ್ನದ ಮೊಳೆ ಹೊಡೆದು ತಯಾರಿಸಿರುವ ಶೂಗಳನ್ನು ಮೆಟ್ಟುತ್ತಾನೆಂದೂ, ತಲೆ ಮೇಲೆ ಹ್ಯಾಟ್ ಬದಲಾಗಿ ವಜ್ರಗಳಿಂದ ಮಾಡಲಾಗಿರುವ ಕಿರೀಟ ಧರಿಸಿರುತ್ತಾನೆಂದೂ ನನ್ನ ಮನಸ್ಸಿನಲ್ಲಿ ಚಿತ್ರಿಸಿಕೊಂಡಿದ್ದೆ. ಆತ ಧರಿಸುವ ಉಡುಪುಗಳು ಕೂಡ ದುಬಾರಿ ರೇಷ್ಮೆಯಿಂದ ಮಾಡಲಾಗಿರುತ್ತದಲ್ಲದೆ ಅದು ಕನಿಷ್ಠ ಐವತ್ತು ಅಡಿ ಉದ್ದವಿದ್ದು ಅದಕ್ಕೆ ಮುನ್ನೂರು ಚಿನ್ನದ ಗುಂಡಿಗಳಿರುತ್ತವೆ. ರಜೆಗೆಂದು ಬೇರೆ ಊರುಗಳಿಗೆ ಹೋದಾಗ ವಿಧಿ ಇಲ್ಲದೆ ಆತ ಒಂದರ ಮೇಲೊಂದರಂತೆ ಆರು ದುಬಾರಿ ಪ್ಯಾಂಟುಗಳನ್ನು ಧರಿಸುತ್ತಾನೆ. ಹೀಗೆ ಬಟ್ಟೆ ಧರಿಸುವುದು ಆರಾಮವಾಗಿರುವುದಿಲ್ಲ. ಆದರೆ ಬಲಿಯಾಧೀಶನಾದವನೊಬ್ಬ ಜಗತ್ತಿನ ಇತರೆ ಸಾಮಾನ್ಯರಂತೆ ಬಟ್ಟೆ ತೊಡುವುದು ಸಾಧ್ಯವಿಲ್ಲವಲ್ಲ.

ಬಲಿಯಾಧೀಶನ ಜೇಬು ಕೂಡ, ನನ್ನ ಭಾವನೆ ಪ್ರಕಾರ, ಎಷ್ಟು ವಿಸ್ತಾರದ್ದಾಗಿರುತ್ತದೆಂದರೆ ಒಂದು ಮಠವನ್ನೋ ಅಥವಾ ಒಂದು ಶಾಸನಸಭೆಯನ್ನೋ ಅದರೊಳಗೆ ಧಾರಾಳವಾಗಿ ಇಡಬಹುದು. ಅಂತಹ ಮನುಷ್ಯನ ಹೊಟ್ಟೆ ಕೂಡ ಒಂದು ಸಮುದ್ರದ ಹಡಗಿನಷ್ಟಿದ್ದು ಅದರ ಉದ್ದ ಮತ್ತು ಅಗಲ ನನ್ನ ಕಲ್ಪನೆಗೆ ಸಿಲುಕದಂತಿದ್ದವು. ಬಲಿಯಾಧೀಶನ ಗಾತ್ರದ ಬಗ್ಗೆ ನನಗೆ ಸ್ಪಷ್ಟ ಚಿತ್ರಣ ಸಿಕ್ಕಿರಲಿಲ್ಲ. ಆದರೂ ಆತ ಮಲಗಿದಾಗ ಆತನ ದೇಹದ ಮೇಲಿನ ರೇಷ್ಮೆ ಹೊದಿಕೆ ನೂರಾರು ಚದುರ ಅಡಿಯಷ್ಟು ದೊಡ್ಡದಿರಬೇಕು ಎಂದುಕೊಂಡಿದ್ದೆ. ಹೌದು, ಆತ ಪ್ರತಿ ಬಾರಿ ಎರಡು ಕೇಜಿಯಷ್ಟು ತಂಬಾಕನ್ನು ತನ್ನ ಬಾಯಿಗೆ ತುರುಕುತ್ತಾನೆ, ಹಾಗೆಯೇ ಒಂದು ಹಿಡಿಯಷ್ಟು ನಶ್ಯವನ್ನು ತನ್ನ ಮೂಗಿನ ಹೊಳ್ಳೆಗೆ ಏರಿಸಿಕೊಳ್ಳುತ್ತಾನೆ ಎಂದುಕೊಂಡೆ. ಹೇಗಿದ್ದರೂ ಆತ ತನ್ನ ಬಲಿಯನ್ನು ಗಟ್ಟಲೆ ಹಣವನ್ನು ಸೂಕ್ತವಾಗಿ ಖರ್ಚು ಮಾಡಬೇಕಲ್ಲಾ?

ಆತನ ಬೆರಳುಗಳಿಗೆ ಮಾಂತ್ರಿಕ ಶಕ್ತಿ ಇದ್ದು ಅವು ಎಲ್ಲಿಯತನಕ ಬೇಕಾದರೂ ಚಾಚುತ್ತವೆ. ನ್ಯೂಯಾರ್ಕಿನ ಬಲಿಯಾಧೀಶನೊಬ್ಬ ಒಂದಿಷ್ಟೂ ಶ್ರಮಪಡದ ತನ್ನ ಕೈಯನ್ನು ಬೆರಿಂಗ್ ಕೊಲ್ಲಿಯ ಮೇಲೆ ಚಾಚಿ, ಅದು ಹೇಗೋ ಸೈಬೀರಿಯಾದತ್ತ ಉರುಳಿದ್ದ ಡಾಲರ್ ಒಂದನ್ನು ಹಿಡಿದು ವಾಪಸ್ಸು ತೆಗೆದುಕೊಂಡ ದೃಶ್ಯವನ್ನು ಕನಸ್ಸಿನಲ್ಲೊಮ್ಮೆ ಕಂಡಿದ್ದೆ.

ವಿಚಿತ್ರವೆಂದರೆ, ಇಂತಹ ದೈತ್ಯಾಕಾರದ ಪ್ರಾಣಿಯ ತಲೆ ಭಾಗದ ಬಗ್ಗೆ ನನ್ನಲ್ಲಿ ಯಾವ ಸ್ಪಷ್ಟ ಚಿತ್ರಣವೂ ಮೂಡಿರಲಿಲ್ಲ. ಎಲ್ಲದರಿಂದಲೂ ಹಣವನ್ನು ಹಿಂಡುವ ಬೃಹದಾಕಾರದ ಮಾಂಸ ಮತ್ತು ಎಲುಬುಗಳನ್ನು ಹೊಂದಿರುವ ಈ ಜೀವಿಗೆ ತಲೆ ಎಂಬುದು ಅನವಶ್ಯಕ ಎಂದು ನನಗನ್ನಿಸಿತು.

ಹೀಗಿರುವಾಗ, ಇಂತಹ ಒಂದು ಉತ್ಪ್ರೇಕ್ಷಿತ ಜೀವಿಯ ಎದುರು ನಾನು ನಿಂತಾಗ, ಆ ಬಲಿಯಾಧೀಶ ಇತರೆ ಮನುಷ್ಯರಿಗಿಂತ ಭಿನ್ನವಾಗಿಲ್ಲ ಎಂದು ಗೊತ್ತಾದಾಗ, ನನಗಾದ ಅಚ್ಚರಿಯನ್ನು ಯಾರು ಊಹಿಸಿಕೊಳ್ಳಲು ಸಾಧ್ಯ? ನನ್ನ ಮುಂದಿನ ಆರಾಮ ಕುರ್ಚಿಯಲ್ಲಿ, ಸಾಮಾನ್ಯ ಗಾತ್ರ ದೇಹದ ಮುಂದೆ ಕಂದು ಬಣ್ಣದ, ಸದೃಢವಾದ ಕೈಗಳನ್ನು ಕಟ್ಟಿಕೊಂಡು ಒಬ್ಬ ಬತ್ತಿದ ಮುದುಕ ಕೂತಿದ್ದ. ಆತನ ಸುಕ್ಕು ಬಿದ್ದಿದ್ದ ಮುಖವನ್ನು ಜೋಪಾನವಾಗಿ ಕ್ಷೌರ ಮಾಡಲಾಗಿತ್ತು. ಜೋತು ಬಿದ್ದಿದ್ದ ಆತನ ಕೆಳಗಿನ ತುಟಿಯ ಅಡಿ ಗಟ್ಟಿಯಾದ ದವಡೆಗಳಿದ್ದವು. ಆ ದವಡೆಯಲ್ಲಿ ಚಿನ್ನದಿಂದ ಲೇಪಿಸಿದ್ದ ಹಲ್ಲುಗಳಿದ್ದವು.

ಆತ ಮಾತನಾಡಿದಾಗ ಸಪಾಟಾಗಿದ್ದ ಕಿರಿದಾದ, ಕಳೆಗುಂದಿದ ಆತನ ಮೇಲ್‌ತುಟಿ ಕಿಂಚಿತ್ತೂ ಅಲ್ಲಾಡುತ್ತಿರಲಿಲ್ಲ. ರೆಪ್ಪೆಗಳಿಲ್ಲದ, ಬಣ್ಣವಿಲ್ಲದ ಕಣ್ಣುಗಳು, ಬೋಳಾಗಿದ್ದ ತಲೆ, ಕೆಂಪು ಮೋರೆ, ಹೊಸದಾಗಿ ಹುಟ್ಟಿರುವ ಕೂಸಿನಂತೆ ಯಾವ ಭಾವನೆಯೂ ಇಲ್ಲದೆ ಇದ್ದಕ್ಕಿದ್ದಂತೆ ಗಂಟಿಕ್ಕುತ್ತಿದ್ದ ಮುಖ. ಈ ಜೀವಿ ಈಗತಾನೆ ತನ್ನ ಬದುಕನ್ನು ಪ್ರಾರಂಭಿಸುತ್ತಿದೆಯೋ ಅಥವಾ ತನ್ನ ಬದುಕಿನ ಅಂತ್ಯದಲ್ಲಿದೆಯೋ?

ಆತನ ಉಡುಪು ಕೂಡ ಸಾಮಾನ್ಯ ಮನುಷ್ಯರಿಗಿಂತ ಭಿನ್ನವಾಗಿರಲಿಲ್ಲ. ಇನ್ನು ಬೆರಳಲ್ಲಿದ್ದ ಉಂಗುರ, ಕೈಯಲ್ಲಿದ್ದ ಗಡಿಯಾರ ಮತ್ತು ಆತನ ಹಲ್ಲುಗಳಲ್ಲಿದ್ದ ಚಿನ್ನ, ಅಷ್ಟೇ ಆತನ ದೇಹದ ಮೇಲಿದ್ದ ಬಂಗಾರ. ಎಲ್ಲವನ್ನು ಒಟ್ಟು ಮಾಡಿದರೆ ಅರ್ಧ ಕೇಜಿಗಿಂತಲೂ ಕಡಿಮೆ! ಆತನ ಚಹರೆ ಹೇಗಿತ್ತೆಂದರೆ ಯೂರೋಪಿನ ಯಾವುದೋ ರಾಜವಂಶದ ಮುದಿ ಸೇವಕನಂತಿದ್ದ.

ಆತ ನನ್ನನ್ನು ಬರಮಾಡಿಕೊಂಡಿದ್ದ ಕೊಠಡಿಯಲ್ಲಿನ ಪೀಠೋಪಕರಣಗಳೂ ಅಷ್ಟೇನು ಭೋಗಾಸಕ್ತತೆಯಿಂದ ಕೂಡಿರುವಂತೆ ಕಾಣಲಿಲ್ಲ. ಅವು ಗಟ್ಟಿಮುಟ್ಟಾಗಿವೆ ಎಂದಷ್ಟೇ ಹೇಳಬಹುದಿತ್ತು. ಆದರೆ ಅವುಗಳ ಗಾತ್ರ ಮತ್ತು ಭಾರವನ್ನು ಕಂಡು ಆಗೀಗ ಈ ಕೊಠಡಿಯೊಳಗೆ ಆನೆಗಳು ಬರಬಹುದೇನೋ ಎಂಬ ಯೋಚನೆ ನನಗರಿವಿಲ್ಲದಂತೆ ನನ್ನ ಮನಸ್ಸನ್ನು ಹಾದು ಹೋಯಿತು.

"ನೀನು ಬಲಿಯಾಧೀಶನೆ?" ಎಂದು ಕೇಳಿದೆ, ನನ್ನ ಕಣ್ಣುಗಳನ್ನು ನಾನೇ ನಂಬಲಾದ್ದರಿಂದ.

"ಹೌದು" ಎಂದು ಆತ, ನನ್ನ ಮನವೊಲಿಸುವಂತೆ ತನ್ನ ತಲೆಯನ್ನು ಅಲ್ಲಾಡಿಸುತ್ತಾ.

"ಬೆಳಗ್ಗಿನ ತಿಂಡಿಗೆ ಎಷ್ಟು ಮಾಂಸವನ್ನು ನಿನ್ನಿಂದ ತಿನ್ನಲಾಗುತ್ತದೆ?"

"ನಾನು ಬೆಳಗ್ಗೆ ಮಾಂಸ ತಿನ್ನುವುದಿಲ್ಲ" ಎಂದ ಆತ. "ಒಂದು ಮೊಟ್ಟೆ, ಕಿತ್ತಲೆ ಹಣ್ಣಿನ ಕಾಲುಭಾಗ, ಒಂದು ಕಪ್ ಟೀ, ಅಷ್ಟೆ...." ಮಕ್ಕಳ ನಿಷ್ಕಳಂಕ ಕಂಗಳಂತಿದ್ದ ಆತನ ಕಣ್ಣುಗಳು ಒಮ್ಮೆ ಮಿಟುಕಿದವು, ಕೊಳಚೆ ನೀರಿನ ಎರಡು ಹನಿಗಳಂತೆ ಬಲಹೀನವಾಗಿ ಹೊಳೆದವು.

ತನ್ನ ಚಿನ್ನದ ಹಲ್ಲುಗಳ ಮೂಲಕ ಸಣ್ಣದಾದ ಶಿಳ್ಳೆ ಹೊರಡಿಸಿದ ಆತ.

"ತಮಾಷೆಯಾಗಿದೆ. ನಿನ್ನ ವರ್ಗದ ಮನುಷ್ಯನನ್ನು ನಾನು ಭೇಟಿ ಆಗುತ್ತಿರುವುದು ಇದೇ ಮೊದಲು."

ತನ್ನ ತಲೆಯನ್ನು ಹಿಂದಕ್ಕೆ ಸರಿಸಿ ನನ್ನನ್ನು ಮೌನವಾಗಿ ಪರೀಕ್ಷಿಸುವಂತೆ ನೋಡಿದ.

"ನಿನ್ನ ಕೆಲಸವೇನು?" ಎಂದು ನಾನು ಮತ್ತೆ ಪ್ರಾರಂಭಿಸಿದೆ.

"ಹಣ ಮಾಡುವುದು."

"ಹಾ, ನೀನೊಬ್ಬ ಖೋಟಾ ಹಣ ತಯಾರಕ" ಎಂದು ಉದಾರವೆತ್ತಿದೆ ನಾನು, ರಹಸ್ಯವೊಂದನ್ನು ಭೇದಿಸಿದ್ದೇನೆಂಬ ಸಂತೋಷದಿಂದ. ಆದರೆ ಅದನ್ನು ಕೇಳಿ ಬಲಿಯಾಧೀಶನಿಗೆ ಕೋಪ ಉಕ್ಕೇರಿ ಬಂತು. ಆತನ ಇಡೀ ದೇಹ ಕಂಪಿಸಿತ್ತು ಕಂಗಳು ಉರುಳಾಡಿದವು.

"ಇದೆಂತಹ ಅಸಂಬದ್ಧತೆ" ಎಂದ ಆತ, ತಾಳ್ಮೆ ಕಂಡುಕೊಂಡ ನಂತರ.

ಸ್ವಲ್ಪ ಹೊತ್ತು ಯೋಚಿಸಿದ ನಾನು ಇನ್ನೊಂದು ಪ್ರಶ್ನೆಯನ್ನು ಆತನ ಮುಂದಿಟ್ಟೆ.

"ನೀನು ನಿನ್ನ ಹಣವನ್ನು ಹೇಗೆ ಸಂಪಾದಿಸುತ್ತೀಯಾ?"

"ಹೋ... ಅದು ತುಂಬಾ ಸರಳ. ನಾನು ರೈಲುಮಾರ್ಗಗಳ ಮಾಲೀಕ. ರೈತರು ಬೆಳೆದದ್ದನ್ನು ನಾನು ಮಾರುಕಟ್ಟೆಗಳಿಗೆ ಸಾಗಿಸುತ್ತೇನೆ. ರೈತ ನಾಳೆ ಬೆಳೆಯುವುದನ್ನೇ ನಿಲ್ಲಿಸದಂತೆ ಆತನಿಗೆ ಎಷ್ಟು ಹಣ ಕೊಡಬೇಕೋ ಅಷ್ಟನ್ನು ಸರಿಯಾಗಿ ಲೆಕ್ಕ ಹಾಕಿ ಕೊಡುತ್ತೇನೆ. ಮಿಕ್ಕಿದ್ದನ್ನೆಲ್ಲ ಸಾಗಣೆ ದರ ಎಂದು ನಾನೇ ಇಟ್ಟುಕೊಳ್ಳುತ್ತೇನೆ. ಅಷ್ಟು ಸರಳ!"

"ಇದರಿಂದ ರೈತರಿಗೆ ನೆಮ್ಮದಿ ಇದೆಯೇ?"

"ಎಲ್ಲರೂ ನೆಮ್ಮದಿಯಿಂದಿಲ್ಲ" ಎಂದು ಭೋಳೆತನದಿಂದ ಉತ್ತರಿಸಿದ ಆತ "ಅವರ ಅದೇನೋ ಹೇಳ್ತಾರಲ್ಲಾ... ಎಲ್ಲರನ್ನೂ ಸಂತೋಷವಾಗಿಡಲು ಸಾಧ್ಯವಿಲ್ಲ ಅಂತ. ಯಾವಾಗಲೂ ಹಲವು ವಿಲಕ್ಷಣ ಜನರು ತಮಗೆ ಇನ್ನೂ ಹೆಚ್ಚು ಹಣಬೇಕು ಎನ್ನುತ್ತಿರುತ್ತಾರೆ"

"ಸರಿ" ಎಂದೆ ತಬ್ಬಿಬ್ಬಾಗಿದ್ದ ನಾನು. "ನೀನು ನನಗೆ ಸತ್ಯ ಹೇಳು. ದಿನಕ್ಕೆ ನೀನು ಎಷ್ಟು ಬಾರಿ ತಿನ್ನುತ್ತೀಯಾ?"

"ಎರಡು ಬಾರಿ" ಎಂದು ಆತ ಶಾಂತಿಯುತವಾಗಿ ಉತ್ತರಿಸಿದ. "ಬೆಳಗ್ಗಿನ ತಿಂಡಿ ಮತ್ತು ರಾತ್ರಿಯ ಊಟ ಮಾತ್ರ ಸಾಕು ನನಗೆ. ಮಧ್ಯಾಹ್ನ ಒಂದು ಬಟ್ಟಲಿನಷ್ಟು ಸೂಪ್, ಒಂದು ಚೂರು ಮಾಂಸ, ಕೆಲ ಹಣ್ಣು ತರಕಾರಿ, ಒಂದು ಕಪ್ ಕಾಫಿ ಮತ್ತು ಒಂದು ಸಿಗಾರ್...."

ನನ್ನ ಅಚ್ಚರಿ ಇಮ್ಮಡಿಯಾಗುತ್ತಲೇ ಹೋಯಿತು. ಆಳವಾಗಿ ಉಸಿರನ್ನು ಎಳೆದುಕೊಂಡು ಮುಂದುವರೆದೆ.

"ಆದರೆ, ನೀನು ಹೇಳುತ್ತಿರುವುದು ನಿಜವೇ ಆಗಿದ್ದರೆ, ಇಷ್ಟೆಲ್ಲ ಹಣ ಇಟ್ಟುಕೊಂಡು ಏನು ಮಾಡುತ್ತೀಯಾ?"

"ಇನ್ನಷ್ಟು ಹಣ ಗಳಿಸುತ್ತೇನೆ."

"ಯಾಕೆ?"

"ಆ ಹಣದಿಂದ ಮತ್ತಷ್ಟು ಹಣ ಗಳಿಸುವುದಕ್ಕೆ."

"ಯಾಕೆ?" ಮತ್ತೆ ಕೇಳಿದೆ.

ನನ್ನತ್ತ ವಾಲಿದ ಆತನ ಮುಖದ ಮೇಲೆ ಸ್ವಲ್ಪ ಕುತೂಹಲ ಭಾವನೆ ಇತ್ತು:

"ನಿನಗೆ ತಲೆ ಕೆಟ್ಟಿದೆಯೇನು?"

"ನಿನಗೆ?" ಎಂದೆ.



ಪ್ರತಿ ಬಿಲಿಯಾಧೀಶನು ಕನಿಷ್ಠವೆಂದರೂ ಮೂರು ಹೊಟ್ಟೆಗಳನ್ನು ಮತ್ತು ನೂರೈವತ್ತು ಹಲ್ಲುಗಳನ್ನು ಹೊಂದಿರಲೇಬೇಕು ಅಂದುಕೊಂಡಿದ್ದೆ. ಬೆಳಗ್ಗೆ ಆರು ಗಂಟೆಯಿಂದ ಮಧ್ಯರಾತ್ರಿಯವರೆಗೆ ಬಿಡುವಿಲ್ಲದೆ ಆತ ನಿರಂತರವಾಗಿ ತಿನ್ನುತ್ತಿರುತ್ತಾನೆ ಎಂಬುದರ ಬಗ್ಗೆ ನನಗೆ ಯಾವ ಅನುಮಾನವೂ ಇರಲಿಲ್ಲ. ಅದೆಲ್ಲ ಆಹ್ಲಾದಕರ ಭಕ್ಷ್ಯ ಭೋಜ್ಯಗಳಾಗಿರುತ್ತದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಬಿಲಿಯಾಧೀಶ

ಕತೆ

ಮೂಲ : ಮಾಕ್ಸಿಂ ಗಾರ್ಕಿ

ಕನ್ನಡಕ್ಕೆ : ಗೌರಿ ಲಂಕೇಶ್

ಕಾಂಗ್ರೆಸ್ಸಿನವ್ರು ತಿರಗ ದ್ಯಾವೇಗೌಡನತ್ರಕ್ಕೋದವಂತೆ

"ಅಂಗೇ ನೋಡಿದ್ರೆ ಈ ಬಿಜೆಪಿಗಳ ಪವರ್ರಿಗೆ ತಂದೋರು ಬಂಗಾರಪ್ಪ, ದ್ಯಾವೇಗೌಡ ಅಂತ ಅನ್ನದಿಲವೇನೊ ಮಾವ" ಎಂದ ಉಗ್ರಿ.

"ಜನಗಳಲವೇನ್ಲ ತಂದಿದ್ದು?"

"ಜನ ತರಂಗೆ ಮಾಡಿದೊರ್ಯಾರೂ ಅಂತ ನಾನೇಳ್ತ ಯಿರದು. ಆ ಬಂಗಾರಪ್ಪ ಹೋಗಿ ಸೀಳುಕ್ಕೆ ಕ್ಯರದ, ದ್ಯಾವೇಗೌಡನ ಮಗ ಮಗಚುಕ್ಕೆ ಕ್ಯರದ, ಬಿಜೆಪಿಗಳು ಬ್ಯಳೆ ಹಾಯ್ಕಂಡ್ರು ಬಂದ್ರು."

"ಇದರಲ್ಲಿ ದ್ಯಾವೇಗೌಡುಂದೇನು ತಪ್ಪಲ್ಲ. ಅವುನಿ

ಬಯಲುಸೀಮೆಯ
ಕಟ್ಟೆಪುರಾಣ
ಬಿ. ಚಂದ್ರೇಗೌಡ

ಲ್ದಾಗ ಅವುನ ಮಗನ ಕುಟ್ಟೆ ಸರಸಹಾದಿ ಬಗೇಸಿಗಂಡೋರು ಬಿಜೆಪಿಗಳೆ ಅಲವೆ?"

"ಬಗೇಸಿಗಂಡ್ರು ಸರಿ ಮಾವ ಅಂತ ಅವುಕಾಸ ಮಾಡಿ ಕೊಟ್ಟೋನು ದ್ಯಾವೇಗೌಡನೆ ಅಲವೆ?"

"ಅದಾಯ್ತಲ್ಲ ಬುಡ್ರ, ಹಳೆ ಸುದ್ದಿ ತಗಂಡೇನು ಮಾಡ್ತಿ" ಎಂದ ಸೀರ.

"ಹಳೆ ಸುದ್ದಿ ಪರಿಣಾಮನೆ ಅಲವೇನೊ ಮಾವ ಈಗ ನ್ಯಡಿತಾಯಿರದು? ದ್ಯಾವೇಗೌಡ ಅವುನ ಮಕ್ಕಳು ಅವತ್ತು ಮರಿಯಾದಿ ರಾಜಕಾರಣ ಮಾಡಿದ್ರೆ ಇವತ್ತು ಬಿಜೆಪಿಗಳು ಈ ಮಟ್ಟಕೆ ಬತ್ತಿದ್ರೆ? ಒಂದೈವತ್ತು ಸೀಟಿಗೆ ನಿಂತೋಗರು. ಇವತ್ತು ನೋಡು ಯ್ಯಂತ್ಯಂತ ಜನ ಮಂತ್ರಿಗಳಾಗ್ಯವುರೆ."

"ಆ ಕಾಂಗ್ರೆಸ್ ಬಡ್ಡೆತ್ತವು ನ್ಯಟ್ಟಗಿದ್ರೆ ಇದ್ಯಲ್ಲ ಯಾಕ್ ನ್ಯಡಿಯದು ಅಂತ?" ಎಂದ ಕಾಳಮಾವ ಪುನಃ ಕಾಂಗ್ರೆಸ್ಸನ್ನೇ ದೂರಿದ.

"ಅವಿರದೆ ಅಂಗಲವೇನೊ ಮಾವ? ಮಾತಾಡ್ತು ಅಂದ್ರೆ ಹೈಕಮಾಂಡು ಅಂತ ಮ್ಯಾಕ್ಕೆ ಕೈ ತೋರತವೆ. ಅಂಗೆ ಮಾಡಿ ಗುಜರಾತ್ ಕಳಕಂಡೋ. ಅದಾದ ಮ್ಯಾಲೂ ಬುದ್ದಿ ಕಲಿದೆ ಕರ್ನಾಟಕನೂ ಕಳಕಂಡೊ. ಅಂತ ಪಾಪು ನನ್ನ ಮಗನವು ಅವು."

"ಗುಜರಾತ್ ಕಳಕಂಡಿದ್ದು ಯಂಗೇ? ಎಂದ ಸೀರ.

"ಅಲ್ಲಿ ಮೋದಿ ಅಂತ ಅವುನೆ. ಇಲ್ಲಿಗೂ ಬಂದಿದ್ದ. ಈ ನಮ್ಮ ಚಿದಾನಂದಮೂರ್ತಿ ಮುಖ್ಯಮಂತ್ರಿಯಾದ್ರೆ ಯಂಗೋ ಅಂಗವುನು."

"ಚಿದಾನಂದಮೂರ್ತಿ ಯಾರ್ಲ?" ಎಂದಳು ಜುಮ್ಮಿ.

"ಅವುನೊಬ್ಬವುನೆ ಕಣೆ, ಇತಿಹಾಸನ್ಯಲ್ಲ ಕೆದಕಿ ಬರಿಯೋ ವಿದ್ವಾಂಸ. ವಳ್ಳೆ ವಿದ್ವಾಂಸನೆಯಾ. ಪಾಪ ಅದ್ಯಾವಾಗ ಆರೆಸ್ಸೆಸ್ ಸೇರಿಕಂಡನೊ ಏನೊ, ಎಲ್ಲೇ ಹೋದ್ರು ಸಾಬ್ರು ಕಂಡ್ರಾಗದಿಲ್ಲ."

"ವಿದ್ವಾಂಸ ಅಂತಿ, ಅದ್ಯಾಕ್ಲ ಅಂಗಾದ?" ಎಂದ ಕಾಳಮಾವ.


"ವಿದ್ವಾಂಸರು ಅಂದ್ರೆ ಅವುರೇನು ಮ್ಯಾಲಿಂದ ಬಂದರೆ ಮಾವ? ಇಲ್ಲೆ ನಮ್ಮ ಜ್ವತೆ ಇದ್ದಕಂಡೆ ಓದಿ ಅಂಗಾಯ್ತರೆ. ಇಲ್ಲೆ ನಮ್ಮ ಕುಳ್ಳಗ್ಯಂಪಣ್ಣೆದ್ದ ನಪ್ಪ, ಇಸುಗೂಲಿಗೂ ಹೋಗಿರಲಿಲ್ಲ, ಅಕ್ಷರನೂ ಕಲ್ತಿರಲಿಲ್ಲ, ಯಬ್ಬೆಟ್ಟೊತ್ತೋನು. ಆದ್ರು ಯಾವುದೇ ಜನ ಕಂಡ್ರು ಯಂಗೆ ಬಾವುಣಸೋನು. ಆದೇ ಈ ಚಿದಾನಂದಮೂರ್ತಿ ಇಡೀ ಕರ್ನಾಟಕದ ಇತಿಹಾಸನೆ ಓದಿ ಮುಗಿಸ್ಯವುನೆ. ಆದ್ರು ಸಾಬ್ರು ಕಂಡ್ರಾಗದಿಲ್ಲ, ದಲಿತ್ರು ಕಂಡ್ರಾಗದಿಲ್ಲ, ಲಿಂಗಾಯಿತ್ರಲೇ ಕೆಲುವು ಪಂಗಡ ಕಂಡ್ರಾಗದಿಲ್ಲ, ಅಂದಮ್ಯಾಲೆ ಇನ್ನ ಸಾಬ್ರು ಸಯಿಸ್ಯನೆ?"

"ಇಲ್ಲ ಬುಡು."

"ಅಂಥೋನು ಮುಖ್ಯಮಂತ್ರಿಯಾದ್ರೆ ಕೇಳಬೇಕೆ, ಸಾಬ್ರು ಉರುದು ಮುಕ್ಕಿಬುಡ್ತನೆ. ಅಂಗೆ ಗುಜರಾತಲ್ಲಿ ಮೋದಿ ಅನ್ನೋನು ಮುಖ್ಯಮಂತ್ರಿಯಾದ. ಹಿಂದೂ ಮುಸ್ಲಿಂ ಗಲಾಟೆ ಹಬ್ಬಿಕತ್ತು, ಇವುನೇನು ಮಾಡಿದ ಅಂದ್ರೇ, ಸರ್ಕಾರದ ಜ್ವತಿಗೆ ಬಿಜೆಪಿ ಭಜರಂಗ ಯಲ್ಲಾರ್ನು ಸೇರಿಸಿ ಸಾಬುರ ಮ್ಯಾಲೆ ಬುಟ್ಟು ಧ್ವಂಸ ಮಾಡಿಬುಟ್ಟ."

"ಅಗೊಳೊ, ಅಂತಾ ಕ್ಯಲಸನೆ ಮಾಡದು?"

"ಗಲಭೆ ಆದಾಗ ಸರ್ಕಾರ ಅದ ತಣ್ಣಗೆ ಮಾಡಬೇಕು. ಆದ್ರೆ ಈ ಮೋದಿ ಹತ್ತಿಗಂಡಿರೊ ಬೆಂಕಿಗೆ ಸೀಮೆಯಣ್ಣೆ, ಪೆಟ್ರೋಲು, ಡಿಜೇಲು ಯಲ್ಲಾನು ಸುರುದು ನಗಾಡ್ತ ಕುಂತಗಂಡ. ಸಾವುರಾರು ಜನ ಸಾಬ್ರು ಸತ್ರು.



ಮಹಜನ ಓಡಿಬಂದು ಸಿಟಿ ಮಾರ್ಕೆಟತ್ರ ಮ್ಯಾಲ್ ಸೇತುವೆ ಹೋಗ್ತದೆ ನೋಡು ಅಲ್ಲಿಗೆ ಬಂದು ಕುಂತವುರೆ" ಎಂದು ಉಗ್ರಿ ಹೇಳುವಾಗ ಲೊಚಗರಿದ ಜುಮ್ಮಿ.

"ಅಯ್ಯೋ ಪಾಪ, ಅಂಗೂ ಮಾಡ್ತರೇನ್ರ?" ಎಂದಳು.

"ಅಂಗೆ ಮಾಡಿದ ಮೋದಿಯ ತಿರಗ ಗೆಲ್ಸಿ ಮುಖ್ಯ ಮಂತ್ರಿ ಮಾಡಿದರಲ್ಲ ಹೇಳು."

"ತಿರಗ ಅವುನ್ನೆ ಗೆಲ್ಸಿದ್ರೆ?"

"ಊ ಕಣೆ, ತಿರುಗ ಮೋದಿನೆ ಗೆದ್ದು ಮುಖ್ಯಮಂತ್ರಿ ಆಗ್ಯವುನೆ."

"ಅದ್ಯಂಗಾದಾ ಅಂತ?"

"ಅದ ನಾನೇಳ್ತಿನಿ ಕಣಕ್ಕ" ಎಂದುಕೊಂಡು ವಾಟಿ ಹಾಜರಾದ.

"ಹೇಳ್ಳ."

"ಸಾಬ್ರು ಅಲ್ಪಸಂಖ್ಯಾತ್ರು, ಹಿಂಧೂಗಳು ಬಹುಸಂಖ್ಯಾತ್ರು. ಆದ್ರಿಂದ ಈ ಮೋದಿ ಹಿಂದೂಗಳ್ನೆಲ್ಲ ಒಂದು ಗುಂಪಾಗಂಗೆ ಮಾಡಿ, ಅವ ಓಟಾಗಿ ಕನ್ವರ್ಟ್ ಮಾಡಿ ಗೆದ್ದ. ಆಗ ಈ ಕಾಂಗ್ರೆಸ್ ಜನ ಮೋದಿ ಎದ್ರಿಗೆ ಒಬ್ಬ ಲೀಡ್ರ ಹುಟ್ಟಾಕಲಿಲ್ಲ. ಮಾತಾಡ್ತು ಅಂದ್ರೆ ಸೋನಿಯಾ ಗಾಂಧಿ, ರಾಹುಲಗಾಂಧಿ, ಮನಮೋಹನ ಸಿಂಗ್, ಹೈಕಮಾಂಡು ಅಂದ್ರು. ದಿಲ್ಲಿಲಿರೊ ಹೈಕಮಾಂಡಿಗೂ, ಗುಜರಾತಿನ ಜನಕೂ ಏನಾರ ಸಮಂದ ಇದ್ದತೇನಕ್ಕ? ಅಂಗಾಗಿ ಮೋದಿ ಎದ್ರಿಗೆ ವೈರಿನೆ ಇಲ್ದಂಗಾಯ್ತು. ಆದ್ರಿಂದ ಜನ ಅವುನ ಪರ ಆದ್ರು, ಗೆದ್ದ. ನೋಡದೇ ಕತೆ ಕರ್ನಾಟಕದಲ್ಲೂ ಆಯ್ತು. ಎಡೂರನೆದ್ರಿಗೆ ಯಾರು ನಾಯಕರೇ ಇರಲಿಲ್ಲ ಕಾಂಗ್ರೆಸ್ಸಿನಲ್ಲಿ. ಅದ್ಕೆ ಜನ ಆಕಡೆ ವಾಲಿದ್ರು, ಅಲವೇನೊ ಉಗ್ರಿ?" ಎಂದ ವಾಟಿಸ್ಸೆ.

"ಕುಮಾರಸ್ವಾಮಿ ಇದ್ನಲ್ಲ?" ಎಂದಳು ಜುಮ್ಮಿ.

"ಕುಮಾರಸ್ವಾಮಿ ಇದ್ರು ಅವುನ ಕತೆ ಆಗ್ಲೆ ಮುಗುದಿತ್ತಲ್ಲಕ್ಕ. ಇಡೀ ಕರ್ನಾಟಕಕ್ಕೆಲ್ಲಿ ಲೀಡ್ರಾಗಿದ್ದ ಅವುನು? ಇದೆಲ್ಲೊ ನಮ್ಮ ಕಡೆ ಪುಲ್ಲುಲ್ಲಿ ಅನ್ನ ಕಂಡು ಓಡಾಡಿ ಸುಮ್ಮನಾದ ಅತ್ತಗೆ. ಅದರಲ್ಲೂ ಅವುರಪ್ಪ ಜನಗಳ ಮುಂದಿಟ್ಟ ಬೇಡಿಕೆ ಇಡೀ ದೇಸದಲ್ಲಿ ಯಾರೂ ಇಟ್ಟಲ್ಲವೇನೊ?"

"ಏನು ಬೇಡಕೆ ಮಡಗಿದ್ದಾ?"

"ನಾನು ಅನಾರೋಗ್ಯ ನಿಮಿತ್ತವಾಗಿ ಹಾಸಿಗೆ ಮೇಲೆ ಮಲಗಿದ್ದೆ. ಅಳಿಯನಾದ ಹೃದಯರೋಗ ತಜ್ಞ ನನ್ನ ಹೃದಯ ತಪಾಸಣೆ ಮಾಡ್ತಾ ಇದ್ದಂತಹ ಕಾಲದಲ್ಲಿ ಅತ್ತ ವಿಧಾನಸೌಧದ ಮುಂದೆ ಕುಮಾರಸ್ವಾಮಿ ಮುಖ್ಯ ಮಂತ್ರಿಯಾಗಿ ಪ್ರಮಾಣವಚನ ತಗೊಳ್ತಾಯಿದ್ದಂತಹ ಅಪೂರ್ವ ಸಂದರ್ಭವನ್ನು ನಾನು ನನ್ನ ಕಣ್ಣಾರ ನೋಡ

ಜಾತ್ಯತೀತ ಮನಸ್ಸುಗಳಿಗಾಗಿ ಹಂಬಲಿಸಿದ ಜೀವ

ನನ್ನ ರಾಮದಾಸ್ ನಡುವಣ ಒಡನಾಟ ಸುಮಾರು 30 ವರ್ಷಗಳದ್ದು. ಸಾಮಾನ್ಯವಾಗಿ ಸ್ನೇಹ ಮಾಡುವಾಗ ಜಾತಿ ತಿಳಿಯುವ ಸಮಾಜ ನಮ್ಮದು. ಆದರೆ ಇದುವರೆವಿಗೆ ಅವರ ಜಾತಿ ಯಾವುದು ಎಂಬುದು ಇನ್ನೂ ನನಗೆ ತಿಳಿದಿಲ್ಲ. ಅದನ್ನು ತಿಳಿದುಕೊಳ್ಳುವ ಅವಶ್ಯಕತೆಯೂ ಕಂಡುಬಂದಿಲ್ಲ. ಅವರು ಎಂದೂ ತಮ್ಮ ಜಾತಿ ಕುರಿತು ಹೇಳಿಕೊಂಡಿದ್ದಿಲ್ಲ. ಜಾತಿ ಆಧಾರದ ಮೇಲೆ ಸ್ನೇಹವನ್ನಾಗಲಿ, ದ್ವೇಷವನ್ನಾಗಲಿ ಮಾಡಿದ್ದು ಇಲ್ಲ, ಅವರು ಅಪ್ಪಟ ಜಾತ್ಯತೀತ ಮನುಷ್ಯನಾಗಿದ್ದರು.


ರಾಮದಾಸ್ ಅಜಾತಶತ್ರುವೇನೂ ಅಲ್ಲ, ಅವರೇ ಅನೇಕ ಸಲ ಹೇಳುತ್ತಿದ್ದಂತೆ ಸ್ನೇಹಿತರಿಗಿಂತ ಶತ್ರುಗಳೇ ಹೆಚ್ಚಿದ್ದರು. ಅವರ ನಿಲುವುಗಳನ್ನು ಅನೇಕರು ಕಟುವಾಗಿ ಟೀಕಿಸುತ್ತಿದ್ದರು; ಹೀಯಾಳಿಸುತ್ತಿದ್ದರು. ಅವರ ಸಾವಿನಿಂದ ಮೈಸೂರಿನಲ್ಲಿ ಪ್ರತಿಭಟನಾ ಧ್ವನಿ ಉಡುಗಿಹೋಯಿತು ಎಂದರೆ ಸಿಡಿದೇಳುವವರೂ ಉಂಟು. ಆದರೆ ಅವರು ಜಾತ್ಯತೀತ ಮನುಷ್ಯರಾಗಿದ್ದರು ಎಂಬ ಬಗ್ಗೆ ಯಾರದ್ದೂ ಅಪಸ್ವರ ಇಲ್ಲ.

ಜಾತಿವಿನಾಶ ರಾಮದಾಸರ ಕನಸ್ಸು ಆಗಿತ್ತು. ಇದು ಏಕಕಾಲಕ್ಕೆ ಎಲ್ಲ ಜಾತಿಗಳ ಬಿಡುಗಡೆ ಎಂದು ನಂಬಿದ್ದರು. ಎಲ್ಲಿಯವರೆವಿಗೆ ಈ ಕೊಳಕು ಜಾತಿ ಪ್ರಜ್ಞೆ ಜನರಿಂದ ದೂರ ಆಗುವುದಿಲ್ಲವೋ ಅಲ್ಲಿಯವರೆಗೆ ದೇಶದ ಸರ್ವಾಂಗೀಣ ಪ್ರಗತಿ ಸಾಧ್ಯವಿಲ್ಲ ಎಂಬುದು ಅವರ ನಂಬಿಕೆಯಾಗಿತ್ತು.

ಆ ಆಧುನಿಕ ಪ್ರಪಂಚದಲ್ಲಿ ಜಾತೀಯತೆಯ ವಿರುದ್ಧ ಮಾತನಾಡುವವರು ಹಲವರಿದ್ದಾರೆ. ಪಾಂಡಿತ್ಯ ಪೂರ್ಣ ಭಾಷೆಯಲ್ಲಿ ಇದರ ದುಷ್ಪರಿಣಾಮಗಳನ್ನು ಎತ್ತಿ ಹಿಡಿಯುತ್ತಾರೆ. ಆದರೆ ಅವರನ್ನು ಸೂಕ್ಷ್ಮವಾಗಿ ಗಮನಿಸಿದರೆ ಅವರ ಚಟುವಟಿಕೆಗಳೆಲ್ಲಾ ಜಾತಿಯ ಸರಹದ್ದಿನೊಳಗೇ ಇರುತ್ತವೆ! ಅವರ ವೈಯಕ್ತಿಕ ಸಂಬಂಧಗಳು, ಸ್ನೇಹಿತರು, ಔತಣಕೂಟ ಎಲ್ಲ ಜಾತಿ ಬಾಂಧವರ ನಡುವೆಯೇ ಇರುತ್ತದೆ. ಜಾತಿವಾದದ ವಿರುದ್ಧ ಅಬ್ಬರಿಸಿ ಮಾತನಾಡುವ ರಾಜಕೀಯ ನಾಯಕರೂ, ಇತರೇ ವಿಷಯಗಳಲ್ಲಿ ಹಾಗಿರಲಿ, ತಮ್ಮ ಆಪ್ತ ಸಿಬ್ಬಂದಿ ಆಯ್ಕೆಯಲ್ಲೂ ಜಾತಿಯ ಕೊಂಬೆಗೆ ಜೋತು ಬೀಳುವುದು ಸಾಮಾನ್ಯ ಆಗಿದೆ. ಮುಖ್ಯಮಂತ್ರಿಯೋ ಮಂತ್ರಿಯೋ ಆದರೆ ಎಲ್ಲ ಆಯಕಟ್ಟಿನ ಸ್ಥಾನದಲ್ಲೂ ತನ್ನ ಕುಲಬಾಂಧವರೇ ಇರಬೇಕು; ಶಾಸಕನಾದರೆ ತನ್ನ ಕ್ಷೇತ್ರದ ಎಲ್ಲ ಅಧಿಕಾರ ಸ್ಥಾನಗಳು ತನ್ನ ಕುಲಬಾಂಧವರಿಗೆ ಮೀಸಲಾಗಿರಬೇಕು ಎಂಬ ಪ್ರವೃತ್ತಿ ಹೆಚ್ಚುತ್ತಿದೆ.

ಮಠಾಧೀಶರು ಆಧ್ಯಾತ್ಮಿಕ ಚಿಂತನೆ ಮರೆತು ಜಾತಿ ಚಿಂತನೆಯಲ್ಲಿ ಮುಳುಗಿದ್ದಾರೆ. ಬೇರೆಲ್ಲ ದಿವಸಗಳಲ್ಲೂ ಅವರ ದಿವ್ಯ ಆಶೀರ್ವಾದ ಎಲ್ಲ ಜಾತಿ ಜನಾಂಗದವರ ಮೇಲೂ ಇರುತ್ತದೆ. ಚುನಾವಣೆಯಲ್ಲಿ ಮಾತ್ರ ಅವರ ಕೃಪಾಶೀರ್ವಾದ ತಮ್ಮ ಜಾತಿಗೆ ಮೀಸಲಾಗಿರುತ್ತದೆ! ತಮ್ಮ ಜಾತಿಯವರಿಗೆ ಮತ ನೀಡಬೇಕೆಂದು ಸಂದೇಶ ಕಳುಹಿಸುವುದು ಗುಟ್ಟಾಗಿ ಉಳಿದಿಲ್ಲ. ಕೆಲವರು ಇಂತಹ ಮುಚ್ಚುಮರೆ ಏಕೆಂದು ಬಹಿರಂಗವಾಗಿಯೇ ಚುನಾವಣೆಯಲ್ಲಿ ನೇರವಾಗಿ ಮತ ಯಾಚಿಸುತ್ತಾರೆ!

ಇಂತಹ ದರಿದ್ರ ವ್ಯವಸ್ಥೆಯಲ್ಲಿ ಸಹಜವಾಗಿಯೇ ಮತದಾರ ತನ್ನ ಜಾತಿಯವರಿಗೆ ಮತ ನೀಡುತ್ತಾನೆ. ಅವನನ್ನು ದೂಷಿಸಿ ಪ್ರಯೋಜನ ಇಲ್ಲ, ಎಲ್ಲಿಯವರೆಗೂ ಜಾತಿ ಇರುತ್ತೋ ಅಲ್ಲಿಯವರೆವಿಗೆ ಜಾತಿಗೆ ಮತ ನೀಡುವುದೂ ಇರುತ್ತೆ. ನಾಯಕನಾಗಬೇಕಾದವನು ತನ್ನ ವರ್ಗದ ಜನರಿಗೆ ಮಾತ್ರ ನಾಯಕನಾದರೆ ಸಾಲದು, ಸಮಾಜದ ಎಲ್ಲಾ ವರ್ಗದ ಜನ ಗೌರವಕ್ಕೆ, ಮನ್ನಣೆಗೆ, ಪ್ರೀತಿಗೆ ಪಾತ್ರನಾಗಬೇಕು. ಇದು ಸಾಧ್ಯವಾಗುವುದು



ಅವನೊಳಗಿನ ಜಾತಿವಿನಾಶ ಆದಾಗ ಮಾತ್ರ.

ಜಾತಿ ಮತ್ತು ವರ್ಗ ಎರಡೂ ಭಾರತೀಯ ಸಂದರ್ಭದಲ್ಲಿ ಸತ್ಯ. ಏಕಕಾಲಕ್ಕೆ ಇವೆರಡರ ನಿರ್ಮೂಲನ ಆಗಬೇಕು ಎಂದು ಲೋಹಿಯಾ ಹೇಳುತ್ತಿದ್ದರು.

ಲೋಹಿಯಾ ಜಾತಿ ವಿನಾಶಕ್ಕೆ ಎರಡು ಅಂಶಗಳನ್ನು ಗುರುತಿಸಿದ್ದರು. ಅವೆಂದರೆ 1.ಅಂತರ್ಜಾತಿ ವಿವಾಹ 2. ಹಳ್ಳಿಗಳಲ್ಲಿ ಸಹಭೋಜನ

ಪ್ರತಿಭೆ ಎನ್ನುವುದು ಭಾಷೆಗೆ ಮತ್ತು ವ್ಯಾಕರಣಕ್ಕೆ ಮಾತ್ರ ಸೀಮಿತ ಆಗಿರುವುದರಿಂದ ಅದಕ್ಕೂ ಜಾತಿ ವಿನಾಶಕ್ಕೂ ಯಾವುದೇ ಸಂಬಂಧ ಇಲ್ಲ. ಅನೇಕ ಪ್ರತಿಭಾವಂತರು ವಿದೇಶಗಳಲ್ಲಿ ನೆಲೆಸಿದ್ದಾರೆ. ಅಮೆರಿಕದಲ್ಲಿ ಅತಿಹೆಚ್ಚು ಜನರಿದ್ದಾರೆ. ಜಾತೀಯತೆ ಇಲ್ಲಿಗಿಂತಲೂ ಅಲ್ಲಿನವರಲ್ಲಿ ಹೆಚ್ಚು ಇದೆ. ಇದಕ್ಕೆ ಹಲವಾರು ಕಾರಣ ಇರಬಹುದು. ಅಲ್ಲಿಯೂ ಜಾತಿಯ ಸಂಘಟನೆಗಳು ಇವೆ. ಆದರೆ ಒಂದೇ ವ್ಯತ್ಯಾಸ ಅಂದರೆ ಸಂಘಟನೆಗಳ ಹಿಂದೆ ಅಮೆರಿಕ ಸೇರಿದೆ! ಅಮೆರಿಕ ಒಕ್ಕಲಿಗರ ಸಂಘ, ಅಮೆರಿಕ ಕುರುಬರ ಸಂಘ, ಅಮೆರಿಕ ವೀರಶೈವರ ಸಂಘ, ಅಮೆರಿಕ ಬ್ರಾಹ್ಮಣರ ಸಂಘ ಹೀಗೆ.. ಅವರು ತಮ್ಮ ಮಕ್ಕಳಿಗೆ ಸಂಬಂಧ ಹುಡುಕುವುದೂ ಜಾತಿಯ ನೆಲೆಯಲ್ಲೆ! ಅನಿವಾರ್ಯವಾಗಿ ಜಾತಿಯ ಹೊರಗೆ ಸಂಬಂಧ ಮಾಡಲೇಬೇಕಾದ ಸಂದರ್ಭ ಬಂದರೆ ಅಮೆರಿಕ ಸಂಸ್ಕೃತಿಯನ್ನು ಹೀಯಾಳಿಸುತ್ತಲೋ ತಮ್ಮ ವರ್ಗದಲ್ಲೇ ಮದುವೆ ಆಗಿದೆಯಲ್ಲ ಎಂದೋ ಮಾನಸಿಕ ನೆಮ್ಮದಿ ಪಡೆದುಕೊಳ್ಳುತ್ತಾರೆ!

ಜಾಗತೀಕರಣದಿಂದಾಗಿ ಐಟಿ-ಬಿಟಿ ಕ್ಷೇತ್ರ ಪ್ರಗತಿಯಲ್ಲಿದೆ. ಈ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ ದೊರೆತಿರುವುದರಿಂದ ಜಾತಿಯ ಪರಿಧಿ ಮೀರಿ ವಿವಾಹವಾಗುತ್ತಿದ್ದಾರೆ. ಇದರಿಂದ ಜಾಗತೀಕರಣ ಜಾತಿ ವಿನಾಶಕ್ಕೆ ನಾಂದಿ ಹಾಡುತ್ತಿದೆ ಎಂದು ತಪ್ಪಾಗಿ ಅರ್ಥೈಸಲಾಗುತ್ತದೆ. ಇಂತಹ ಮದುವೆಗಳು ಒಂದೇ ವರ್ಗದ ನಡುವೆ ಆಗುತ್ತಿರುವುದನ್ನು ಗಮನಿಸಬೇಕು. ಜಾತಿ ಎಂದರೆ ಸಾಂಪ್ರದಾಯಿಕ ಜಾತಿವ್ಯವಸ್ಥೆಯೇ ಆಗಿರಬೇಕಿಲ್ಲ, ವರ್ಗವೂ ಚಲನರಹಿತವಾದಾಗ, ಸ್ಥಗಿತಗೊಂಡಾಗ ಜಾತಿಯಾಗಬಲ್ಲದು ಎಂದೇ ಆ ಕ್ಷೇತ್ರಗಳಲ್ಲಿರುವವರ ವಿವಾಹವೂ ಜಾತಿಯ ಹೊರಗೆ ಆದುದಲ್ಲ ಎನಿಸುತ್ತದೆ.

ರಾಮದಾಸ್ ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡುತ್ತಿದ್ದರು. ಒಮ್ಮೊಮ್ಮೆ ಇದು ಅತಿರೇಕಕ್ಕೆ ಹೋಗಿ ಫಜೀತಿ ಉಂಟುಮಾಡುತ್ತಿತ್ತು. ಕೆಲವು ಸಲ ತಮ್ಮ ವೈವಾಹಿಕ ಜೀವನ ನಡೆಸುವ ಯಾವುದೇ ಸಾಧ್ಯತೆಗಳಿಲ್ಲದ ಪಡ್ಡೆ ಹೈಕಳು ಒಂದು ಪಡೆಯ ಜೊತೆ ಬಂದು ಅವರೆದುರು ನಿಲ್ಲುತ್ತಿದ್ದರು. ಅವರ ಬೇಡಿಕೆ ಒಂದೇ-'ಇವರಿಬ್ಬರೂ ಪ್ರೀತಿಸುತ್ತಿದ್ದಾರೆ, ಮದುವೆ ಮಾಡಿಸಿ!' ಅವರ ಹಿನ್ನೆಲೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ರಾಮದಾಸ್ ಕೆಲವು ಸಲ ಬುದ್ಧಿ ಹೇಳಿ, ಅದಕ್ಕೂ ಜಗ್ಗದಿದ್ದರೆ ಬೈದು ಕಳಿಸಬೇಕಾಗುತಿತ್ತು. ಅಂತಹವರಲ್ಲಿ ಕೆಲವರು 'ಇವನೇನ್ಲಾ ಇವ್ನ ಮದ್ವೆ ಮಾಡುಸ್ತಾನೆ ಅಂತ ಬಂದ್ರೆ ಬೈದು ಕಳುಸ್ತಾನೆ' ಎಂದು ಶಪಿಸಿದ್ದು ಉಂಟು.

ಜಾತಿ ವ್ಯವಸ್ಥೆ ಎಷ್ಟು ಗಟ್ಟಿ ಹಾಗೂ ಪ್ರಭಾವಶಾಲಿಯಾಗಿದೆ ಎಂದರೆ ಯೌವನದ ಹುಮ್ಮಸ್ಸಿನಲ್ಲಿ ಅಂತರ್ಜಾತಿ ವಿವಾಹವಾದರೂ ಕಾಲಕಳೆದಂತೆ ಜಾತಿಯ ವಿಷವರ್ತುಲದಲ್ಲಿ ಲೀನವಾದ ಉದಾಹರಣೆಗಳೂ ಹಲವು ಇವೆ. ಯಾವ ಜಾತಿ ಎಂಬುದು ಗಂಡಹೆಂಡಿರಲ್ಲಿ ಯಾರು ಪ್ರಭಾವಶಾಲಿ ಎಂಬುದನ್ನು ಅವಲಂಬಿಸಿದೆ.

ಅಂತರ್‌ಜಾತಿ ವಿವಾಹ ಎನ್ನುವುದು ಕೇವಲ ದೈಹಿಕ ಸಂಪರ್ಕಕ್ಕೆ ರಹದಾರಿಯಾದರೆ ಸಾಲದು. ಆಲೋಚನಾ ವಿಧಾನದಲ್ಲಿ ಮೂಲಭೂತ ಬದಲಾವಣೆ ಆಗಬೇಕಾದುದು ಅವಶ್ಯಕವಾಗಿದೆ.

ಇನ್ನು ಸಹ ಪಂಕ್ತಿ ಭೋಜನ. ಎಳೆಯ ಮನಸ್ಸುಗಳ ಎದೆಯಲ್ಲಿ ಜಾತಿ ವಿನಾಶದ ಬೀಜವನ್ನು ಬಿತ್ತುವ ಅಪೂರ್ವ ಕಾರ್ಯಕ್ರಮ ಅಕ್ಷರದಾಸೋಹ. ಈ ಕಾರ್ಯಕ್ರಮದಲ್ಲಿ ಇಬ್ಬರು ಮಹಿಳಾ ನೌಕರರು ಇರುತ್ತಾರೆ. ಒಬ್ಬರು ಅಡುಗೆ

ಅಕಾರ್
ಎಚ್.ಎಲ್. ಕೇಶವಮೂರ್ತಿ

ಮಾಡಲು, ಇನ್ನೊಬ್ಬರು ಸಹಾಯಕಿ. ಇಬ್ಬರಲ್ಲಿ ಒಬ್ಬರು ದಲಿತರಾಗಿರುವುದು ಕಡ್ಡಾಯ. ಇವರು ಮಾಡಿ ಬಡಿಸಿದ ಅಡುಗೆಯನ್ನು ಮಕ್ಕಳು ಸಂತೋಷದಿಂದ, ಯಾವ ಹಿಂಜರಿಕೆಯೂ ಇಲ್ಲದೆ ಊಟ ಮಾಡುತ್ತಿದ್ದಾರೆ. ಇಂತಹ ಉನ್ನತ ಆದರ್ಶದ ಕಾರ್ಯಕ್ರಮವನ್ನು ವಿಫಲಗೊಳಿಸಲು ಪಟ್ಟಭದ್ರ ಹಿತಾಸಕ್ತಿಗಳ ಸಂಚು ನಡೆಯುತ್ತಲೇ ಇವೆ. ಆಗಿರಬಹುದಾದ ಒಂದೆರಡು ತಪ್ಪುಗಳನ್ನೇ ವೈಭವೀಕರಿಸಿ ಸುದ್ದಿ ಮಾಧ್ಯಮಗಳು ಪ್ರಚಾರ ಮಾಡುತ್ತವೆ. ಈ ಊಟದಿಂದ ಅಸ್ವಸ್ಥರಾದವರನ್ನು ಎತ್ತಿ ಹಿಡಿದು ಆಕಾಶವೇ ಕುಸಿದುಬಿದ್ದಂತೆ ತೋರಿಸುತ್ತವೆ.

ಅಕ್ಷರ ದಾಸೋಹದಲ್ಲಿ ಮಕ್ಕಳಿಗೆ ಮೊಟ್ಟೆ ಹಾಲು ಕೊಡುವ ವಿಷಯ ಬಂದಾಗ ಆ ದಿನಗಳಲ್ಲಿ ಅಂದಿನ ಮುಖ್ಯಮಂತ್ರಿ ಮೈಸೂರಿನ ಪ್ರಭಾವೀ ಮಠದ ಸಮಾರಂಭಕ್ಕೆ ಬಂದಿದ್ದರು. ತುಂಬಿದ ಸಭೆಯಲ್ಲೇ ಪ್ರಭಾವೀ ಮಠಾಧೀಶರು ಒತ್ತಡ ಹೇರಿ 'ಮೊಟ್ಟೆ ನೀಡುವುದಿಲ್ಲ' ಎಂಬ ಆಶ್ವಾಸನೆಯನ್ನು ಮುಖ್ಯಮಂತ್ರಿಗಳಿಂದ ಪಡೆದರು. ಬಡಮಕ್ಕಳಿಗೆ ಸಿಗಬೇಕಾದ ಪೌಷ್ಟಿಕ ಆಹಾರಕ್ಕೂ ಕಲ್ಲು ಬಿತ್ತು. ಪ್ರಜಾಪ್ರಭುತ್ವದಲ್ಲಿ ಮತೀಯ ಒತ್ತಡ ಹೇರಿ ತಮ್ಮ ಮೂಗಿನ ನೇರಕ್ಕೆ ಕಾನೂನು ಮಾಡಿಸುವುದು

ಲ್ಲಿ, ಈಗ ಪುನಃ ಅಂತಹ ಅವಕಾಶ ಮಾಡಿಕೊಡಿ
ಬೇಡಿಕೆ ಮುಂದಿಟ್ಟದ್ದಾ ಕಣಕ್ಕ."
"ಅಂಗಂತ ಕೇಳಿದ್ದಾ?"
"ನಿನ್ನಾಗೆ ಕಣಕ್ಕ, ಶಿಲ್ಲಿ, ಫೆಲೋ ಅಂಕೇಳಿದ. ಜನ
ದು ಗೊತ್ತೆ? ಆಗ ತಗದಿರೊ ವಿಡಿಯೋ ಫೋಟಾ
ಹೋಗಿ ನೋಡಿಕೊ ಅಂದ್ರು. ಇನ್ನ ಈ ಕಾಂಗ್ರೆಸ್ಸಿನ
ಮದ್ದು ಒಂದಾಗಿ ಬನ್ನಿ, ಅಂಗೆ ಸರಿಯಾದೋರಿಗೆ
ಕೊಡದ ಕಲ್ರಗಳಿ, ಜೊತಿಗೆ ಇಡೀ ಕರ್ನಾಟಕಕ್ಕೆ
ಲೀದ್ರು ಮಾಡಿಕಳಿ ಅಂದ್ರು. ಈ ರಿಜಲ್ಟಲ್ಲಿ ಟೋಟಲ್ಲಿ
ಮ್ಯಾಟ್ರಲ್ಲ ಅವೆ ಕಣಕ್ಕ."
"ಆ ಕಾಂಗ್ರೆಸ್ಸಿನವೇನೊ ತಿರಗ ದ್ಯಾವೇಗೌಡುನ ಮನೆ
ಗಿದ್ದಾವಂತೆ?" ಎಂದು ಸೀರ ಕುಚೋದ್ಯವೆಂಬಂತೆ ನಗಾಡಿದ.
"ಹೋಗಿದ್ದವೇನ್ಲ?" ಎಂದಳು ಜುಮ್ಮಿ.
"ಊ ಕಣಕ್ಕ. ರಾಜ್ಯಸಭೆ, ವಿಧಾನಪರಿಷತ್ತು ಅಂತ
ಲ್ಲೆ ಓಟನ ಯಲಕ್ಷನ್ ನ್ಯದಿತವೆ. ಈ ದ್ಯಾವೇಗೌಡ
ಕಂದಿರೊ 28 ಓಟಲ್ಲಿ ವಸಿ ಈ ಕದಿಕೆ ಬೇಕಾಗಿತ್ತು.
ಎಂ.ವಿ. ರಾಜಶೇಖರನ್ ಅಂತ ವಬ್ಬವ್ರುನೆ."
"ಎಲ್ಲಿದ್ದನವ್ರುನೂ?"
"ಅವ್ರುನೆಲ್ಲಿದ್ರೂ ಅಲ್ಲಿಯೋನೆ ಅನ್ನಂಗೆ ಕಾಣ್ತನೆ. ಪರೆಗ್
ಸಲ್ ಬಿಜೆಪಿ ಗುದಿಲಿದ್ರೆ, ಅಲ್ಲಿಯೋನೆ ಅನ್ನಂಗೂ
. ದ್ಯಾವೇಗೌಡನ ಜ್ವತೆ ಇದ್ರೆ ಈಗ ತಾನೆ ಬಂದು
ಗೌಡನ ಪಾರ್ಟಿ ಸೇರಿಕೊಂಡೋವಂಗೆ ಕಾಣ್ತನೆ. ಕಾಂಗ್ರೆ
ದ್ರೆ ಅದ್ಕೂ ಮ್ಯಾನೇಜ್ ಮಾಡ್ತ ಅವ್ರುನೆ ಅನ್ನಂಗೂ
."
"ವಳ್ಳೆ ಮನ್ಸ ಅನ್ನು" ಎಂದ ಕಾಳಮಾವ.
"ತುಂಬಾ ವಳ್ಳೆ ಮನ್ಸ ಕಣಮಾವ, ನಿಜಲಿಂಗಪ್ಪನ ಅಳಿ
ದ್ನಂತೆ."
"ಅಂಗರೀಗಾಗಿಲವೇನ್ಲ?" ಎಂದಳು ಜುಮ್ಮಿ.
"ಈಗ ನಿಜಲಿಂಗಪ್ಪನೆ ಇಲವಲ್ಲಕ್ಕ."
"ತಲರಟೆ, ನೀನು ಮುಂದಕೇಳು."
"ಮುಂದ ಕೇಳದಿದ್ನೇನು? ಜೆಡಿಎಸ್ಸು, ಕಾಂಗ್ರೆಸ್ಸು ಕೈ
ಕದ್ರಿಂದ ಎಡೂರಪ್ಪ ದೇವುಸ್ಥಾನ ಹುಡಿಕ್ಕಂಡು ತಿರುಗ್ತ
ವುನೆ."
" !?" ■

ಧಾನ ವಿರೋಧಿ ಕ್ರಿಯೆಯಾಗಿತ್ತು. ಇದನ್ನು ವಿರೋಧಿಸಿ
ನಗರದಲ್ಲಿ ರಾಮದಾಸ್ ನೇತೃತ್ವದಲ್ಲಿ ಪತ್ರಿಕಾಗೋಷ್ಠಿ
ದೆವು. ಅದೇ ನಾವು ಜೊತೆಯಲ್ಲಿ ನಡೆಸಿದ ಕೊನೆಯ
ಗೋಷ್ಠಿಯಾಗಿದ್ದು ಸಂಕಟದ ಸಂಗತಿ.
ಜಾತಿವಿನಾಶದ ಕಡೆ ಹೆಜ್ಜೆ ಇಟ್ಟು ಹಳ್ಳಿಯ ಸಾವಿರಾರು
ಹೆಣ್ಣು ಮಕ್ಕಳಿಗೆ ಜೀವನಾಧಾರವಾಗಿರುವ ಈ
ರ್ಯಕ್ರಮವನ್ನು ಚಿಗುರಿನಲ್ಲೇ ಚಿವುಟಿಹಾಕುವ ಸಂಚು
ಹಂತವಾಗಿ ನಡೆಯುತ್ತಿದೆ. ಮೊದಲಿಗೆ, ಬೆಂಗಳೂರಿನ
ಗಳ ಅಕ್ಷರದಾಸೋಹ ಕಾರ್ಯಕ್ರಮವನ್ನು 'ಇಸ್ಕಾನ್'
'ಅದಮ್ಯ' ಎಂಬ ಸ್ವಯಂಸೇವಾ ಸಂಸ್ಥೆಗೆ
ಲಾಯಿತು. 'ಅದಮ್ಯ' ಲೋಕಸಭಾ ಸದಸ್ಯ
ತಕುಮಾರ್ ಅವರ ಹೆಂಡತಿ ನಡೆಸುತ್ತಿರುವ ಸಂಸ್ಥೆ. ಈ
ದಿಂದ ಬಳ್ಳಾರಿ ಜಿಲ್ಲೆಗೆ ಈ ಹುನ್ನಾರ ಕಾಲಿಟ್ಟಿದೆ. ಅಲ್ಲಿ
5 ಪ್ರಾಥಮಿಕ ಶಾಲೆಗಳು, 238 ಪ್ರೌಢಶಾಲೆಗಳು ಇವೆ.
1813 ಶಾಲೆಗಳು ಅಕ್ಷರದಾಸೋಹ ಕಾರ್ಯಕ್ರಮಕ್ಕೆ
ಳ್ಳುತ್ತವೆ. ಅದರಲ್ಲಿ 153 ಶಾಲೆಗಳಲ್ಲಿ 'ಪಕ್ಷತಮ
ಫೌಂಡೇಷನ್'ಗೆ ಈ ಕಾರ್ಯಕ್ರಮ ಜಾರಿಗೊಳಿಸಲು
ಮತಿ ನೀಡಲಾಗಿದೆ. ಇದು 'ಇಸ್ಕಾನ್' ಅವರ ಅಂಗಸಂಸ್ಥೆ.
ಬಳ್ಳಾರಿ ಜಿಲ್ಲೆಯ ಎಲ್ಲಾ ಶಾಲೆಗಳನ್ನು ಈ
ಡೇಷನ್‌ಗೆ ನೀಡುವ ಅಪಾಯ ಇದೆ. ಇದೇ
ಗೀಕರಣದ ನೀತಿ ಇತರೇ ಜಿಲ್ಲೆಗಳಿಗೂ ವಿಸ್ತರಿಸುವ
ಸಗಳು ದೂರ ಇಲ್ಲ. ಈ ನಡುವೆ ಕೆಲವು
ಜನಿಕರಿಂದ ಹಾಗೂ ಶಾಲಾ ಅಧ್ಯಾಪಕರಿಂದಲೂ
ಸ್ಥಗಿತಗೊಳಿಸುವಂತೆ ಒತ್ತಾಯ ತರಲಾಗುತ್ತಿದೆ.
ಅಕ್ಷರದಾಸೋಹ ಅನುಷ್ಠಾನ ಕುರಿತು ಕೂಲಂಕಷ
ಲನೆ ನಡೆಸಿ ವರದಿ ಸಲ್ಲಿಸಲು ಅಂದಿನ ವಿಧಾನಸಭಾ
ರಾಗಿದ್ದ ಎಲ್. ಹನುಮಂತಯ್ಯ ಅವರ ನೇತೃತ್ವದಲ್ಲಿ
ರಚಿಸಿತ್ತು, ಆ ಸಮಿತಿ ಈಗಾಗಲೇ ವರದಿಯನ್ನು
ರಕ್ಕೆ ಸಲ್ಲಿಸಿದೆ ಎಂದು ತಿಳಿದು ಬಂದಿದೆ. ಸರ್ಕಾರವೇ
ವಾಗಿ ಇದನ್ನು ನಡೆಸಿದರೆ ಯಾರ ಹಂಗೂ ಇರುವುದಿಲ್ಲ.
ಹಣ ನಮ್ಮ ಊಟ ಎಂಬ ಭಾವನೆ ಇರುತ್ತದೆ.
ಬೇರೆಯವರಿಗೆ ವಹಿಸಿದರೆ ಈ ಭಾವನೆ ಇರುವುದಿಲ್ಲ.
ನಮ್ಮದೇ ಆದರೂ ಅವರು ಕೊಡುವವರು, ನಾವು
ಮಾಡಿಕೊಳ್ಳುವವರು ಎಂಬ ಪ್ರಜ್ಞೆ ಮಕ್ಕಳಲ್ಲಿ
ಕೀಳರಿಮೆಯನ್ನುಂಟುಮಾಡುವ ಸಾಧ್ಯತೆ ಇರುತ್ತದೆ.
ದರಿಂದ ಯಾವುದೇ ಕಾರಣಕ್ಕೆ ಅಕ್ಷರ ದಾಸೋಹ
ರ್ಯಕ್ರಮ ನಿಲ್ಲಬಾರದು. ಈ ಜವಾಬ್ದಾರಿಯನ್ನು ಮಠಗಳಿಗೆ,
ಸ್ಥಾನಗಳಿಗೆ, ಸ್ವಯಂಸೇವಾಸಂಸ್ಥೆಗಳಿಗೆ ನೀಡಬಾರದು.
ಗಲೇ ವಿವಿಧ ಸಂಸ್ಥೆಗಳಿಗೆ ನೀಡಿರುವ 'ಅಕ್ಷರ ದಾಸೋಹ'
ಜವಾಬ್ದಾರಿಯನ್ನು ಹಿಂಪಡೆದು ಸರ್ಕಾರವೇ ಇದನ್ನು
ನಡೆಸಬೇಕು. ಈ ನಿಟ್ಟಿನಲ್ಲಿ ಶ್ರಮಿಸಿದರೆ ರಾಮದಾಸ್
ಕಾರ್ಯಕ್ರಮ ಸಾರ್ಥಕ ಎನಿಸುತ್ತದೆ. ■

ಬೆಂಕಿಯಿಂದ

"ಅಂಗನೆಯರೊಲಿಯುವುದು, ಬಂಗಾರ ದೊರೆಯುವುದು..." ಎಂದು ಬರೆಯುತ್ತಾ ಹೋದ ಸರ್ವಜ್ಞ, "ಸಂಗ್ರಾಮದಲ್ಲಿ ಗೆಲ್ಲುವುದು" ಕೂಡ ಸಂಗನೊಲುಮೆಯಿಂದ ಎಂದು ಹೇಳಿದ. ಯುದ್ಧ ಎಷ್ಟು ಕಷ್ಟ ಎಂದು ಎಲ್ಲರೂ ಬಲ್ಲರು. ಆಧುನಿಕ ಯುದ್ಧವಂತೂ ಕಡುಕಷ್ಟ. ಅಮೆರಿಕಾದ ಸೈನಿಕರಿಗೀಗ ಈ ಕಷ್ಟ ಗೊತ್ತಾಗುತ್ತಿದೆ. ತಾವಾಗಿಯೇ ಸೈನ್ಯಕ್ಕೆ ಸೇರಿ ತರಬೇತಿ ಪಡೆದು ಯುದ್ಧಕ್ಕಾಗಿ ಕಾಲು ಕೆರೆಯುವ ತರುಣರನ್ನು ಬಿಟ್ಟರೆ ಮಿಕ್ಕೆಲ್ಲ ಹುಡುಗರೂ ಸೈನ್ಯದ ಮಜಕ್ಕಾಗಿ, ಸುಲಭದ ಸಾಲಕ್ಕಾಗಿ, ಬೇರೆಯವರಿಗಿಲ್ಲದ ಸವಲತ್ತಿಗಾಗಿ ಸೈನ್ಯಕ್ಕೆ ಸೇರಿರುವವರು. ಅದರಲ್ಲೂ ಅಮೆರಿಕಾಕ್ಕೆ ಯುದ್ಧದ ಕೆಟ್ಟ ಚರಿತ್ರೆಯೇ ಇದೆ. ಇನ್ನೂರು ವರ್ಷಗಳ ಹಿಂದೆ ಜೀವ ಮತ್ತು ಮಾನಕ್ಕಾಗಿ ಹೋರಾಡಿದ ಜಾರ್ಜ್ ವಾಷಿಂಗ್ಟನ್, ಆಮೇಲೆ ಅಬ್ರಹಾಂ ಲಿಂಕನ್ ಬಿಟ್ಟರೆ ಅಮೆರಿಕಾ ತನ್ನ ನೆಲದ ಮೇಲೆ ಸರಿಯಾಗಿ ಯುದ್ಧವನ್ನೇ ಮಾಡಿಲ್ಲ. ಮೊದಲನೆ ಜಾಗತಿಕ ಯುದ್ಧ, ಎರಡನೇ ಜಾಗತಿಕ ಯುದ್ಧದಲ್ಲಿ ಮನಸ್ಸಿಲ್ಲದ ಮನಸ್ಸಿನಿಂದ ಯುದ್ಧಕ್ಕಿಳಿದ ಅಮೆರಿಕಾ ಯುದ್ಧವನ್ನು ಮಾಡಿದ್ದು ಯೂರೋಪಿನಲ್ಲಿ, ಜಪಾನಿನಲ್ಲಿ; ಅಮೆರಿಕಾದ ಜನ ಪ್ರೇಕ್ಷಕರಾಗಿಯೇ ಇದ್ದರು.



ಯುದ್ಧಕ್ಕೆ ಪ್ರೇರಣೆ

ಅಮೆರಿಕಾದ ಹುಡುಗರು ಯುದ್ಧವೆಂದರೆ ಯಾಕೆ ಬೆಚ್ಚುತ್ತಾರೆ ಎಂಬುದನ್ನು ಸೌದಿ ಅರೇಬಿಯಾವನ್ನು ನೋಡಿ ತಿಳಿಯಬೇಕು. ಸೌದಿ ಅರೇಬಿಯಾದಲ್ಲಿ ತರುಣರು ಸೈನ್ಯಕ್ಕೆ ಸೇರುವುದೇ ಇಲ್ಲ. ಬಲಾತ್ಕಾರದಿಂದ ಸೇರಿದರೂ ತಮಗೆ ಕೊಟ್ಟ ಕೋವಿಯೊಂದಿಗೇ ಕಣ್ಮರೆಯಾಗುತ್ತಾರೆ. ಇದಕ್ಕೆ ಮುಖ್ಯ ಕಾರಣ ಸೌದಿ ಅರೇಬಿಯಾ ಯಾವುದೇ ಯುದ್ಧ, ಸವಾಲು ಇತ್ಯಾದಿ ಇಲ್ಲದೇ ಶ್ರೀಮಂತ ರಾಷ್ಟ್ರವಾಗಿರುವುದು, ಯುದ್ಧದಲ್ಲಿ ಸತ್ತು ಹೋಗುವ ಅಪಾಯ ಇದ್ದೇ ಇರುವುದು, ತೈಲದ ವರಮಾನದಿಂದ ಅಮೆರಿಕಾದಷ್ಟೇ ಶ್ರೀಮಂತವಾಗಿರುವ ಸೌದಿ ಅರೇಬಿಯಾದ ತರುಣರನ್ನು ತಮ್ಮ ರಾಷ್ಟ್ರದ ಫಾಹ್ದ್ ತರಹ ದೊರೆಗಾಗಿ, ತಮ್ಮ ಮರುಭೂಮಿಗಾಗಿ ಕಾದಾಡಲು ಹುರಿದುಂಬಿಸುವುದು ಕಷ್ಟ. ನಿಜವಾಗಿಯೂ ಹೋರಾಡುವ ಇರಾಕ್‌ನ ಸೈನಿಕರೊಂದಿಗೆ ಇವರು ಹೋರಾಡುವುದು ಕಷ್ಟ. ತಮ್ಮ ನೆರೆ ರಾಜ್ಯದ ಚಿಕ್ಕ ಸೈನ್ಯದ ತುಕಡಿಯಿಂದ ಇವರು ಸೋಲನ್ನನುಭವಿಸಿದ್ದಾರೆ.

ಯುದ್ಧಕ್ಕೆ ನಿಜವಾದ ಸ್ಫೂರ್ತಿ ಏನು ಗೊತ್ತೆ? ಯಾವುದೇ ಸಿನಿಕತನವಿಲ್ಲದೆ ವಾಸ್ತವವನ್ನು ಹಾಗೇ ಹೇಳುವುದಾದರೆ, ಸೈನಿಕನಿಗೆ ಸ್ಫೂರ್ತಿ ಯುದ್ಧ ನೀಡುವ ಹೆಚ್ಚುವರಿ ಸಂಬಳ ಮತ್ತು ಯುದ್ಧದಿಂದ ಶತ್ರು ದೇಶವನ್ನು ಲೂಟಿ ಮಾಡುವ ಅವಕಾಶ. ಈ ಲೂಟಿಯಲ್ಲಿ ಗಮ್ಮತ್ತೆಲ್ಲ ಸೇರಿರುತ್ತದೆ. ಇದನ್ನು ನೀವು ಊಹಿಸಬಲ್ಲಿರಿ. ಮೊಗಲ್ ಸೈನ್ಯಗಳು, ಮೈಸೂರಿನ ಹೈದರಾಲಿಯ ಸೈನ್ಯಗಳು ಯುದ್ಧಕ್ಕಾಗಿ ಕಾಲು ಕೆರೆಯುತ್ತಿದ್ದವು. ಇದನ್ನು ಕಂಡ ಮೊಗಲ್ ದೊರೆ ಅಕ್ಬರ್ ಇದನ್ನೇ ರಾಜನೀತಿಯನ್ನಾಗಿ ಹೇಳಿದ– "ಚಕ್ರವರ್ತಿ ತನ್ನ ರಾಜ್ಯವನ್ನು ವಿಸ್ತರಿಸುತ್ತಾ ಹೋಗಬೇಕು, ಇಲ್ಲದಿದ್ದರೆ ಆತನ ರಾಜ್ಯ ಉಡುಗುತ್ತ ಹೋಗುತ್ತದೆ."

ಅಂದರೆ ದೊರೆಯೊಬ್ಬ ಕಟ್ಟಿದ ಸೈನ್ಯವಿರುವುದೇ ಯುದ್ಧ ಮಾಡುವುದಕ್ಕಾಗಿ. ಯುದ್ಧದ ಖುಷಿ, ಲಾಭ, ವೈಭವ ಪಡೆಯುವುದಕ್ಕಾಗಿ. ಕೆಲವರ ಪ್ರಕಾರ, ಯುದ್ಧ ಮಾಡುವ ಹುಮ್ಮಸ್ಸು ಕಳೆದುಕೊಂಡ ಸೈನಿಕರು, ದಂಡನಾಯಕರಲ್ಲಿ ಸ್ಫೂರ್ತಿ ಮೂಡಿಸುವುದಕ್ಕಾಗಿಯೇ ಭಗವದ್ಗೀತೆ ರಚಿಸಿದ್ದಂತೆ. ಭಗವದ್ಗೀತೆಯ ಸಂದೇಶಗಳಲ್ಲಿ ಒಂದು ಸೆಣಸುವುದು, ನಿನ್ನ ಕರ್ತವ್ಯ ಫಲಿತಾಂಶದ ಬಗ್ಗೆ ಯೋಚಿಸಬೇಡ.

ಮರೆಯುವ ಮುನ್ನ



■ ಪಿ. ಲಂಕೇಶ್ -ಸೆಪ್ಟೆಂಬರ್ 9, 1990

ಹೆತ್ತವರು, ರಾಷ್ಟ್ರ

ಇದೇ ಸಮಯದಲ್ಲಿ ಅಮೆರಿಕಾದ ತಂದೆಯೊಬ್ಬ ತನ್ನ ಸೈನಿಕನಾದ ಮಗ ಯುದ್ಧಕ್ಕೆ ಹೋಗಲೇಬೇಕಾಗುವುದನ್ನು ಕುರಿತು ಅಧ್ಯಕ್ಷ ಬುಶ್‌ಗೆ ಕಾಗದ ಬರೆದಿದ್ದಾನೆ. ಇಂಥ ನೂರಾರು ಕಾಗದಗಳು ಬುಶ್‌ಗೆ ಬರಲಿವೆ. ಕುವೈತ್, ಇರಾಕ್‌ನಲ್ಲಿ ಒತ್ತೆಯಾಳುಗಳಾಗಿ ಸಿಕ್ಕಿಹಾಕಿಕೊಂಡಿರುವವರು, ಅವರ ನೆಂಟರಿಷ್ಟರೆಲ್ಲ ಬುಶ್‌ಗೆ ಬರೆಯಲಿದ್ದಾರೆ. ಈ ತರುಣ ಸೈನಿಕನ ತಂದೆ ಬುಶ್‌ಗೆ ಬರೆದ ಕಾಗದದಲ್ಲಿ ಗೋಗರೆದಿದ್ದಾನೆ; "ನಿಮ್ಮ ಖ್ಯಾತಿ ಮತ್ತು ವೈಭವಕ್ಕಾಗಿ ನನ್ನ ಮಗನ ಬಲಿ ಕೊಡುತ್ತಿದ್ದೀರಿ. ಇದೊಂದು ನಿರರ್ಥಕ ಯುದ್ಧ. ಇದಕ್ಕಾಗಿ ನನ್ನ ಮಗ ಯಾಕೆ ಸಾಯಬೇಕು?"

ಎಲ್ಲ ಕಾಲರಾ, ಪ್ಲೇಗು, ಪ್ರಾಚೀನದ ಯುದ್ಧಗಳಲ್ಲಿ ಸತ್ತ ಜನಕ್ಕಿಂತ ಹೆಚ್ಚು ಜನ ಎರಡನೆಯ ಮಹಾಯುದ್ಧದಲ್ಲಿ ಸತ್ತರು. ಒಂದು ಕೋಟಿಗಿಂತ ಹೆಚ್ಚು ಜನ ತೀರಿಕೊಂಡರು. ಹಾಗೆಂದು ಈ ಎರಡನೇ ಜಾಗತಿಕ ಯುದ್ಧಕ್ಕೆ ಹೆದರಿ ಸುಮ್ಮನಾಗುವಂತಿರಲಿಲ್ಲ. ಹಿಟ್ಲರ್ ಇಡೀ ವಿಶ್ವವನ್ನು ಹೆಬ್ಬೆರಳಿನಡಿ ಇಟ್ಟುಕೊಳ್ಳುತ್ತಿದ್ದ.


ಶಾಂತಿಯ ಮಾತಾಡುತ್ತಲೇ ಯುದ್ಧಕ್ಕೆ ಸಿದ್ಧವಾದ ಜಗತ್ತು ಇದು. ಶಾಂತಿಯನ್ನು ಯುದ್ಧವನ್ನು ಪೂರ್ತಿ ಒಪ್ಪಲಾರದ ಜಗತ್ತು ಇದು. ಅಹಿಂಸೆ ಮತ್ತು ಶಾಂತಿಗೆ ಇರುವ ವ್ಯತ್ಯಾಸವನ್ನು ನಾವು ತಿಳಿಯಬೇಕಾಗಿದೆ. ಯುದ್ಧ, ಪ್ರೀತಿ, ಶಾಂತಿ, ಸಂಸ್ಕೃತಿಯೆಲ್ಲವೂ ಮನುಷ್ಯನ ರಕ್ತದಲ್ಲಿರುವಂತಿದೆ. ಶಾಂತಿ ನೆಲೆಸಿದಂತೆ ಮೋಜಿನ ಬದುಕಲ್ಲಿ ಮುಳುಗಿದ ರೋಮ್ ಸಾಮ್ರಾಜ್ಯ ಮಣ್ಣು ಮುಕ್ಕಿತು; ಯುದ್ಧ ಮಾಡುತ್ತಲೇ ಹೋದ ಅನೇಕ ರಾಷ್ಟ್ರಗಳು ಮಣ್ಣು ಪಾಲಾದವು. ಮನುಷ್ಯ ಯುದ್ಧದ ಲಾಭ, ರೋಮಾಂಚನ, ರಕ್ಷಣೆ, ವೈಭವ ಮತ್ತು ಹಿಂಸೆಗೆ ಮತ್ತೆ ಮತ್ತೆ ಹಿಂದಿರುಗುತ್ತಲೇ ಇದ್ದಾನೆ.

ಅರವತ್ತು ಜನ ಒತ್ತೆಯಾಳುಗಳನ್ನು ರಕ್ಷಿಸುವುದಕ್ಕಾಗಿ ಗೊಣಗಾಡುತ್ತ ವೇಳೆ ಹಾಳುಮಾಡಿದ ಜಿಮ್ಮಿ ಕಾರ್ಟರ್ ಇಡೀ ಅಮೆರಿಕಾಕ್ಕೆ ಮುಖಭಂಗ ತಂದ. ಸೈನ್ಯಕ್ಕೆ ಸೇರುವುದರ ಎಲ್ಲ ಅರ್ಥ ಅರಿತ ಹೆತ್ತವರು, ವಿದೇಶಕ್ಕೆ ಲಾಭ ಗಳಿಸಲು ಹೋದ ಒತ್ತೆಯಾಳುಗಳು ಕೂಡ ಆತ್ಮಗೌರವ ಉಳಿಸಿಕೊಳ್ಳುವ ಒಂದೇ ಮಾರ್ಗ–ಪ್ರಾಣಿಯ ಗಟ್ಟಿಗತನದಿಂದ, ಮನಃಸ್ಥೈರ್ಯದಿಂದ ಎಲ್ಲವನ್ನೂ ಎದುರಿಸುವುದು.

ಸೌದೀ ಖಯಾಲಿ

ಯುದ್ಧದ ಮಾತೆಲ್ಲ ಇರಲಿ. ಈಗ ಗಲ್ಫ್‌ನಲ್ಲಿರುವ ಅಮೆರಿಕಾದ ಸೈನ್ಯದ ತುಕಡಿಗಳಲ್ಲಿ ಕೆಲವು ಹೆಂಗಸರ ತುಕಡಿಗಳಿವೆ. ತಾವು ಯುದ್ಧ ಮಾಡಬಲ್ಲೆವೆಂದು ಸೈನ್ಯದ ವಿಮಾನ, ನೌಕಾದಳಗಳಲ್ಲಿ ಈ ಮಹಿಳೆಯರಿದ್ದಾರೆ. ಪುರುಷ ಯೋಧರಂತೆಯೇ ಚೆನ್ನಾಗಿ ತಿಂದು ತೀವ್ರ ತರಬೇತಿ ಪಡೆಯುವ ಇವರಲ್ಲಿ ಅನೇಕರು ಸುಂದರಿಯರು. ಇವರಲ್ಲೊಬ್ಬಳು ಸ್ವರ್ಣ ಬಣ್ಣ ಕೇಶದ ದಂಡನಾಯಕಿ; ಮೋಹಕ ಹೆಂಗಸು. ಅವಳನ್ನು ನೋಡಿದ ಸೌದಿ ಅರೇಬಿಯಾದ ಶ್ರೀಮಂತನೊಬ್ಬ "ಐದು ಲಕ್ಷ ಡಾಲರ್ ಕೊಡ್ತೇವೆ" ಎಂದು ವಾಂಛಲ್ಯ ಒಡ್ಡಿದ. ಆಕೆ ದುರುದುರು ನೋಡಿ ತಲೆಯಾಡಿಸಿ ಅಲ್ಲಿಂದ ಹೊರಟು ಹೋದಳು!

ಸೌದಿಗಳು ಯಾಕೆ ಯುದ್ಧ ಬಯಸುವುದಿಲ್ಲ, ತಿಳಿಯಿತೆ? ■



ದಿನಚರಿ ಪುಟ

'ಸಂತೋಷವಾಗಿರುವೆ'
ಎಂದು ಬರೆದೆ
ಗುಂಡಿಗೆ ಹೊಡೆದುಕೊಳ್ಳಲು ಶುರುವಾಗಿ
ಸುಳ್ಳು ಸುಳ್ಳು ಎಂದು ಸಾರಿ ಹೇಳಿತು

ಸುಳ್ಳಿಗೆ ಪಶ್ಚಾತ್ತಾಪ ಪಟ್ಟಿತು

'ಬೇಯುತ್ತಲಿರುವೆ'
ಎಂದು ಬರೆದೆ

ಆರಾಮ ಅನಿಸುತ್ತಿದೆ,
ಗುಂಡಿಗೆ ತಹಬಂದಿಗೆ ಬರುತ್ತಿದೆ
ಒಂಟಿತನದ ವೇದನೆಗೆ
ಇದೊಂದೇ ಸರಿಯಾದ ಪದ;
ಮುಖವಾಡವಿಲ್ಲದ
ದಿನಚರಿ ಪುಟ

■ ಜ್ಯೋತಿ ಗುರುಪ್ರಸಾದ್


■ ಬಿಳಿದಾಳೆ ಪಾರ್ವತೀಶ್

ಬಿಡಿ ಚಿತ್ರಗಳು

ಅರ್ಧ ಜ್ಞಾನೋದಯ ಪ್ರಸಂಗ

ವಿಜಯ ಕರ್ನಾಟಕದ ಸಂಪಾದಕ ವಿಶ್ವೇಶ್ವರ ಭಟ್ಟರು ಅಪರೂಪಕ್ಕೆಂಬಂತೆ ಒಂದೆರಡು ಒಳ್ಳೆಯ ವಿಚಾರ ಚರ್ಚಿಸಿದ್ದಾರೆ.

ಜೂನ್ ಹತ್ತೊಂಬತ್ತರ ಸಂಚಿಕೆಯಲ್ಲಿ 'ಟಿವಿ ಚಾನಲ್‌ನಲ್ಲಿ ಹೋದ ಮಾನ ವಾಪಸ್ ಬರುವುದಾ?' ಅಂತ ಈ ಚರ್ಚೆ ವಿಷಯ.



ಪದ್ಮಪ್ರಿಯಾ ನಾಪತ್ತೆ, ನಂತರದ ಆತ್ಮಹತ್ಯೆ ಪ್ರಕರಣ, ಹಾವೇರಿ ಗೋಲಿಬಾರ್ ದುರಂತ, ಆಚುಪಿ ಕೊಲೆ-ಹೀಗೆ ಕೆಲ ಘಟನೆಗಳನ್ನು ನೆನೆದುಕೊಳ್ಳುವ ಭಟ್ಟರಿಗೆ ಟಿವಿ ಚಾನಲ್ಲುಗಳ ಬಗ್ಗೆ ಶ್ಯಾನೆ ಕೋಪ ಬಂದಿದೆ. ಈ ಚಾನಲ್ಲುಗಳು ಏನೇ ಘಟನೆ ಜರುಗಲಿ ಅದನ್ನು **Breaking News** ಎನ್ನುತ್ತಾ ಪ್ರಸಾರ ಮಾಡಿ, ಎಪಿಸೋಡು ತಯಾರಿಸಿ ಕೊನೆಗೆ ಟಿವಿ ಆಂಕರ್‌ಗಳೇ ತೀರ್ಪು ನೀಡುವುದು 'ಅನ್ಯಾಯ' ಅಂತ ಚೀರಿಕೊಂಡಿದ್ದಾರೆ.

ಆದರೆ ಹೀಗೆ ಚೀರುವಿಕೆಯೊಳಗೇ ಇನ್ನೊಂದು ಅನ್ಯಾಯವಾಗಿದೆ ಅಂತ ನಮ್ಮ ಅಂಬೋಣ.

ಅದೇನೆಂದರೆ ಭಟ್ಟರ ಪ್ರಕಾರ ಪದ್ಮಪ್ರಿಯ ನಾಪತ್ತೆ ಘಟನೆಗೆ ಸಿಕ್ಕ ವಿಪರೀತ ಪ್ರಚಾರದಿಂದ ಉಡುಪಿಯ ಬಜೆಪಿ ಶಾಸಕ ರಘುಪತಿ ಭಟ್ಟನ ವೈಯಕ್ತಿಕ ಜೀವನಕ್ಕೆ ಧಕ್ಕೆಯಾಗಿ ಅವರ ಮಾನ ಮರ್ಯಾದೆ ಹೋಯಿತಂತೆ. ಪದ್ಮಪ್ರಿಯ ಸತ್ತಿದ್ದು ಮಾಧ್ಯಮಗಳ ದಾಂಧಲೆಯಿಂದ ಅಂತೆ!

ಹಾವೇರಿ ಗೋಲಿಬಾರ್ ಕೂಡಾ ಅಷ್ಟೆ. ರೈತರತ್ತ ಪೊಲೀಸರು ಗುಂಡು ಹಾರಿಸಿದ್ದು, ಸಿದ್ದಲಿಂಗಪ್ಪ ಚೂರಿ ಕುಸಿದು ಬದ್ದಿದ್ದನ್ನೇ ಟಿವಿ ಚಾನಲ್ ಒಂದು (TV 9) ಸಾವಿರಾರು ಬಾರಿ ತೋರಿಸಿತು. ಇದರಿಂದ ಮತ್ತಷ್ಟು ದಂಗೆಗೆ ಪ್ರಚೋದನೆ ಸಿಗಬಹುದು. ಪೊಲೀಸರ ಮೇಲಿನ ಆಕ್ರೋಶಕ್ಕೆ ಇಂಬು ನೀಡಬಹುದು ಎಂದು ಪಾಪ ಭಟ್ಟರು ಕಳವಳ ಪಟ್ಟಿದ್ದಾರೆ.

ಇಲ್ಲೇ ನಿಮಗೊಂದು ಮಾತು ನೆನಪಿಸಿಬಿಡಬೇಕು.

ಕಳೆದ ವಾರ ಇನ್ನೊಬ್ಬ ವ್ಯಕ್ತಿ ಮಾಧ್ಯಮಗಳಿಗೆ ಇದೇ ತರಹದ ಬುದ್ಧಿವಾದ ಹೇಳಿದ್ದರು.

ಅದು ಯಡಿಯೂರಪ್ಪ!

ಮೇಲಿನ ಎರಡೂ ಘಟನೆಗಳು ನೇರವಾಗಿ ಬಜೆಪಿ ಸರ್ಕಾರದ ಕ್ರೌರ್ಯ ಹಾಗೂ ಚೆಡ್ಡಿ ಭಟ್ಟರ ಭಂಡತನಕ್ಕೆ ಸಂಬಂಧಿಸಿದ್ದ ವಿಚಾರ.

ಹಾಗಾಗಿ ವಿಭಟ್ಟರಿಗೆ ದಿಢೀರನೆ ಟಿವಿ ಚಾನಲ್‌ಗಳ ಬಗ್ಗೆ ರೇಗಿ ಹೋಗಿದೆ.

ಅಂದಹಾಗೆ ಇನ್ನೊಮ್ಮೆ ನೆನಪಿಸಿಕೊಳ್ಳಿ.

ಆಸ್ಟ್ರೇಲಿಯಾದಲ್ಲಿ ಡಾ. ಹನೀಫ್ ಬಂಧನವಾದಾಗ, ಕರ್ನಾಟಕದಲ್ಲಿ ಬಾಂಬ್ ಸ್ಫೋಟಗಳಾದಾಗ ಇದೇ ವಿಭಟ್ಟ ಏನು ಮಾಡಿದ್ದರೆಂದು? ಈಗಲೂ ಪ್ರತಾಪ್ ಸಿಮ್ಮನೆಂಬ ಬಾಲಕನ ಕಾಲಂನಲ್ಲಿ ಮುಸ್ಲಿಂ, ದಲಿತರ ವಿರುದ್ಧ ಏನೇನು **judgement** ಗಳನ್ನು ಹೇಳಿ ಬರೆಸುತ್ತಿದ್ದಾರೆಂದು?

ಇದೇ ಭಟ್ಟರು ಆಗ ಮತ್ತು ಈಗಲೂ ಬಹುತೇಕ ಬಾರಿ ತಾನೇ ನ್ಯಾಯಾಧೀಶನಂತೆ ಯಾರ್‍ಯಾರನ್ನೋ ಅಪರಾಧಿಯಾಗಿಸಿ, ಪ್ರತಿನಿತ್ಯ ಮುಸ್ಲಿಮರಿಗೆ ದೇಶದ್ರೋಹಿ ಹಣೆಪಟ್ಟಿ ಹಚ್ಚಿ ತನ್ನ ಪತ್ರಕರ್ತ ಜೀವನ ಪಾವನ ಮಾಡಿಕೊಳ್ಳುತ್ತಿದ್ದಾರೆ. **KFD** ಯವರು ಒಮ್ಮೆ ಕಿವಿ ಹಿಂಡಿದ ಮೇಲೂ ಈತ ಬದಲಾಗಿಲ್ಲ, ಆದರೆ ಟಿವಿ ಚಾನಲ್ಲುಗಳಿಗೆ ಈಗ ಬುದ್ಧಿ ಹೇಳಲು ಹೊರಟಿದ್ದಾರೆ.

ಇದನ್ನು 'ವಿಭಟ್ಟರ ಅರ್ಧ ಜ್ಞಾನೋದಯ ಪ್ರಸಂಗ' ಅಂತ ಅನ್ನಬಹುದಾ?

ಪತ್ರಕರ್ತನ ಸಾವು

ಸುದ್ದಿಮನೆಯಲ್ಲೊಂದು ಹಠಾತ್ ಸಾವು ಸಂಭವಿಸಿದೆ.

ಇದು ರವೀಂದ್ರ ಮೂಲಿಮನಿ ನೀಡಿರುವ ವಾರ್ನಿಂಗ್!

TV 9 ನ ಸೀನಿಯರ್ ಪ್ರೊಡ್ಯೂಸರ್ ರವೀಂದ್ರ ಮೂಲಿಮನಿಗೆ ಕಳೆದ ಮಂಗಳವಾರ **massive heart attack** ಆಗಿ ಸಾವು ಕರೆದೊಯ್ದಾಗ ಅವನಿಗೆ ಇನ್ನೂ ಇಪ್ಪತ್ತೊಂಬತ್ತು ವರ್ಷ!



ಅವತ್ತು ಬೆಳಗ್ಗೆ ಚಾನಲ್ ಕಚೇರಿಯ ಕ್ಯಾಂಟೀನ್‌ನಲ್ಲಿ ತಿಂಡಿ ತಿನ್ನುತ್ತಿರುವಾಗಲೇ ಹೃದಯಾಘಾತಕ್ಕೆ ಒಳಗಾದ ರವೀಂದ್ರನ ಜೀವ ಪಕ್ಕದಲ್ಲೇ ಇದ್ದ ಆಸ್ಪತ್ರೆಗೆ ಒಯ್ಯುವವರೆಗೂ ಕಾಯಲಿಲ್ಲ.

ರವೀಂದ್ರಗೆ ವಿಪರೀತ ಎನ್ನುವಷ್ಟು **bad cholestral** (ಕೊಲೆಸ್ಟ್ರಾಲ್) ಇತ್ತಂತೆ. ಮೊದಲು ಒಮ್ಮೆ ಎದೆನೋವು ಬಂದಿದ್ದರೂ ಅದನ್ನಾತ ನಿರ್ಲಕ್ಷಿಸಿದ್ದ. ಜೊತೆಗೆ ವಿಪರೀತ ಎನ್ನಬಹುದಷ್ಟು ಕೆಲಸದ ಒತ್ತಡ, **stress** ಕೂಡ ಇತ್ತು.

ಇವೆಲ್ಲಾ ಒಮ್ಮೆಗೆ ದಾಳಿಯಿಟ್ಟರೆ ಎಂಥ ಗಟ್ಟಿ ದೇಹವೂ ಕುಸಿದು ಬೀಳಬೇಕಷ್ಟೇ.

ರವೀಂದ್ರನ ಈ ಹಠಾತ್, ದುರಂತದ ಸಾವನ್ನು ನಮ್ಮ ಪತ್ರಿಕೆ ಹಾಗೂ ಟಿವಿ ಚಾನಲ್ಲುಗಳ ಮ್ಯಾನೇಜ್‌ಮೆಂಟಿನವರು ನಿರ್ಲಕ್ಷಿಸಕೂಡದು.

ಕನ್ನಡ ಟಿವಿ ಹಾಗೂ ಪತ್ರಿಕಾ ರಂಗದಲ್ಲಿ ಈಗ ಎಂದೂ ಕಾಣದಷ್ಟು ಪೈಪೋಟಿ, ವೇಗ ಹಾಗೂ ರಭಸ ಕಾಣುತ್ತಿದೆ. ಇದನ್ನೆಲ್ಲಾ ನಿಭಾಯಿಸಿ ಮುಂದಡಿಯಿಡುವವರು ಮಾತ್ರ ಗೆಲ್ಲುತ್ತಾರೇನೋ ಸರಿ. ಆದರೆ ಈ ಪೈಪೋಟಿಯೆಂಬ **war field** ನಲ್ಲಿ ಸೈನಿಕರಂತೆ ಕಾದಾಡುವವರು ಪತ್ರಕರ್ತರು.

ಅವರಿಗೆ ಕೈತುಂಬಾ ಸಂಬಳ ಕೊಟ್ಟರಷ್ಟೇ ಸಾಲದು, ಜೊತೆಗೆ ಸಾಕಷ್ಟು ವಿಶ್ರಾಂತಿ, ಊಟ-ನಿದ್ರೆಗೆ ಸಮಯವೂ ಸಿಗಬೇಕು. ಇವತ್ತು ಯಾರೇ ಪತ್ರಕರ್ತರನ್ನು ಕೇಳಿದರೂ 'ವಿಪರೀತ ಟೆನ್ಶನ್, ಕೆಲಸ ಜಾಸ್ತಿ, ನಿದ್ದೆಯಿಲ್ಲ' ಎಂಬ ಉತ್ತರ ಸಿಕ್ಕುವುದು ಮಾಮೂಲಾಗಿ ಹೋಗಿದೆ.


ರವೀಂದ್ರ ಬಲಿಯಾಗಿರುವುದು ಇಂಥ ಸಂದರ್ಭದಲ್ಲೇನೆ.

ಇದು ಪತ್ರಕರ್ತರಿಗೂ ಒಂದು ಎಚ್ಚರಿಕೆ ನೀಡುವ ದುರಂತ.

ಒಳ್ಳೆ ಕೆಲಸದ ಅವಕಾಶ, ಕೀರ್ತಿ, ಹಣದ ಬೆನ್ನತ್ತಿ ಹೋಗುವವರು ಆ ಉದ್ವೇಗದಲ್ಲಿ ತಮ್ಮ ದೇಹಕ್ಕೇನಾಗುತ್ತಿದೆ ಎಂಬುದನ್ನೇ ಗಮನಿಸಿಕೊಂಡಿರುವುದಿಲ್ಲ. ತಮ್ಮ ಮನಸ್ಸು, ದೇಹಕ್ಕೆ ಬೇಕಾದ ವಿಶ್ರಾಂತಿ, ವ್ಯಾಯಾಮ, ಕುಟುಂಬ ಜೀವನ ಹಾಗೂ **recreation** ಗಳನ್ನು ಪತ್ರಕರ್ತರಾದವರು ನಿರ್ಲಕ್ಷಿಸಕೂಡದು.

ರವೀಂದ್ರ ಮೂಲಿಮನಿ ಬಹಳ **dynamic** ಹಾಗೂ ಜಾಣ ಎನಿಸಿಕೊಂಡಿದ್ದಾತ. ಬೆಳೆಯಲು ಬೇಕಾದಷ್ಟು ಅವಕಾಶಗಳಿದ್ದವು. ಮುಂದಿನ ನವೆಂಬರ್‌ನಲ್ಲಿ ಮದುವೆಗಾಗಿ ಸಿದ್ಧತೆಯೂ ನಡೆದಿತ್ತು.

ಆದರೆ....



ಬೆತ್ತಲೆ ಮಹಿಳೆಯೊಬ್ಬಳು ಬಾರ್ ಒಂದಕ್ಕೆ ಹೋಗಿ ಒಂದು ಡ್ರಿಂಕ್ ಬೇಕೆಂದು ಕೇಳುತ್ತಾಳೆ.

ಅದನ್ನು ಅವಳಿಗೆ ಕೊಟ್ಟ ಸಪ್ಲೈಯರ್ ಅವಳನ್ನೇ ನೋಡುತ್ತಾ ನಿಲ್ಲುತ್ತಾನೆ.

"ಏನು ನೀನು ಹಿಂದೆಂದೂ ಬೆತ್ತಲೆ ಹೆಂಗಸನ್ನು ನೋಡಿಲ್ಲವಾ?" ಎಂದು ಆಕೆ ಕೇಳುತ್ತಾಳೆ.

"ಹಾಗೇನಿಲ್ಲ, ಈ ಡ್ರಿಂಕಿಗೆ ನೀನು ಎಲ್ಲಿಂದ ಹಣ ತೆಗೆಯುತ್ತೀಯಾ ಎಂದು ನೋಡಲು ಕಾಯುತ್ತಿದ್ದೇನೆ" ಎಂದು ಆತ ಉತ್ತರಿಸುತ್ತಾನೆ.

* * * * * *

ಒಂದಾನೊಂದು ಕಾಲದಲ್ಲಿ ಒಬ್ಬನಿದ್ದ, ಒಂದು ದಿನ ಆತ ಹುಡುಗಿಯೊಬ್ಬಳನ್ನು ಭೇಟಿಯಾಗಿ "ನೀನು ನನ್ನನ್ನು ಮದುವೆಯಾಗುತ್ತೀಯಾ" ಎಂದು ಕೇಳಿದ.


ಅದಕ್ಕೆ ಆ ಹುಡುಗಿ "ಇಲ್ಲ" ಎಂದು ಉತ್ತರಿಸಿದಳು.

ಹುಡುಗ ಸಂತೋಷದಿಂದ ತನ್ನ ಜೀವನ ಸಾಗಿಸಿದ.

* * * * * *

ಕೈಯಲ್ಲಿ ಗಟ್ಟಿಯಾಗಿ ಹಿಡಿದುಕೊಂಡು, ಅದನ್ನು ಇಸುಕಿ, ನೆಕ್ಕಿ, ಚೀಪಿ, ಮೇಲಿಂದ ಕಚ್ಚಿ ರಸವನ್ನು ಹೀರಿ, ಬಾಯನ್ನು ಚಪ್ಪರಿಸುತ್ತಾ.....

ಮಾವಿನ ಹಣ್ಣನ್ನು ತಿನ್ನಬೇಕು. ಆಗಲೇ ಅದನ್ನು ಆಸ್ವಾದಿಸಲು ಸಾಧ್ಯ!



ಒಂದು ಪತ್ರ

ಇನ್ನೈದು ವರ್ಷಗಳಲ್ಲಿ ಇನ್ನೆಷ್ಟು ನೆತ್ತರು?

ರಾಜ್ಯದಲ್ಲಿ ಇತ್ತೀಚೆಗೆ ನಡೆದ ಚುನಾವಣೆಯ ಸಂದರ್ಭದಲ್ಲಿ ತುಸು ಅತಿ ಎನ್ನುವಂತೆ ಬಜೆಪಿಯ ಗೆಲುವಿಗೆ ಅಡ್ಡಿಪಡಿಸಿದ ಪತ್ರಿಕೆಯಲ್ಲಿ ನಮ್ಮದೇ (ಗೌರಿ ಲಂಕೇಶ್) ಎನ್ನಬಹುದು. ಯಾವ ಘಟನೆಗಳು ಸಂಭವಿಸಬಹುದು, ಮುಂದಿನ ದಿನಗಳಲ್ಲಿ ರಾಜ್ಯದ ಚಿತ್ರಣ ಹೀಗೆ ಆಗುತ್ತದೆ ಎಂಬ ಮುಂಗನಸು ಕಂಡ ಪತ್ರಿಕೆಯ ಬಳಗಕ್ಕೆ ಉಂಟಾದ ಕಳವಳ, ದುಗುಡಗಳು ಸಾಮಾನ್ಯ ಜನರಿಗೆ ಅರ್ಥವಾಗಲೇ 'ಲ್ಲ, ವಚನಭ್ರಷ್ಟನಾದರೂ ಸರಿ ಅಧಿಕಾರದ ಗದ್ದುಗೆ ನಿಮ್ಮ ಕೈಗೆ ನೀಡುವುದಿಲ್ಲ ಎಂದು ಅಧಿಕಾರ ಹಿಂದಕ್ಕೆ ಪಡೆದ ದೇವೇಗೌಡರ ಮನೋಭಾವವನ್ನು ಜನತೆ ತಪ್ಪಾಗಿ ಅರ್ಥೈಸಿದರು. 'ಯಡ್ಡಿ'ಯ ಮೊಸಳೆಕಣ್ಣೀರಿಗೆ ಮೋಸ ಹೋಗಿ ಜನತೆ ಬಜೆಪಿಯನ್ನು ಬೆಂಬಲಿಸಿದರು.

ದಿನಗಳೆದಂತೆ ಯಡ್ಡಿಯ ಮುಖವಾಡದ ಒಂದೊಂದೆ ಪದರುಗಳು ಜಾರತೊಡಗಿವೆ. ಗೊಬ್ಬರ ಬೇಕೆಂದು ನೆರೆದಿದ್ದ ನೂರಾರು ಮಂದಿಯ ಮೇಲೆ ಗುಂಡಿನ ಮಳೆಗರೆಯುವಷ್ಟು ನಿರ್ಲಜ್ಜವಾಗಿ ವರ್ತಿಸುತ್ತಾರೆಂದರೆ ಈ ರಕ್ತ ಪಿಪಾಸುಗಳಿಗೆ ಏನೆನ್ನಬೇಕು? ಬಹುಶಃ ನಕ್ಸಲರೆಂಬ ಹಣೆಪಟ್ಟಿಯೊಂದಿಗೆ ಪಶ್ಚಿಮ ಘಟ್ಟಗಳಲ್ಲಿ ಬಜೆಪಿ ವಿರೋಧಿಗಳನ್ನು ಕೊಲ್ಲುವುದರೊಂದಿಗೆ ಉದ್ಘಾಟನೆಯಾಗಬಹುದೆಂದು ಊಹಿಸಿದ್ದು ತುಸು ವ್ಯತ್ಯಾಸವಾಗಿ ಈ ನೆಲದ ರೈತನ 'ಬಲಿದಾನ'ದೊಂದಿಗೆ ಬಜೆಪಿ ಮೊದಲ ಹಮಿಷ್ಟನ್ನು ಸ್ವೀಕರಿಸಿದಂತಾಗಿದೆ. ಇನ್ನೈದು ವರ್ಷ ಕಳೆಯುವುದರೊಳಗೆ ಇನ್ನೆಷ್ಟು ನೆತ್ತರು ಈ ನೆಲಕ್ಕರ್ಪಿಸುವರೋ ಕಾದು ನೋಡಬೇಕಾಗಿದೆ.

ಸುಷ್ಮಾ ಸ್ವರಾಜ್ ಹಣೆಯ ತುಂಬಾ ಕುಂಕುಮ, ಮುಡಿ ತುಂಬಾ ಹೂ ತೊಟ್ಟು ಭಾರತೀಯ ನಾರಿಯ ಪೋಸು ನೀಡಿ ಪರೋಕ್ಷವಾಗಿ ಸೋನಿಯಾರ ವೈಧವ್ಯ ಮತ್ತು ಕ್ರಿಶ್ಚಿಯಾನಿಟಿಗಳನ್ನು ಅಣಕಿಸುವಂತೆ ಮಾತನಾಡುವ ಮಲ್ಲಿ, ಈಗ ತನ್ನ ಪಕ್ಷದ ಶಾಸಕನೊಬ್ಬನ ಹೆಂಡತಿ ಪರಸಂಗ ಮಾಡುವಂತಹ ಪರಿಸ್ಥಿತಿ ಬಂದರೂ ತುಟಿಪಿಟಿ ಕ್ಕೆನ್ನದೆ ಕುಂತಿದ್ದು ನೋಡಿದರೆ ಭಾರತ-ಅದರಲ್ಲೂ ಕರ್ನಾಟಕ -ಸನಾತನ ಕಾಲಕ್ಕೆ ಜಾರುತ್ತಿದೆಯೇನೋ ಅನಿಸುತ್ತಿದೆ. ಅಸಹಾಯಕ ಹೆಣ್ಣು ಮಗಳ ಸಹಾಯಕ್ಕೆ ಬರದೇ, ಸತ್ತವಳ ಸಾವಿಗೆ ಕಾರಣರಾದವರ ಸೆರೆ ಹಿಡಿಯದೇ, ಕೊಲೆಗಡುಕರನ್ನು ಸಂರಕ್ಷಿಸುವುದರ ಕಡೆಗೆ ಹೆಚ್ಚುಗಮನ ಹರಿಸುವುದನ್ನು ನೋಡಿದರೆ ಅಂದಿನ ಮೈತ್ರಾದೇವಿಯ ಸಾವಿನ ಸ್ಥಿತಿಯೇ ಪದ್ಮಪ್ರಿಯಾರ ಸಾವಿಗೂ ಬರುವುದರಲ್ಲಿ ಎರಡು ಮಾತಿಲ್ಲ.

ಸ್ವತಃ ಮಡದಿ ಸತ್ತಾಗ ಅಂತಃಕರಣದ ನಾಲ್ಕು ಕಂಬನಿ ಸುರಿಸದ ಯಡ್ಡಿಯ ಪಕ್ಷದಲ್ಲಿ ಇನ್ನೆಂಥವರಿರಲು ಸಾಧ್ಯ, ರೇಣುಕಾ ಚಾರ್ಯ, ರಘುಪತಿಭಟ್ಟರಲ್ಲದೇ? ಈ ಒಂದೆರಡು ಪ್ರಕರಣಗಳೇ ಸಾಕು ಭಾರತಮಾತೆಯೇ ಮೈದುಂಬಿದಂತೆ ಕುಣಿಯುವ ಚೆಡ್ಡಿಗಳಿಗೆ ಒದ್ದೆಯ ಮೇಲೆ ಒದ್ದು ಮಲಗಿಸಿದಂತಾಗಿದೆ. ಒಬ್ಬ ಸಾಮಾನ್ಯ ಅಂದಾಜಿಸುವ, ತೀರ್ಮಾನಿಸುವ ಸಂಗತಿಯನ್ನು ಒಂದು ಸರ್ಕಾರ, ಅದರ ಪೊಲೀಸ್ ವ್ಯವಸ್ಥೆ ಕೈಗೊಳ್ಳಲು ಸಾಧ್ಯವಿಲ್ಲವೆಂದರೆ ಇವರಿಂದ ಇನ್ನಾವ ತರಹದ ರಕ್ಷಣೆ, ಪೋಷಣೆ ಬಯಸಲು ಸಾಧ್ಯ?

ಒಲೆ ಹತ್ತಿ ಉರಿದರೆ ನಿಲಬಹುದು
ಧರೆ ಹತ್ತಿ ಉರಿದರೆ ನಿಲಬಹುದೇ?

ಬಿಜ್ಜಳನ ಸಾಮ್ರಾಜ್ಯದೊಳಗಿದ್ದ ಬಸವಣ್ಣ ನೀಡಿದ ಎಚ್ಚರಿಕೆ ಇಂದಿನ ಆಡಳಿತ ಚುಕ್ಕಾಣಿ ಹಿಡಿದವರಿಗೂ ಅನ್ವಯಿಸುತ್ತದೆ. ಇಂದು ಒಂದೆರಡು ಜಿಲ್ಲೆಗಳಲ್ಲಿ ಇದ್ದ ಅಸಮಾಧಾನವನ್ನು 'ಗೋಲಿಬಾರ್'ನೊಂದಿಗೆ ಅಡಗಿಸಬಹುದು. ಆದರೆ ಇಡೀ ನಾಡಿನ ರೈತ ಕುಲವೇ ಎದ್ದು ನಿಂತರೆ ಏನಾದೀತು ಊಹಿಸಿ. ಈ ಅಂಶವನ್ನು ತಲೆಯಲ್ಲಿಟ್ಟುಕೊಂಡೆ ಮುಂದುವರೆಯಬೇಕಾಗುತ್ತದೆ.

'ಜಾತಿ'ಯವನೆಂಬ ಒಂದೇ ಕಾರಣಕ್ಕೆ ನಾಡಿನ ಬಹುಪಾಲು ಲಿಂಗಾಯತ ಸಮುದಾಯ ಮತ್ತು ಮಠಾಧೀಶರು ಬಜೆಪಿಯ ಕಡೆ ವಾಲಿದರು. ನಿರೀಕ್ಷಿಸಿದಂತೆ ತಮ್ಮ ಕುಲದವನೊಬ್ಬ ಮುಖ್ಯಮಂತ್ರಿಯಾದರು. ಆದರೆ ಸಾಧಿಸಿದ್ದೇನು? ಮರುಘಳಿಗೆಯೇ ರೈತರ ಮಾರಣಹೋಮ. ಎಲ್ಲಿದ್ದಾರೆ ಮಠಾಧೀಶರು ಈಗ? ಅಧಿಕಾರ ಹಸ್ತಾಂತರಿಸದ ದೇವೇಗೌಡರ ವಿರುದ್ಧ ಲಂಗೋಟಿ ಎತ್ತಿಕಟ್ಟಿಕೊಂಡು ಹೇಳಿಕೆ ನೀಡಿ ಬೀದಿಗಿಳಿದವರು. ಈ ನಾಡಿನ ಸಾಮಾನ್ಯ ರೈತನೊಬ್ಬ ಸತ್ತಾಗ ಈ ರೀತಿ ಮಾಡಿದ್ದು ತಪ್ಪು ಎಂದು ಹೇಳುವ ತಾಕತ್ತು ಒಬ್ಬನೇ ಸ್ವಾಮೀಜಿಗೆ ಬರಲಿಲ್ಲ. ಏಕೆಂದರೆ ಸಾಮಾನ್ಯನ ಜೀವಕ್ಕಿಂತ ಕುಲಬಾಂಧವನ ಅಧಿಕಾರವೇ ಘನವೆಂದಾಯಿತು.


ರಾಮಾಯಣ ಕಾಲದ ಶ್ರೀರಾಮ ಗರ್ಭಿಣಿ ಸ್ತ್ರೀಯನ್ನು ಕಾಡಿಗೆ ಕಳುಹಿಸಿ ಏನೆಲ್ಲಾ ಅಗ್ನಿಪರೀಕ್ಷೆ ನೀಡಿದರೂ ಕೊನೆಯಲ್ಲಿ ಮರ್ಯಾದೆಗೋಸ್ಕರವಾದರೂ ಪುನಃ ಸ್ವೀಕರಿಸುತ್ತಾನೆ. ಆದರೆ ಇಂದಿನ ರಘುಪತಿ ಭಟ್ಟರು ಮಡದಿಯನ್ನು ಮನೆಯಿಂದ ದೂರದ ದೆಹಲಿಗೆ ಕಳುಹಿಸಿಕೊಟ್ಟರು. ಹಾಗೆಯೇ ಹಿಂಬದಿಯಿಂದ ಕೊಲೆಗಡುಕರನ್ನು ಕಳಿಸಿಕೊಟ್ಟರು. ಇದೆಲ್ಲಾ ಮುಗಿದಾದ ಮೇಲೆ ಅತುಲ್‌ನನ್ನು ಬಲಿ ಕೊಡಲು ಕಾಯುತ್ತಿದ್ದಾರೆ. ಪತ್ರಿಕೆಯಿಂದ ಇನ್ನಷ್ಟು ನಿಖರ ವರದಿಗಾಗಿ ಕಾಯುತ್ತಿದ್ದೇವೆ.

ಈ ಹಿಂದೆ ಗುತ್ತೇದಾರ್ ಕುಟುಂಬ ಕಲಹ; ಪದ್ಮಪ್ರಿಯಾಳ ಪ್ರಣಯ ಪ್ರಸಂಗ ಕಂಡು "ಬಂಗಲೆಯಲ್ಲೇನಿದೆ ಬದುಕು, ಅದು ಗಟಾರಕ್ಕಿಂತಲೂ ಕೊಳಕು" ಎಂದು ಜನರಿಗೆ ಅನ್ನಿಸಿದ್ದರೆ ತಪ್ಪೇನಿಲ್ಲ. ಕುಡಿದು ಬಂದು ನಶೆಯಲ್ಲಿ ಹೆಂಡತಿಗೆ ಹೊಡೆದರೂ ಬೆಳಿಗ್ಗೆ ಎದ್ದು ಹೆಂಡತಿಯನ್ನು ಎತ್ತಿನ ಗಾಡಿ ಮೇಲೆ ಕೂರಿಸಿಕೊಂಡು ಹೊಲಕ್ಕೆ ಹೋಗುವ ಸೋಮಣ್ಣನು ರಘುಪತಿ ಭಟ್ಟನಿಗಿಂತ ಕೆಟ್ಟವನಲ್ಲ ಅನಿಸುತ್ತದೆ.

ಕೊನೆಯದಾಗಿ, ಕನ್ನಡನಾಡಿನ ಘನತೆಗಾಗಿ ಪೊಲೀಸ್ ಅಧಿಕಾರಿಗಳ ಗೌರವಕ್ಕಾಗಿಯಾದರೂ ಸತ್ಯವನ್ನು ಜನತೆಗೆ ತಿಳಿಸಿ. ನಿಜವಾದ ಅಪರಾಧಿಗೆ ಶಿಕ್ಷೆ ಕೊಡಿ. ಶಿಷ್ಟಾಚಾರಕ್ಕಾದರೂ ರಘುಪತಿ ಭಟ್ಟನನ್ನು ಬಂಧಿಸಿ, ಅತುಲ್‌ನನ್ನು ರಕ್ಷಿಸಿ. ಸರ್ಕಾರದ ತೀರ್ಮಾನವೆಂದರೆ ಆರೆಸ್ಸೆಸ್, ವಿಹೆಚ್‌ಪಿಗಳ ಸಭೆಯ ತೀರ್ಮಾನವಲ್ಲ. ಈ ನಾಡಿನ ಜನತೆಗೆ ತಮ್ಮ ಅನ್ನ ಉಂಡು ನೆಮ್ಮದಿಯಿಂದ ಬದುಕುವ ವಾತಾವರಣ ಕೊಡಿ. ನಮ್ಮನ್ನು ನಮ್ಮ ಪಾಡಿಗೆ ಬಿಡಿ. ಮೋದಿಯ ಮಾದರಿ ಆಡಳಿತ ಅರ್ಥವಾಯಿತು ಬಿಡಿ.

-ಮಂಜಣ್ಣ, ಸೊರಬ.

'ಮಠ'ದಿಂದ ಎದ್ದು ಬಂದ ಗುರು



ಹಲವಾರು ವರ್ಷಗಳ ಹಿಂದೆ 'ಪ್ರಜಾಮತ' ಎಂಬ ದಿವಂಗತ ಪತ್ರಿಕೆಯಲ್ಲಿ ಒಂದು ಫೋಟೋ ಪ್ರಕಟವಾಗಿತ್ತು. ಆ ಫೋಟೋದಲ್ಲಿ ಡಾ. ರಾಜ್‌ಕುಮಾರ್ ತಮ್ಮ ಎದುರಿಗೆ ನಿಂತು ತಮ್ಮನ್ನು ಗೈಡ್ ಮಾಡುತ್ತಿದ್ದ ಶಂಕರ್‌ನಾಗ್‌ರ ಮಾತನ್ನೇ ಏಕಚಿತ್ತದಿಂದ ಆಲಿಸುತ್ತಿದ್ದರು. 'ಒಂದು ಮುತ್ತಿನ ಕತೆ' ಸಿನಿಮಾದ ಚಿತ್ರೀಕರಣದಲ್ಲಿ ಶಂಕರ್‌ನಾಗ್ ಡಾ. ರಾಜ್‌ರನ್ನು ನಿರ್ದೇಶಿಸುತ್ತಿದ್ದ ದೃಶ್ಯವದು. ಈ ಫೋಟೋವನ್ನು ನೋಡಿದ, ಆಗಿನ್ನೂ ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದ ಆ ಪುಟ್ಟ ಬಾಲಕ ಅದಾಗಲೇ ರಾಜ್‌ರ ದೊಡ್ಡ ಆರಾಧಕನಾಗಿದ್ದ. ತಾನು ಕೂಡ ಮುಂದೊಂದು ದಿನ ಹಾಗೇ ನಟನಟಿಯರ ಎದುರು ನಿಂತು ಅವರನ್ನು ಗೈಡ್ ಮಾಡಬೇಕು ಎಂಬ ವಿಚಿತ್ರ ಆಸೆ ಆ ಹುಡುಗನ ತಲೆಗೆ ಹೊಕ್ಕಿತ್ತು. ಉಂಡು, ಆಡಿ, ಹೊದ್ದು ಮಲಗುವ ವಯಸ್ಸಿನ ಹುಡುಗನ ಮನಸ್ಸಿನಲ್ಲಿ ಅಂದು ಚಿಗುರಿದ ಸುಪ್ತ ಬಯಕೆ ಇಂದು ನಿಜಕ್ಕೂ ಆತನನ್ನು ಒಬ್ಬ ಕ್ರಿಯಾಶೀಲ ನಿರ್ದೇಶಕನನ್ನಾಗಿ ಬೆಳೆಸಿದೆ.

ಆ ಹುಡುಗ ಮತ್ತ್ಯಾರೂ ಅಲ್ಲ. ಆತ ನಿರ್ದೇಶಿಸಿದ ಮೊದಲ ಚಿತ್ರದಲ್ಲೇ ಎಲ್ಲರೂ ಆತನತ್ತ ನೋಡುವಂತೆ ಮಾಡಿದ 'ಮಠ' ಚಿತ್ರದ ನಿರ್ದೇಶಕ ಗುರುಪ್ರಸಾದ್.

ಗುರುಪ್ರಸಾದ್ ಹುಟ್ಟಿಬೆಳೆದದ್ದೆಲ್ಲಾ ಬೆಂಗಳೂರಿಗೆ ಹತ್ತಿರವೇ ಇರುವ ಕನಕಪುರದಲ್ಲಿ. ಅವರದ್ದು ತೀರ ಬಡ ಬ್ರಾಹ್ಮಣರ ಕುಟುಂಬ. ತಂದೆ ದೇವಸ್ಥಾನವೊಂದರಲ್ಲಿ ಅರ್ಚಕರಾಗಿದ್ದರಿಂದ ಅವರ ಆದಾಯವೂ ಅಷ್ಟಕ್ಕಷ್ಟೇ. ಹಾಗೆಂದು ಗುರು ಸುಮ್ಮನೇ ಕುಳಿತಿರಲಿಲ್ಲ. ಶಾಲೆಯಲ್ಲಿ ಓದುತ್ತಿರುವಾಗಲೇ ಸಮಯ ಸಿಕ್ಕಾಗಲೆಲ್ಲ ಲಾಟರಿ ಟಿಕೆಟ್ ಮಾರುತ್ತಿದ್ದರು, ಲಾಟರಿ ವ್ಯಾಪಾರ ನಿಂತಾಗ ಕಾಫಿಪುಡಿ ಮಾರಲಾರಂಭಿಸಿದರು... ಹೀಗೆ ಚಿಕ್ಕ ವಯಸ್ಸಿನಲ್ಲೇ ಮನೆಯಲ್ಲಿನ ಬಡತನವನ್ನು ನೀಗಿಸಲು ದುಡಿಮೆಯನ್ನು ಹೆಗಲಿಗೇರಿಸಿಕೊಂಡವರು.....

ಹೀಗೆ ಕಷ್ಟಪಡುತ್ತಲೇ ಅವರು ಬಿಎಸ್ಸಿ ಓದಿ ಮುಗಿಸಿದರು. ನಂತರ ಅವರು ಸೇರಿದ್ದು ಹಿಂದೂಸ್ಥಾನ್ ಲೀವರ್ ಎಂಬ ದೊಡ್ಡ ಕಂಪನಿಯನ್ನು. ತಿಂಗಳಿಗೆ ಇಪ್ಪತ್ತೈದು ಸಾವಿರ ರೂಪಾಯಿಗಳ ದೊಡ್ಡ ಸಂಬಳ ಬರುವ ಸೈಂಟಿಸ್ಟ್ ಕೆಲಸ ಗುರು ಅವರದ್ದು.

ಆದರೆ ಸೈಲೆಂಟಾಗಿ ಮನಸ್ಸಿನಲ್ಲಿ ಕೊರೆಯುತ್ತಿದ್ದ ನಿರ್ದೇಶಕನಾಗುವ ಹಪಹಪಿಗೆ ಸಮಾಧಾನವಾದರೂ ಎಲ್ಲಿಂದ? ತಾನು ಕೆಲಸಕ್ಕೆ ಸೇರಿದ ಆರಂಭದಲ್ಲೇ "ನಾನು ಐದು ವರ್ಷ ಮಾತ್ರ ಇಲ್ಲಿ ಕಾರ್ಯ ನಿರ್ವಹಿಸುತ್ತೇನೆ" ಎಂದು ಅಡ್ವಾನ್ಸ್ ಆಗಿ ಘೋಷಿಸಿಬಿಟ್ಟಿದ್ದರು. ಹೇಳಿದ ಮಾತಿನಂತೆ ಐದು ವರ್ಷಗಳ ಅವಧಿ ಮುಗಿಯುತ್ತಲೇ ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೊರಬಂದ ಗುರುಪ್ರಸಾದ್ ತಮ್ಮ ಧೈರ್ಯವನ್ನು ಪ್ರದರ್ಶಿಸಿದರು. ಆದರೆ ಹೀಗೆ ಕೆಲಸ ಬಿಡುವ ಆರು ತಿಂಗಳ ಮುನ್ನ ಮದುವೆಯಾಗಿದ್ದ ಗುರು ತನ್ನ ಬಾಳಸಂಗಾತಿಯಾಗಲಿರುವ ಹುಡುಗಿಗೆ "ಇನ್ನಾರು ತಿಂಗಳಲ್ಲಿ ನಾನು ಈ ಕೆಲಸ ಬಿಟ್ಟು ಸಿನಿಮಾ ಸೇರುತ್ತೇನೆ" ಎಂದಿದ್ದರಂತೆ. ಅವರ ಈ 'ಹುಚ್ಚು' ಮಾತನ್ನು ಕೇಳಿದ ನಂತರವೂ ಅವರನ್ನು ಮದುವೆಯಾದ ಆ ಹುಡುಗಿಯ ಧೈರ್ಯ ಗುರುವಿನದ್ದಕ್ಕಿಂತಲೂ ದೊಡ್ಡದ್ದು ಎನ್ನಲೇ ಬೇಕು!

ಸಾಮಾನ್ಯವಾಗಿ ಚಿತ್ರರಂಗದಲ್ಲಿ ಏನನ್ನಾದರೂ ಸಾಧಿಸಬೇಕು ಎಂಬ ಕನಸಿನೊಂದಿಗೆ ಗಾಂಧಿನಗರಕ್ಕೆ ಎಂಟ್ರಿ ಮಾಡುವವರಲ್ಲಿ ಹೆಚ್ಚಿನವರು ಸಿಂಗಲ್ ಇಡ್ಲಿಗೆ, ಅರ್ಧ ಕಾಫಿಗೆ ಕಾಸಿಲ್ಲದೆ ಪರದಾಡುವವರೇ. ಆದರೆ ಗುರು ಮಾತ್ರ ಈ ವಿಷಯದಲ್ಲಿ ಮುಂಜಾಗ್ರತೆ ವಹಿಸಿದ್ದರು. ಚಿತ್ರರಂಗದ ವಾಸ್ತವವನ್ನು ಮೊದಲೇ ಸ್ಟಡಿ ಮಾಡಿದ್ದ ಅವರು ಅಲ್ಲಿನ ಆರ್ಥಿಕ ಸಂಕಷ್ಟಗಳಿಗೆ ಸಿಲುಕಬಾರದೆಂಬ ದೂರದೃಷ್ಟಿಯಿಂದ ತಾವು ದುಡಿದಿದ್ದ ಹಣದಲ್ಲಿ ಒಂದಷ್ಟನ್ನು ಬ್ಯಾಂಕಿನಲ್ಲಿ ಜಮೆ ಮಾಡಿದ್ದರು. ಅವಕಾಶ ಕೇಳಿ ಯಾರ ಬಳಿ ಹೋದರೂ ಅವರಿಗೆ ಗುರು ಮೊದಲು ತೋರಿಸುತ್ತಿದ್ದದ್ದು ತನ್ನ ಬ್ಯಾಂಕ್ ಬ್ಯಾಲೆನ್ಸನ್ನು. ಜೊತೆಗೆ ತನ್ನಲ್ಲಿರುವ ಪ್ರತಿಭೆಯನ್ನು ಪರೀಕ್ಷೆಗೆ ಒಡ್ಡುವುದು ನನ್ನ ಗುರಿಯೇ ವಿನಃ ನಿಮ್ಮ ಹಣವಲ್ಲ" ಎಂಬ ನೇರ ಮಾತು. ಯಾಕೆಂದರೆ ಹೊಸಬರಿಗೆ ಇಲ್ಲಿ ಕಾಸು ಕೊಡಬೇಕೋ ಎಂಬ ಪರಿಕಲ್ಪನೆಯಲ್ಲಿ ಅವಕಾಶ ನಿರಾಕರಿಸುವವರೇ ಚಿತ್ರೋದ್ಯಮದಲ್ಲಿ ಹೆಚ್ಚು.

ಹೀಗೆ ಅವಕಾಶ ಅರಸಿ ಹೊರಟ ಗುರು ಮೊದಲಿಗೆ ಸೇರಿದ್ದು ಟಿ.ಎನ್. ಸೀತಾರಾಂ ತಂಡವನ್ನ. ಆಗತಾನೆ ಶುರುವಾಗಿದ್ದ 'ಮನ್ವಂತರ' ಧಾರಾವಾಹಿಗೆ ಎರಡು ವರ್ಷ ನಿರಂತರವಾಗಿ ಚಿತ್ರಕತೆ, ಸಂಭಾಷಣೆಯನ್ನು ಬರೆಯುವುದರೊಂದಿಗೆ ಸಂಚಿಕೆ ನಿರ್ದೇಶನದ ಅನುಭವವೂ ಅವರಿಗೆ ಸಿಕ್ಕಿತು. ಆದರೆ ಈ ಏಕತಾನತೆಯ ಕೆಲಸದಿಂದ ಬೇಸರಗೊಂಡ ಗುರುಪ್ರಸಾದ್ ನಂತರ ಸೇರಿದ್ದು ಸುನೀಲ್ ಕುಮಾರ್ ದೇಸಾಯಿಯವರ 'ಮರ್ಮ' ಚಿತ್ರದ ಅಸೋಸಿಯೇಟ್ ಆಗಿ.

ಅರ್ಚಕನ ಆಸ್ತಿಕತೆ!

ಕಾಲೇಜಿನ ದಿನಗಳಲ್ಲೇ ಓದಿನ ಜೊತೆಜೊತೆಯಲ್ಲೇ ಪೌರೋಹಿತ್ಯವನ್ನೂ ಮಾಡುತ್ತಿದ್ದ ಗುರುಪ್ರಸಾದ್ ಇದುವರೆಗೆ ಮಾಡಿಸಿದ ಮದುವೆಗಳ ಸಂಖ್ಯೆ ಎಷ್ಟು ಗೊತ್ತೇ? ಬರೋಬ್ಬರಿ ನೂರ ಅರವತ್ಮೂರು! ಹೀಗೆ ಪಕ್ಕಾ ಆಸ್ತಿಕನಾಗಿ ಮದುವೆ ಮಾಡಿಸುತ್ತಾ, ತಿಥಿಗಳಲ್ಲಿ ಪಿಂಡ ಹಾಕಿಸುತ್ತಿದ್ದ ಗುರುಪ್ರಸಾದ್ ಇಂದು ಪಕ್ಕಾ ನಾಸ್ತಿಕವಾದಿ. ಯಾವುದೇ ನಂಬಿಕೆ ಅಥವಾ ಆಚಾರಗಳು ಪರಾಕಾಷ್ಠೆ ತಲುಪಿದರೆ ಆ ವಿಚಾರದ ವಿರುದ್ಧ ದಿಕ್ಕಿನಲ್ಲಿ ಬದುಕು ಸಾಗುತ್ತದೆ ಎಂಬುದಕ್ಕೆ ಗುರುಪ್ರಸಾದ್ ಉತ್ತಮ ನಿದರ್ಶನ. ದೇವರು ದೆವ್ವಗಳೆಂಬ ಆಸ್ತಿಕವಾದ ಮನುಷ್ಯನನ್ನು ಜೀವನ ಭಯಕ್ಕೆ ತಳ್ಳಿ ಆತನಲ್ಲಿರುವ ಎಲ್ಲ ಕ್ರಿಯಾಶೀಲತೆಯನ್ನು ಕೊಲ್ಲುತ್ತದೆ ಎಂಬುದು ಗುರುಪ್ರಸಾದ್ ನಂಬಿಕೆ. ಈ ಭೂಮಿಮೇಲೆ ಹುಟ್ಟಿರುವ ನಾವು ಬದುಕಿದ್ದಷ್ಟು ದಿನ ಏನನ್ನಾದರೂ ಸಾಧಿಸಿ 'ನಮ್ಮದು' ಅಂತಾ ಏನಾದರೂ ಉಳಿಸಿಹೋಗಬೇಕು ಅನ್ನೋ ಫಿಲಾಸಫಿ 'ಶ್ರೀ ಮಠ'ದ ಈ 'ಗುರು'ಗಳದ್ದು.

ಮಠ ಸೇರಿದ ಗುರು

ಹೀಗೆ ತಾನಂದುಕೊಂಡಂತೆಯೇ ಚಿತ್ರರಂಗಕ್ಕೆ ಬಂದ ಗುರುಪ್ರಸಾದ್‌ಗೆ ಸ್ವತಂತ್ರವಾಗಿ ಚಿತ್ರ ನಿರ್ದೇಶಿಸುವ ಅವಕಾಶವೂ ಸಿಕ್ಕಿತು. ಅದಾಗಲೇ ಭಯಂಕರ ಸೋಲಿನಿಂದ ಸೊರಗಿ ಕೂತಿದ್ದ ಉಪೇಂದ್ರ ನಟಿಸಬೇಕಿದ್ದ 'ಸಿಎಂ' ಎಂಬ ಚಿತ್ರವನ್ನು ಆರಂಭಿಸಿದರು. ಆದರ ಸ್ಕ್ರಿಪ್ಟ್ ಮುಗಿಸಿ ಫೋಟೋ ಶೂಟ್ ಆರಂಭಿಸಿದಾಗ ಉಪೇಂದ್ರ 'ಎಲ್ಲಾ ನನ್ನಿಷ್ಟದಂತೇ ಆಗಬೇಕು' ಎಂಬ ನಖರಾ ಆರಂಭಿಸಿದರಂತೆ. ಇದರಿಂದ ಬೇಸರಗೊಂಡ ಗುರು "ನಾನು ಈ ಚಿತ್ರದ ನಿರ್ದೇಶಕನಾಗಬೇಕೇ ಹೊರತು ಅಸಿಸ್ಟೆಂಟ್ ಡೈರೆಕ್ಟರ್ ಅಲ್ಲ. ನನ್ನ ಆರು ತಿಂಗಳ ಶ್ರಮ ಹಾಳಾದರೂ ಪರವಾಗಿಲ್ಲ, ನನಗೆ ಈ ಪ್ರಾಜೆಕ್ಟ್ ಸಹವಾಸ ಮಾತ್ರ 'ಬೇಡ' ಎಂದು ಅದರಿಂದ ಹೊರಬಂದರು.

ವ್ಯವಸ್ಥೆಯ ಅಂಕುಡೊಂಕುಗಳನ್ನೇ ತನ್ನ ಚಿತ್ರಗಳ ಬಂಡವಾಳವನ್ನಾಗಿಸಿಕೊಂಡ ಗುರುಪ್ರಸಾದ್, ತಮ್ಮ ಸಂಭಾಷಣೆಗಳಲ್ಲಿ ಮೊನಚಾದ ವಿಡಂಬನೆಯನ್ನು ಬೆರೆಸುವ ಹೊಸ ತಲೆಮಾರಿನ ನಿರ್ದೇಶಕ. ಆರೆಸ್ಸೆಸ್‌ನವರ ದೊಗಳೆ ಚೆಡ್ಡಿಗೂ, ಬಿಜೆಪಿಯವರ ಲೈಂಗಿಕ ಹಗರಣಗಳಿಗೂ ಅಮೋಘ ಸಂಬಂಧ ಕಲ್ಪಿಸುವ ಚತುರ ಮಾತುಗಾರ. ಅಷ್ಟೇ ಅಲ್ಲದೆ ಈತ ಉತ್ತಮ ಬರಹಗಾರರೂ ಹೌದು. ಇವರು ಈ ಹಿಂದೆ 'ರೂಪತಾರಾ' ಎಂಬ ಸಿನಿಮಾ ಪತ್ರಿಕೆಯ ಅಂಕಣಕಾರರೂ ಆಗಿದ್ದರು. ಇವರೇ ಬರೆದಿರುವ 'ಗುರುಪ್ರಸಾದನ ಸಿನಿಮಾ ಮಾಡಲಾಗದ ಕಥೆಗಳು' ಎಂಬ ಕಥಾಸಂಕಲನವೂ ಇಷ್ಟರಲ್ಲೇ ಬಿಡುಗಡೆಯಾಗುತ್ತಿದೆ.

ಹೀಗೆ ಉಪೇಂದ್ರರ ಅಧಿಕಪ್ರಸಂಗಿ ಬುದ್ಧಿಯಿಂದ ಗುರುಪ್ರಸಾದ್ ನಿರ್ದೇಶಕನಾಗುವ ಬಯಕೆಗೆ ಮೊದಲ ಹಂತದಲ್ಲೇ ಕಲ್ಲು ಬಿತ್ತು, ಆದರೂ ಧೃತಿಗೆಡದ ಗುರುಪ್ರಸಾದ್ ನಂತರ ಶುರು ಮಾಡಿದ್ದು 'ಮಠ' ಚಿತ್ರವನ್ನು. ಮೊದಲಿನಿಂದಲೂ ಜಗ್ಗೇಶ್‌ರ ಅಭಿಮಾನಿಯಾದ ಗುರುವಿಗೆ ಹೇಗಾದರೂ ಮಾಡಿ ಜಗ್ಗೇಶರಲ್ಲಿರುವ ಪ್ರತಿಭೆಯನ್ನು ಸಂಪೂರ್ಣವಾಗಿ ಹೊರತೆಗೆಯಬೇಕು ಎಂಬ ಮಹದಾಶೆಯಂತೆ. ಗುರುಪ್ರಸಾದರ ಈ ಪ್ರಯತ್ನ ಮತ್ತು ಶ್ರಮಕ್ಕೆ ಮೋಸವಾಗಲಿಲ್ಲ, ಅಂದುಕೊಂಡಂತೆಯೇ ಜಗ್ಗೇಶರ ನೂರನೇ ಚಿತ್ರವಾದ 'ಮಠ' ವಿಭಿನ್ನವಾಗಿ ಮೂಡಿಬಂತು. ಗುರುಪ್ರಸಾದ್‌ರಿಗೆ ಉದ್ಯಮದಿಂದ 'ಒಳ್ಳೆಯ ನಿರ್ದೇಶಕ' ಎಂಬ ಸರ್ಟಿಫಿಕೇಟೂ ದೊರಕಿತು.

ಹೀಗೆ 'ಮಠ'ದಿಂದ ಎದ್ದು ಬಂದ ಗುರುಪ್ರಸಾದ್ ಈಗ 'ಮಂಜುನಾಥ'ನನ್ನು ಎದ್ದೇಳಿಸುವ ಪ್ರಯತ್ನದಲ್ಲಿದ್ದಾರೆ. ಈ ಮಧ್ಯೆ ಅತ್ತ ಜಗ್ಗೇಶ್ ತುರುವೇಕೆರೆಯಿಂದ ಚುನಾವಣೆಯಲ್ಲಿ ಸ್ಪರ್ಧಿಸಿದ್ದರಿಂದ ಇತ್ತ ಗುರುಪ್ರಸಾದರಿಗೆ 'ಕಳ್ ಮಂಜ, ಸುಳ್ ಮಂಜ, ದುರಹಂಕಾರದ ಪೋಲಿ ಮಂಜ'ರನ್ನು ಎದ್ದೇಳಿಸುವುದು ಸ್ವಲ್ಪ ತಡವಾಗಿದೆ. ಸದ್ಯ 'ಮಂಜುನಾಥ' ಚಿತ್ರೀಕರಣವನ್ನು ಮುಗಿಸಿ ಗಣೇಶನ ಹಬ್ಬಕ್ಕೆ ಬರುವ ಸಿದ್ಧತೆಯಲ್ಲಿದ್ದಾರೆ. ಆದಷ್ಟು ಬೇಗ ಮಂಜುನಾಥ ಎದ್ದೇಳಲಿ, ಗುರುಪ್ರಸಾದ್ ಚಿತ್ರರಂಗದಲ್ಲಿ ಗಟ್ಟಿಯಾಗಿ ನಿಲ್ಲಲಿ ಎಂಬುದೇ ಹಾರೈಕೆ.

■ ಅರುಣ್.ಬಿ




ಗುರು ತಾಳಕ್ಕೆ ನಾಣಿಯ ತಬಲಾ

ಗುರುಪ್ರಸಾದ್ ಸಿನಿಮಾ ಕೆಲಸಗಳಲ್ಲಿ ಅವರೊಂದಿಗೆ ಕೈಜೋಡಿಸಿರುವವರು ತಬಲಾ ನಾಣಿ ಎಂಬ ಪ್ರತಿಭೆ. ರಂಗಭೂಮಿ ಹಿನ್ನಲೆಯೊಂದಿಗೆ ತನ್ನ ಆರ್ಕೆಸ್ಟ್ರಾ ತಂಡವನ್ನೂ ಹೊಂದಿರುವ ನಾಣಿ, ಗುರು ಜೊತೆ ಸಿನಿಮಾದ ಎಲ್ಲ ಹಂತದಲ್ಲೂ ಹೆಗಲಿಗೆ ಹೆಗಲು ಕೊಟ್ಟು ದುಡಿಯುತ್ತಾರೆ. 'ಮಠ' ಚಿತ್ರದಲ್ಲಿ ವೇಣುಗೋಪಾಲ ಅಲಿಯಾಸ್ ಪ್ಯಾಕೆಟ್ ಪಾತ್ರದಲ್ಲಿ ಫುಲ್ ಟೈಟಾಗಿ ಕಾಣಿಸಿಕೊಂಡಿದ್ದ ನಾಣಿ ಉತ್ತಮ ನಟ ಎಂಬುದು ಈಗಾಗಲೇ ಸಾಬೀತಾಗಿದೆ. 'ಎದ್ದೇಳು ಮಂಜುನಾಥ'ದಲ್ಲೂ ಜಗ್ಗೇಶ್‌ಗೆ ಸರಿಸಮನಾದ ಪಾತ್ರ ನಾಣಿ ಅವರಿಗೆ ನೀಡಿದ್ದಾರೆ ಗುರು.

ಬೇಡಿಕೆಯಲ್ಲಿರುವ ಬಾಬುಗಳು

ಹೀರೋಗಳೇ ಪ್ರಧಾನವಾಗಿರುವ ಚಿತ್ರರಂಗದಲ್ಲಿ ಅಪರೂಪಕ್ಕೊಮ್ಮೆ ನಿರ್ದೇಶಕರೂ ಸುದ್ದಿ ಮಾಡುತ್ತಾರೆ. ಸದ್ಯಕ್ಕೆ ಹಾಗೆ ಸುದ್ದಿ ಮಾಡುತ್ತಿರುವವರು ಇಬ್ಬರು 'ಬಾಬು'ಗಳು. ಅವರು ಮಲೆಯಾಳಿ ದಿನೇಶ್ ಬಾಬು ಮತ್ತು ಕನ್ನಡಿಗ ರಾಜೇಂದ್ರ ಸಿಂಗ್ ಬಾಬು.


ಈ ದಿನೇಶ್ ಬಾಬು ಮೊನ್ನೆ ತಾನೇ ರಮೇಶ್ ನಿರ್ದೇಶನದ 'ಆಕ್ಸಿಡೆಂಟ್' ಚಿತ್ರದಲ್ಲಿ ಇನ್ಸ್‌ಪೆಕ್ಟರ್ ಪಾತ್ರದಲ್ಲಿ ನಟಿಸಿ ಸೈ ಅನ್ನಿಸಿಕೊಂಡಿದ್ದರು. ಅಂದಹಾಗೆ ಅವರು ಚಿತ್ರರಂಗದಲ್ಲಿ ಹಲವಾರು ವರ್ಷಗಳಿಂದ ಇದ್ದರೂ ತಮ್ಮ ಮುಖಕ್ಕೆ ಬಣ್ಣ ಹಚ್ಚಿ ನಟಿಸಿದ್ದು ಅದೇ ಮೊದಲ ಬಾರಿ.



ಅದಾದನಂತರ ಅವರು ಶಿವಧ್ವಜ್ ನಿರ್ದೇಶನದ 'ನೀನೇ ನೀನೇ' ಚಿತ್ರಕ್ಕೆ ಕ್ಯಾಮರಾಮೆನ್ ಆಗಿ ಕೆಲಸ ಮಾಡಿದರು. ಈ ಚಿತ್ರ ಬಿಡುಗಡೆಯಾಗುತ್ತಿದ್ದಂತೆ, ಎರಡು ವರ್ಷಗಳಿಂದ ಡಬ್ಬಾದಲ್ಲಿ ಕೊಳೆಯುತ್ತಿದ್ದ ದಿನೇಶ್ ಬಾಬು ನಿರ್ದೇಶನದ 'ಆಕಾಶ ಗಂಗೆ' ತೆರೆಕಂಡಿತು. ಚಿತ್ರ ಬಾಕ್ಸಾಫೀಸಿನಲ್ಲಿ ಮುಗ್ಗರಿಸಿದರೂ ಬಾಬು ಕೆಲಸದ ಬಗ್ಗೆ ಎಲ್ಲರೂ ಭೇಷ್ ಎಂದರು.

ಈ ಮಧ್ಯೆ ಅವರ ನಿರ್ದೇಶನದಲ್ಲಿ ಲೌವ್ಲಿ ಸ್ಟಾರ್ ಪ್ರೇಮ್ ಅಭಿನಯದ 'ಜನುಮದ ಗೆಳತಿ' ಮುಕ್ತಾಯ ಹಂತಕ್ಕೆ ತಲುಪಿದೆ. ಸದ್ಯದಲ್ಲೇ ದಿನೇಶ್ ಬಾಬು ನಿರ್ದೇಶನದಲ್ಲಿ ಸಾಹಸ ಸಿಂಹ ವಿಷ್ಣುವರ್ಧನ್ ಮತ್ತೆ ನಟಿಸುವ ಸುದ್ದಿ ಹೊರಬಿದ್ದಿದೆ.

ಹೀಗೆ ನಟನೆ, ನಿರ್ದೇಶನ, ಛಾಯಾಗ್ರಹಣದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ದಿನೇಶ್ ಬಾಬು ಇತ್ತೀಚೆಗೆ ಕನ್ನಡ ಮಾತಾಡುವುದನ್ನೂ ಕಲಿಯಲಾರಂಭಿಸಿದ್ದಾರೆ ಎನ್ನುವುದು ಮತ್ತೊಂದು ಸಮಾಧಾನದ ಸಂಗತಿ!



ಮಲೆಯಾಳಿ ಬಾಬು ಕಥೆ ಇದಾದರೆ, ಕನ್ನಡದ ರಾಜೇಂದ್ರಸಿಂಗ್ ಬಾಬು ಬೇರೆ ರೀತಿಯಲ್ಲಿ ಸುದ್ದಿಯಲ್ಲಿದ್ದಾರೆ. ಅವರ ಪಾಲುದಾರಿಕೆಯಲ್ಲಿ ತಯಾರಾಗಿರುವ ಮೂರು ಚಿತ್ರಗಳು ಈಗ ಸಂಪೂರ್ಣವಾಗಿದ್ದು ಬಿಡುಗಡೆಗೆ ಸಿದ್ಧಗೊಂಡಿವೆ. ಒಂದು ಬಾಬು ನಿರ್ಮಿಸಿ, ನಿರ್ದೇಶಿಸಿರುವ 'ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್', ಇನ್ನೊಂದು ಚಿತ್ರ ನಿರ್ದೇಶಿಸಿರುವ 'ತಿಪ್ಪಾರಳ್ಳಿಯ ತರ್ಲೆಗಳು', ಮತ್ತೊಂದು ಅವರ ಪಟ್ಟದ ಶಿಷ್ಯ ರಾಮ್‌ನಾಥ್ ಋಗ್ವೇದಿ ನಿರ್ದೇಶಿಸಿರುವ, ಉಪೇಂದ್ರ ನಟಿಸಿರುವ 'ಬುದ್ಧಿವಂತ' ಇವೆಲ್ಲ ಸಂಪೂರ್ಣಗೊಂಡಿದ್ದು ಬಿಡುಗಡೆಗೆ ರೆಡಿಯಾಗಿವೆ.

ಇಲ್ಲಿ ವಿಶೇಷವೆಂದರೆ ಒಂದು ಮಕ್ಕಳ ಚಿತ್ರ, ಇನ್ನೊಂದು ಕಾಮಿಡಿ; ಮತ್ತೊಂದು ಕಮರ್ಷಿಯಲ್ ಚಿತ್ರ. ಈ ಮಧ್ಯೆ ಇನ್ನೆರಡು ತಿಂಗಳಲ್ಲೇ ಪೂರ್ಣಚಂದ್ರ ತೇಜಸ್ವಿಯವರ 'ಕೃಷ್ಣೇಗೌಡನ ಆನೆ' ಕಾದಂಬರಿಯನ್ನೂ ಚಿತ್ರ ಮಾಡಿ ಕಲಾತ್ಮಕ ವಲಯಕ್ಕೂ ಎಂಟ್ರಿ ಕೊಡಲಿದ್ದಾರೆ. ಆದರೆ ಅದಕ್ಕೂ ಮುನ್ನ ಮುಂದಿನ ವಾರ ತಮ್ಮ ಮಗ ಆದಿತ್ಯನನ್ನು ಹಾಕಿಕೊಂಡು 'ರಕ್ತಾಕ್ಷ' ಎಂಬ ಥ್ರಿಲ್ಲರ್ ಚಿತ್ರವನ್ನು ಕೈಗೆತ್ತಿಕೊಳ್ಳಲಿದ್ದಾರೆ. ಬಾಬು ಅವರ ಈ ಎಲ್ಲಾ ಸಾಹಸಗಳಿಗೆ ನಿರ್ಮಾಪಕನಾಗಿ ಹೆಗಲಿಗೆ ಹೆಗಲು ಕೊಡುತ್ತಿರುವ ಮೋಹನ್ ಕೊಡುಗೆಯನ್ನು ಅಭಿನಂದಿಸಲೇಬೇಕು.

ಚಿತ್ರರಂಗದಲ್ಲಿ ನಿರ್ದೇಶಕನನ್ನು 'ಕ್ಯಾಪ್ಟನ್ ಆಫ್ ದಿ ಶಿಪ್' ಎನ್ನುತ್ತಾರೆ. ಅವರಿಬ್ಬರೂ ತಕ್ಕಂತೆ ಇದರಿಂದಲೂ ಇಷ್ಟೊಂದು ಕ್ರಿಯಾಶೀಲರಾಗಿರುವುದು ಸಂತೋಷದ ವಿಷಯವೇ ಸರಿ.

■ ತೇಜಸ್ವಿ

ಚಾರ್ಮ್ ಇಲ್ಲದ ಚಾರುಲತೆ



ಸುಮಾರು ನಾಲ್ಕೂವರೆ ವರ್ಷಗಳ ಅಜ್ಞಾತವಾಸದ ನಂತರ ಚಾರುಲತಾ ಎಂಬ ಮಲೆಯಾಳಿ ಕುಟ್ಟಿ ಮತ್ತೆ ಕನ್ನಡ ಚಿತ್ರರಂಗದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಅವರು ನಟಿಸಿರುವ 'ಪಲ್ಲವಿ ಇಲ್ಲದ ಚರಣ' ಇನ್ನೇನು ಬಿಡುಗಡೆಯಾಗಲಿದೆ.

ಈ ಮಧ್ಯೆ ಆಕೆ ಒಂದೆರಡು ಸುತ್ತು ದಪ್ಪಗಾಗಿದ್ದರೂ ಯಾವುದೇ ಮುಲಾಜಿಲ್ಲದೆ ಆಕೆಗೆ ಇಲ್ಲಿ ಅವಕಾಶ ಸಿಕ್ಕಿದೆ. ನಮ್ಮ ಪ್ರತಿಭಾವಂತ ಕನ್ನಡತಿಯರಾದ ಸುಧಾರಾಣಿ, ಪ್ರೇಮಾ ಮೊದಲಾದವರು ಈಗಲೂ ಬಳುಕುವ ಬಳ್ಳಿಗಳಂತೆ ತಮ್ಮ ಮೈಕಟ್ಟನ್ನು ಉಳಿಸಿಕೊಂಡಿದ್ದರೂ ಅವರಿಗೆ ಅವಕಾಶ ನೀಡದ ಗಾಂಧಿನಗರದವರು ಈ ಮಲೆಯಾಳಿ ಡುಮ್ಮಿಯನ್ನು ಮಾತ್ರ ಮತ್ತೆ ಕರೆತಂದಿದ್ದಾರೆ ಎಂದರೆ ಅವರಿಗೆ ಏನೆನ್ನಬೇಕು? ಇಷ್ಟಾಗಿಯೂ ದುಬಾರಿ ಬೆಲೆ ಕೊಟ್ಟು ಇಂಪೋರ್ಟ್ ಮಾಡುವಷ್ಟು ಈ ಚಾರುಲತಾ ಪ್ರತಿಭಾವಂತೆಯೇನಲ್ಲ.

ಎಷ್ಟೇ ಆಗಲಿ, ಕನ್ನಡ ಸಿನಿಮಾ ನಿರ್ಮಾಪಕರಿಗೆ ನಮ್ಮ ಮನೆಯಂಗಳದ ಹೂವುಗಳಿಗಿಂತ ಪಕ್ಕದ ಮನೆಯ ಕಳೆಯೇ ಸುಂದರವಾಗಿ ಕಾಣುವುದು ದುರಂತ.



ಪುನೀತ್ power

ಕನ್ನಡ ಚಿತ್ರರಂಗದಲ್ಲಿ ಗೋಲ್ಡನ್ ಸ್ಟಾರ್ ಗಣೇಶನ ಹವಾವನ್ನು ಸಮರ್ಥವಾಗಿ ಎದುರಿಸಿರುವ ಮತ್ತೋರ್ವ ನಾಯಕ ನಟನೆಂದರೆ ಅದು ಪುನೀತ್ ರಾಜ್‌ಕುಮಾರ್.

ಈ ವರ್ಷವೂ ಪುನೀತ್ ರಾಜ್‌ಕುಮಾರ್ ತುಂಬಾ ಜಾಗರೂಕತೆಯಿಂದ ತನ್ನ ಕೆರಿಯರ್ ಗ್ರಾಫ್‌ಅನ್ನು ಪ್ಲಾನ್ ಮಾಡಿಕೊಂಡಿದ್ದಾರೆ. ಉದಾಹರಣೆಗೆ 'ಮಿಲನ'ದ ಯಶಸ್ಸಿನ ನಂತರ ಮತ್ತೆ ಪ್ರಕಾಶ್‌ಗೆ ತಮ್ಮ ಕಾಲ್‌ಶೀಟ್ ನೀಡಿದ್ದಾರೆ. ಆದಾದ ನಂತರ 'ಜೋಗಿ' ಚಿತ್ರದ ಮುಖಾಂತರ ಸ್ಟಾರ್ ನಿರ್ದೇಶಕ ಎಂದೆನಿಸಿಕೊಂಡಿದ್ದ ಪ್ರೇಮ್‌ಗೆ ಈ ಪವರ್ ಸ್ಟಾರ್ ಕಾಲ್‌ಶೀಟ್ ನೀಡಿದ್ದಾರೆ. 'ಪ್ರೀಏಭೂಮೇ' ಚಿತ್ರ ಬಾಕ್ಸಾಫೀಸಿನಲ್ಲಿ ಮುಗ್ಗರಿಸಿದರೂ ಆತನಲ್ಲಿನ್ನೂ ನಿರ್ದೇಶನದ ಪವರ್ ಇದೆ ಎಂಬುದನ್ನು ಪುನೀತ್ ಗುರುತಿಸಿದ್ದಾರೆ. ಇವೆರಡು ಚಿತ್ರಗಳ ನಂತರ 'ಮುಂಗಾರು ಮಳೆ' ಮತ್ತು 'ಗಾಳಿಪಟ'ದ ಯಶಸ್ವಿ ನಿರ್ದೇಶಕ ಯೋಗರಾಜ್ ಭಟ್ ನಿರ್ದೇಶನದ ಚಿತ್ರದಲ್ಲಿ ಪುನೀತ್ ಕಾಣಿಸಿಕೊಳ್ಳಲಿದ್ದಾರೆ. ಈ ಚಿತ್ರದ ಹೆಸರು 'ಲಗೋರಿ'.

ಅಂದರೆ ಈ ಮೂರೂ ಚಿತ್ರಗಳ ನಿರ್ದೇಶಕರು ಈಗಾಗಲೇ ತಮ್ಮ ತಮ್ಮ ಪ್ರತಿಭೆಯನ್ನು ತೋರಿದವರೇ ಆಗಿದ್ದಾರೆ. ಗೋಲ್ಡನ್ ಸ್ಟಾರ್ ಗಣೇಶ್ ತನ್ನ ಗೆಳೆಯರೆಂಬ ಕಾರಣಕ್ಕೆ ಹೊಸಬರಿಗೆಲ್ಲಾ ಕಾಲ್‌ಶೀಟ್ ನೀಡುತ್ತಿದ್ದರೆ, ಪುನೀತ್ ಮಾತ್ರ ಪಕ್ಕಾ ಪ್ರೊಫೆಷನಲ್ ಆಗಿ ಮುಂದುವರೆಯುತ್ತಿದ್ದಾರೆ. ತಾನೇನಿದ್ದರೂ ನಿರ್ದೇಶಕರ ನಟ ಎಂದು ಪದೇಪದೇ ಪುನೀತ್ ಮಂತ್ರಿಸುತ್ತಲೇ ಇದ್ದಾರೆ.



ಕಿತ್ತೂರವ್ವನ ಕೊಳಕು ಮಾತುಗಳು!



ಕಣಗಾಲ್ ಪುಟ್ಟಣ್ಣನವರು ಕಣ್ಮರೆಯಾಗಿ ಸರಿಸುಮಾರು 26 ವರ್ಷಗಳು ಜರುಗಿದ ನಂತರ ಕನ್ನಡ ಚಿತ್ರರಂಗದಲ್ಲಿ ಲೇಡಿ ಕಣಗಾಲ್ ಒಬ್ಬಳು ಜನ್ಮವೆತ್ತಿದ್ದಾಳೆ. ಅಂದರೆ ಈಕೆ ಪುಟ್ಟಣ್ಣನವರಷ್ಟು ಪ್ರತಿಭಾವಂತೆ ಅಂತ ನಾವು ಹೇಳುತ್ತಿಲ್ಲ. ಬದಲಾಗಿ ತಾನು ಪುಟ್ಟಣ್ಣನವರ ಪುನರಾವತಾರ ಅಂತ ಭಾವಿಸಿ ಅವರಂತೆ ಚಿತ್ರತಂಡದವರನ್ನು ಎಗ್ಗಿಲ್ಲದೆ ಅಪ್ಪಟ ಸಂಸ್ಕೃತದಲ್ಲಿ ಉಗಿಯುತ್ತಾಳಂತೆ ಎಂದಷ್ಟೇ ನಾವು ಇಲ್ಲಿ ಹೇಳಲು ಹೊರಟಿರುವುದು.

ಈ ಹೆಣ್ಣು ಪುಟ್ಟಣ್ಣ ಬೇರೆ ಯಾರೂ ಅಲ್ಲ, ಹೇಳಿ ಕೇಳಿ 'ಸ್ಲಂ ಬಾಲ' ಎಂಬ ರೌಡಿ ಚಿತ್ರವನ್ನು ನಿರ್ದೇಶಿಸುತ್ತಿರುವ ಮಾಜಿ ಪತ್ರಕರ್ತೆ ಸುಮನಾ ಕಿತ್ತೂರ್.

ಈಕೆ ಇಲ್ಲಿಯವರೆಗೆ ಒಂದೇ ಒಂದು ಚಿತ್ರವಿರಲಿ, ಒಂದು ಟಿವಿ ಧಾರಾವಾಹಿಯ ಎಪಿಸೋಡನ್ನೂ ನಿರ್ದೇಶಿಸಿಲ್ಲ. ಆಕೆಯ ಸಾಮರ್ಥ್ಯ ಏನೆಂದು ಯಾರಿಗೂ ಗೊತ್ತಾಗಿಲ್ಲ. ಆದರೆ ತಿಮಿರಿಗೆ ಮಾತ್ರ ಏನೂ ಕಮ್ಮಿ ಇಲ್ಲ. ಅದಕ್ಕೆ 'ಸ್ಲಂ ಬಾಲ' ಚಿತ್ರದ ನಟನಟಿಯರನ್ನು, ತಂತ್ರಜ್ಞಾನ ವರ್ಗದವರನ್ನು, ಚಿತ್ರತಂಡದ ಇತರರನ್ನು ಈ ಯಮ್ಮ ಆಗಲೇ ತನ್ನ ಬಲಿಷ್ಠ ನಾಲಿಗೆಯಿಂದಲೇ ಹುರಿದು ಉಪ್ಪಿನಕಾಯಿ ಹಾಕಿದ್ದಾಳಂತೆ. ಮೊನ್ನೆ ತಾನೇ ಮುಂಬೈಯಿಂದ ಬೆಂಗಳೂರಿಗೆ ಹಿಂದಿರುಗಿದ ಆ ಚಿತ್ರದ ತಂಡ ಈ ಯಮ್ಮನಿಂದ ಬಿಡುಗಡೆ ಸಿಕ್ಕಿತಲ್ಲ ಎಂದು ನಿಟ್ಟುಸಿರು ಬಿಟ್ಟಿದೆ.

ಚಿತ್ರೀಕರಣದ ಸಮಯದಲ್ಲಿ ಈ ಕಿತ್ತೂರವ್ವಳ ಬೊಂಬಾಯಿ ಬಾಯಿ ಕಂಡು ನಿಬ್ಬೆರಗಾದ ಹಿರಿಯ ಚಿತ್ರೋದ್ಯಮಿ ಒಬ್ಬರು "ಹೀಗೆ ನಿಮ್ಮ ತಂಡದವರನ್ನು ಬಾಯಿಗೆ ಬಂದಂತೆ ಬೈಯ್ಯಬೇಡಿ. ನಿಮಗೆ ಮತ್ತು ಚಿತ್ರಕ್ಕೆ ಅದರಿಂದ ಒಳ್ಳೆಯದಾಗುವುದಿಲ್ಲ" ಎಂದು ಸೂಕ್ಷ್ಮವಾಗಿ ಸೂಚಿಸಲು ನೋಡಿದರೆ, ಈಕೆ ಏನಂದಳಂತೆ ಗೊತ್ತಾ? "ನಾನು ಈ ಚಿತ್ರದ ನಿರ್ದೇಶಕಿ. ನಾನು ಹೇಳಿದಂತೆ ಮಾಡುವುದು ಅವರ ಕೆಲಸ. ಅದು ನಿಮಗೂ ಅನ್ವಯಿಸುತ್ತೆ" ಅಂದಳಂತೆ! "ಹಾಳಾಗಿ ಹೋಗು". ಎಂದುಕೊಂಡು ಅವರು ಸುಮ್ಮನಾದರಂತೆ.

ಸುಮನಾ ಕಿತ್ತೂರ್‌ಳ ಇಂತಹ ಉದ್ಧಟತನಕ್ಕೆ ಕಾರಣ ಆಕೆಯ ಹಿಂದೆ ಇರುವ ಭೂಗತ ಲೋಕದ ತೋಳ್ಬಲ ಮತ್ತು ರಿಯಲ್ ಎಸ್ಟೇಟ್ ವ್ಯವಹಾರದ ಹಡಬೆ ದುಡ್ಡು ಎಂಬ ಮಾತು ಗಾಂಧಿನಗರದಲ್ಲಿ ಕೇಳಿಬರುತ್ತಿರುವುದು ವಿನಾಕಾರಣವಲ್ಲ!!

ಅಂದಹಾಗೆ, ಚಿತ್ರೀಕರಣ ಮುಗಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಅನುಭವಿ ಕ್ಯಾಮರಾಮನ್ ಎ.ಸಿ.ಮಹೇಂದರ್ "ಹೊಸಬರೊಂದಿಗೆ ಕೆಲಸ ಮಾಡುವುದು ತುಂಬಾ ಕಷ್ಟ" ಎಂದು ಹೇಳಿದ ಮಾತು ಮಾರ್ಮಿಕವಾಗಿತ್ತು. ಯಾಕೆಂದರೆ ಆ ಚಿತ್ರದಲ್ಲಿ ನಟಿಸಿರುವ ವಿಜಯ್ ಆಗಲೀ, ಶುಭಾ ಪೂಂಜಾ ಆಗಲೀ, ಶಶಿಕುಮಾರ್ ಆಗಲೀ, ಚಿತ್ರರಂಗಕ್ಕೆ ಹೊಸಬರಲ್ಲ. ಬದಲಾಗಿ ಚಿತ್ರದ ನಿರ್ದೇಶಕಿ ಸುಮನಾ ಕಿತ್ತೂರ್ ಒಬ್ಬಳೇ ಹೊಸಬಳು. ಅಂದರೆ ಮಹೇಂದರ್ ಹೇಳಿದ ಮಾತು ಈಕೆಯ ಬಗ್ಗೆಯಲ್ಲದೆ ಇನ್ಯಾರ ಬಗ್ಗೆ ಇದ್ದೀತು?

ತನ್ನೊಂದಿಗೆ ಕೆಲಸ ಮಾಡುವ ಚಿತ್ರ ತಂಡದವರಿಗೆ ಸೂಳೆ ಮಕ್ಕಳಾ, ಮಿಂಡ್ರಿಗೆ ಹುಟ್ಟಿದವರಾ ಎಂದೆಲ್ಲಾ ಈ ಕಿತ್ತೂರಮ್ಮ ಬೈಯ್ಯುತ್ತಿದ್ದುದ್ದನ್ನು ಈಗ ಅವರೆಲ್ಲ ಎಲ್ಲೆಡೆ ಬೇಸರದಿಂದ ಹೇಳಿಕೊಂಡು ತಿರುಗುತ್ತಿದ್ದಾರೆ. ನಿಜವಾದ ಪ್ರತಿಭೆ ಇದ್ದವರಿಗೆ ತಿಮಿರು ಇರುವುದಿಲ್ಲ ಎಂದು ಅರಿತರೆ ಆಕೆಗೇ ಒಳ್ಳೆಯದು.

ಸರೋಜಾದೇವಿಗೆ ಸಂದ ಗೌರವ

ಹಿರಿಯ ನಟಿ ಬಿ. ಸರೋಜಾ ದೇವಿಯವರಿಗೆ ಮತ್ತೊಮ್ಮೆ ರಾಷ್ಟ್ರಮಟ್ಟದ ಗೌರವ ದೊರಕಿದೆ. ಸ್ವಾತಂತ್ರ್ಯೋತ್ಸವದ ಅರವತ್ತನೇ ವರ್ಷಾಚರಣೆಯ ಅಂಗವಾಗಿ ಕೇಂದ್ರ ಸರ್ಕಾರವು ಭಾರತೀಯ ಚಿತ್ರರಂಗದ ನಾಲ್ವರಿಗೆ ಜೀವಮಾನದ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಿದೆ. ಈ ನಾಲ್ವರಲ್ಲಿ ಬಿ. ಸರೋಜಾದೇವಿಯೂ ಒಬ್ಬರು. ಇನ್ನುಳಿದ ಮೂವರು ಹಿಂದಿಯ ಹಿರಿಯ ನಟ ದಿಲೀಪ್ ಕುಮಾರ್, ಭಾರತದ ಕೋಗಿಲೆ ಎಂದೇ ಖ್ಯಾತರಾಗಿರುವ ಲತಾ ಮಂಗೇಶ್ಕರ್ ಮತ್ತು ಪ್ರಖ್ಯಾತ ನಿರ್ದೇಶಕ ತಪನ್ ಸಿನ್ಹಾ.

ಕನ್ನಡ, ತಮಿಳು, ಹಿಂದಿ, ತೆಲುಗು ಸೇರಿದಂತೆ ಸುಮಾರು ನೂರೆಂಭತ್ತು ಚಿತ್ರಗಳಲ್ಲಿ ಮನೋಜ್ಞ ಅಭಿನಯ ನೀಡಿರುವ ಸರೋಜಾದೇವಿಯವರು ಬೆಳ್ಳಿತೆರೆಗೆ ಕಾಲಿಟ್ಟಿದ್ದು 1955ರಲ್ಲಿ, ಹೊನ್ನಪ್ಪ ಭಾಗವತರ್ ನಿರ್ದೇಶನದ 'ಮಹಾಕವಿ ಕಾಳಿದಾಸ' ಇವರ ಮೊದಲ ಚಿತ್ರ. ಅಲ್ಲಿಂದಾಚೆಗೆ ಅವರು ಭಾರತೀಯ ಚಿತ್ರರಂಗದ ಘಟಾನುಘಟಿಗಳಾದ ಡಾ. ರಾಜ್‌ಕುಮಾರ್, ಎನ್.ಟಿ.ಆರ್, ಎಂ.ಜಿ.ಆರ್, ಶಿವಾಜಿ ಗಣೇಶನ್, ದಿಲೀಪ್ ಕುಮಾರ್, ಅಕ್ಕಿನೇನಿ ನಾಗೇಶ್ವರರಾವ್, ಜೆಮಿನಿ ಗಣೇಶನ್ ಮೊದಲಾದವರ ಜೊತೆ ನಾಯಕಿಯಾಗಿ ನಟಿಸುವಷ್ಟು ಎತ್ತರಕ್ಕೆ ಬೆಳೆದರು. ಹೀಗೆ ಕನ್ನಡದ ನಟಿಯೊಬ್ಬರು ಭಾರತೀಯ ಚಿತ್ರರಂಗದ ಇತಿಹಾಸದ ಭಾಗವಾಗುವಷ್ಟು ಪಾಪ್ಯುಲರ್ ಕೂಡಾ ಆದರು.

ಕನ್ನಡದಲ್ಲಿ 'ಕಿತ್ತೂರು ರಾಣಿ ಚೆನ್ನಮ್ಮ' ಚಿತ್ರದಲ್ಲಿ ಬ್ರಿಟಿಷರಿಗೆ ಸವಾಲೆಸೆಯುವ ಚೆನ್ನಮ್ಮನ ಪಾತ್ರದಲ್ಲಿ ಅದ್ಭುತವಾಗಿ ನಟಿಸಿ ಇಂದಿಗೂ ಜನಮನದಲ್ಲಿ ಅಚ್ಚಳಿಯದೆ ಉಳಿದಿದ್ದಾರೆ, ಅದರೊಂದಿಗೆ 'ಮಲ್ಲಮ್ಮನ ಪವಾಡ', 'ಬಬ್ರುವಾಹನ', 'ಮಂಗಳಸೂತ್ರ', 'ಭಾಗ್ಯವಂತರು', 'ತಾಯಿ-ತಂದೆ' ಮೊದಲಾದ ಚಿತ್ರದ ಪಾತ್ರಗಳು ನೆನಪಿನಲ್ಲುಳಿದಿವೆ. ಪದ್ಮಭೂಷಣ ಮತ್ತು ಪದ್ಮಶ್ರೀ ಪ್ರಶಸ್ತಿಯನ್ನೂ ಪಡೆದಿರುವ ಸರೋಜಾದೇವಿಯವರು ಈಗ ಮತ್ತೊಮ್ಮೆ ಕೇಂದ್ರ ಸರ್ಕಾರದ ಗೌರವಕ್ಕೆ ಪಾತ್ರರಾಗಿರುವುದು ಕನ್ನಡಿಗರ ಹೆಮ್ಮೆಯ ಸಂಗತಿ.



ಸಾಧಾರಣವಾಗಿ ಚಿಕ್ಕಪುಟ್ಟ ವಿಷಯಕ್ಕೆಲ್ಲಾ ಸ್ಪಂದಿಸುವ ಅಥವಾ ಸಂತೋಷಪಡುವ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮಾತ್ರ ಪ್ರತಿ ಬಾರಿಯೂ ಸರೋಜಾದೇವಿಯವರಿಗೆ ಪ್ರಶಸ್ತಿ ಬಂದಾಗ ಮಾತ್ರ ಮೌನವಾಗಿರುವುದು ನೋವಿನ ವಿಷಯ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, ...